

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಜುಲೈ 3 ಬುಧವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 78 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4



ಭೂ ಪರಿವರ್ತನೆ ಆಗದ ನಿವೇಶನಗಳ ಆರ್‌ಟಿಸಿ ಆಧರಿತ ಕ್ರಯ ನೋಂದಣಿ ರದ್ದು

ಮೈಸೂರಿನಲ್ಲಿ ಕಂದಾಯ ಸಚಿವ ಕೃಷ್ಣ ಭೈರೇಗೌಡ ಪ್ರಕಟ

- ಭೂ ಪರಿವರ್ತನೆ ಆಗದ ಶೇ.95ರಷ್ಟು ನಿವೇಶನ ಮಾರಾಟ
- ಒಂದೇ ನಿವೇಶನ ಎರಡು ಬಾರಿ ಮಾರಾಟ; ಅಕ್ರಮ ತಡೆಗೆ ಸರ್ಕಾರದ ದಿಟ್ಟ ನಿರ್ಧಾರ
- ಇನ್ನು ಮುಂದೆ ಅಕ್ರಮ ಬಡಾವಣೆ ನಿರ್ಮಾಣಕ್ಕೆ ತಡೆ



ಮೈಸೂರಿನ ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ಮಂಗಳವಾರ ಕಂದಾಯ ಸಚಿವ ಕೃಷ್ಣ ಭೈರೇಗೌಡ ಮೈಸೂರು ವಿಭಾಗದ ಕಂದಾಯ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

ಮೈಸೂರು, ಜು.2(ಬಿಎಲ್‌ಯು)– **ಭೂ ಪರಿವರ್ತನೆ ಆಗದ ಬಡಾವಣೆಗಳ ನಿವೇಶನಗಳನ್ನು ಆರ್‌ಟಿಸಿ ಆಧಾರದ ಮೇಲೆ ಕ್ರಯ ನೋಂದಣಿ ಮಾಡುವುದನ್ನು ರದ್ದು ಮಾಡಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಭೈರೇಗೌಡ ಪ್ರಕಟಿಸಿದ್ದಾರೆ.**

ಮೈಸೂರಿನ ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ಮಂಗಳವಾರ ಮೈಸೂರು ವಿಭಾಗದ ಕಂದಾಯ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಶೇ.5ರಷ್ಟು ಭೂ ಪರಿವರ್ತನೆ ಮೂಲಕ ನಿರ್ಮಾಣವಾಗಿರುವ ಭೂಮಿಯಲ್ಲಿನ ನಿವೇಶನಗಳು ಮಾರಾಟವಾಗಿದ್ದರೆ, ಶೇ.95ರಷ್ಟು ಭೂ ಪರಿವರ್ತನೆ ಆಗದ ಬಡಾವಣೆಯಲ್ಲಿ ಅಭಿವೃದ್ಧಿಪಡಿಸಿದ ನಿವೇಶನಗಳು ಆರ್‌ಟಿಸಿ ಆಧಾರದ ಮೇಲೆ ಕ್ರಯ ನೋಂದಣಿ ಆಗುತ್ತಿವೆ ಎಂದು ಹೇಳಿದರು. ಭೂ ಪರಿವರ್ತನೆ ಆಗದಿದ್ದರೂ ಆರ್‌ಟಿಸಿಯಲ್ಲಿ ಬಡಾವಣೆ ಎಂದು ಷರಾ ನಮೂದಿಸಲಾಗಿದೆ. ಇದರಿಂದ ಬಡಾವಣೆ ಹೆಸರು ಹಾಗೂ ಆರ್‌ಟಿಸಿ ಆಧಾರದ ಮೇಲೆ ಬೇರೆ ಬೇರೆಯವರಿಗೆ ಕ್ರಯ ನೋಂದಣಿ ಆಗುತ್ತಿದೆ. ಇದರಿಂದ ಒಂದೇ ನಿವೇಶನ ಎರಡೆರಡು ಬಾರಿ ಮಾರಾಟವಾಗುತ್ತಿದೆ. ಇದು ಸರ್ಕಾರದ ಲೆಕ್ಕಕ್ಕೂ ಸಿಗುತ್ತಿಲ್ಲ, ಜೊತೆಗೆ ದಾಖಲೆಗಳು ಒಂದಕ್ಕೊಂದು ತಾಳೆಯಾಗುತ್ತಿಲ್ಲ. ಇದರಿಂದ ಸರ್ಕಾರಕ್ಕೂ ಭಾರಿ ನಷ್ಟವಾಗುತ್ತಿದೆ ಎಂದು ಕೃಷ್ಣ ಭೈರೇಗೌಡ ತಿಳಿಸಿದರು. ಇಂತಹ ಅವ್ಯವಸ್ಥೆಯಿಂದ ಅಂತಿಮವಾಗಿ ಜನರು ಸಂಕಷ್ಟಕ್ಕೆ ಒಳಗಾಗುತ್ತಾರೆ. ಒಂದೇ ನಿವೇಶನ ಎರಡು ಬಾರಿ ಮಾರಾಟವಾದರೆ ಸಹಜವಾಗಿಯೇ ಖರೀದಿದಾರರು ನ್ಯಾಯಾಲಯದ ಮೊರೆ ಹೋಗುತ್ತಾರೆ. ಇನ್ನು ಮುಂದಾದರೂ ಸ್ಥಳೀಯ

● 6ನೇ ಪುಟಕ್ಕೆ

ಆಗಸ್ಟ್‌ನಿಂದ ಸರ್ಕಾರಿ ಭೂಮಿ ಒತ್ತುವರಿ ತೆರವು

ಮೈಸೂರು, ಜು.2(ಬಿಎಲ್‌ಯು)– ಸರ್ಕಾರಿ ಭೂಮಿ ಒತ್ತುವರಿ ತೆರವು ಕಾರ್ಯಾಚರಣೆಯನ್ನು ಆಗಸ್ಟ್ ತಿಂಗಳಿನಿಂದ ಆರಂಭಿಸಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಭೈರೇಗೌಡ ತಿಳಿಸಿದರು.

ಕೆರೆ, ಸ್ಮಶಾನ ಸೇರಿದಂತೆ ಒಟ್ಟು 14.50 ಲಕ್ಷ ಎಕರೆ ಸರ್ಕಾರದ ಸ್ಥಳಗಳಿವೆ. ಗ್ರಾಮ ಲೆಕ್ಕಿಗರು ಆ ಸ್ಥಳಕ್ಕೆ ಭೇಟಿ ನೀಡಿ ತಮಗೆ ನೀಡಿರುವ ಆ್ಯಪ್‌ನಲ್ಲಿ ಸರ್ಕಾರಿ ಜಾಗದ ಬಗ್ಗೆ ಮಾಹಿತಿಯನ್ನು ಅಪ್‌ಲೋಡ್ ಮಾಡಬೇಕು. ಜಾಗದ ಹೆಸರು, ವಿಸ್ತೀರ್ಣ ಸೇರಿದಂತೆ ಹಲವು ಮಾಹಿತಿಗಳನ್ನು ಆ್ಯಪ್‌ನಲ್ಲಿ ನೀಡಬೇಕು. ಜೊತೆಗೆ ಆ ಜಾಗದ ನಕ್ಷೆ ಕೂಡ ಗುರುತಿಸಬೇಕು. ಸರ್ಕಾರಿ ಜಾಗ ಒತ್ತುವರಿಯಾಗಿರುವ ಬಗ್ಗೆ ತಹಸೀಲ್ದಾರ್ ಮೂಲಕ ಜಿಲ್ಲಾಧಿಕಾರಿಗಳಿಗೆ ಮಾಹಿತಿ ನೀಡಬೇಕು ಎಂದರು. ಈಗಾಗಲೇ 9.70 ಲಕ್ಷ ಸರ್ಕಾರಿ ಸ್ಥಳಗಳ ಮಾಹಿತಿ ಕಲೆ ಹಾಕಲಾಗಿದೆ. ಉಳಿದ ಜಾಗಗಳ ಮಾಹಿತಿಯನ್ನು ಜುಲೈ ತಿಂಗಳಾಂತ್ಯಕ್ಕೆ ಕಲೆ ಹಾಕಲಾಗುವುದು. ಪೂರ್ಣ ಮಾಹಿತಿ ಸಂಗ್ರಹವಾದ ನಂತರ ಅಂಕಿ ಅಂಶಗಳ ಸಹಿತ ಯಾವ ಸರ್ಕಾರಿ ಭೂಮಿ ಒತ್ತುವರಿಯಾಗಿದೆ ಎಂಬ ಮಾಹಿತಿಯನ್ನು ಕಂದಾಯ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಜೊತೆಗೆ ಆಯಾ ಗ್ರಾಮ ಪಂಚಾಯಿತಿಗಳಿಗೂ ಕೂಡ ಮಾಹಿತಿ ನೀಡಲಾಗುವುದು ಎಂದು ಕೃಷ್ಣ ಭೈರೇಗೌಡ ತಿಳಿಸಿದರು. ತರುವಾಯ ಆಗಸ್ಟ್ ತಿಂಗಳಿನಿಂದ ಸರ್ಕಾರಿ ಭೂಮಿ ಒತ್ತುವರಿ ತೆರವು ಕಾರ್ಯಾಚರಣೆ ಆರಂಭಿಸಲಾಗುವುದು. ನಿಗದಿತ ಗಡುವಿನ ಒಳಗೆ ಈ ಕಾರ್ಯಾಚರಣೆ ಪೂರ್ಣಗೊಳಿಸಿ, ಸರ್ಕಾರಿ ಭೂಮಿ ಸಂರಕ್ಷಿಸಲಾಗುವುದು.

ರಾಜ್ಯದ 4 ಕೋಟಿ ಆರ್‌ಟಿಸಿ ಗಳಿಗೆ ಆಧಾರ್ ಜೋಡಣೆ ಕಾರ್ಯ ಈಗಾಗಲೇ ಆರಂಭಿಸ ಲಾಗಿದೆ. ಇದರಲ್ಲಿ 2 ಕೋಟಿ ಆರ್‌ಟಿಸಿಗಳಿಗೆ ಆಧಾರ್ ಜೋಡಣೆ ಮಾಡಲಾಗಿದೆ. ಇದನ್ನು ಕೂಡ ಜುಲೈ ಅಂತ್ಯಕ್ಕೆ ಪೂರ್ಣಗೊಳಿಸಲಾಗುವುದು. ಇದರಿಂದ ಯಾರು ಕೂಡ ಯಾರ ಆಸ್ತಿಯನ್ನು ನಕಲಿ ದಾಖಲಾತಿ ಸೃಷ್ಟಿಸಿ ಮಾರಾಟ ಮಾಡಲು ಸಾಧ್ಯವಾಗುವುದಿಲ್ಲ ಎಂದು ಹೇಳಿದರು. ರಾಜ್ಯದ 31 ಜಿಲ್ಲೆಗಳ ಪೈಕಿ 24 ಜಿಲ್ಲೆಗಳಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಿದೆ. ರಾಜ್ಯದಲ್ಲಿ ಒಟ್ಟಾರೆ 208 ಮಿಲಿ ಮೀಟರ್ ನಷ್ಟು ವಾಡಿಕೆ ಮಳೆಯ ನಿರೀಕ್ಷೆ ಇತ್ತು.

● 6ನೇ ಪುಟಕ್ಕೆ



ಅತಿವೃಷ್ಟಿ ವೇಳೆ ಅವಘಡ ತಡೆಯಲು ಟಾಸ್ಕ್‌ಫೋರ್ಸ್ ರಚನೆ

ಮೈಸೂರು, ಜು.2(ಬಿಎಲ್‌ಯು)– ಮೈಸೂರು ಸೇರಿದಂತೆ ರಾಜ್ಯದ 1763 ಗ್ರಾಮ ಪಂಚಾಯಿತಿಗಳಲ್ಲಿ ಅತಿವೃಷ್ಟಿಯಾದಾಗ ಅವಘಡಗಳನ್ನು ತಡೆಯಲು ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲು ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಒಳಗೊಂಡ ಟಾಸ್ಕ್‌ಫೋರ್ಸ್ ರಚಿಸಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಭೈರೇಗೌಡ ತಿಳಿಸಿದರು.

ಮೈಸೂರಿನ ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ಮಂಗಳವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಮ ಪಂಚಾಯಿತಿ ಕಂದಾಯಾಧಿಕಾರಿ, ಪಂಚಾಯತ್‌ರಾಜ್ ಇಲಾಖೆಯ ಇಂಜಿನಿಯರ್, ಅಗ್ನಿಶಾಮಕ ಇಲಾಖೆ, ಅಧಿಕಾರಿಗಳ ನಡುವೆ ಸಮನ್ವಯತೆ ಸಾಧಿಸಲು ನೋಡೆಲ್ ಅಧಿಕಾರಿಯೊಬ್ಬರನ್ನು ನಿಯೋಜಿಸಲಾಗುವುದು. ಅತಿವೃಷ್ಟಿಯಿಂದ ಅನಾಹುತವಾಗುವ ಸ್ಥಳಗಳನ್ನು ಗುರುತಿಸಿ ಟಾಸ್ಕ್‌ಫೋರ್ಸ್ ಮುಂಜಾಗ್ರತಾ ಕ್ರಮ ಕೈಗೊಳ್ಳಲಿದೆ ಎಂದರು. ಈ ಸಂಬಂಧ ಟಾಸ್ಕ್‌ಫೋರ್ಸ್ ತನ್ನ ಕಾರ್ಯಾಚರಣೆ ಕೈಗೊಳ್ಳುವ

● 6ನೇ ಪುಟಕ್ಕೆ







ಸಾವಿರಾರು ಕೋಟಿಯ ಮುಡಾ ಹಗರಣ; ಎಸ್‌ಐಟಿ ತನಿಖೆಗೆ ಶಾಸಕ ಟಿ.ಎಸ್.ಶ್ರೀವತ್ಸ ಆಗ್ರಹ

ಆರೋಪಿತ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಕೇಸು ದಾಖಲಿಸಿ; ಜೊತೆಗೆ ಅಮಾನತಿನಲ್ಲಿಡಿ...



ಟಿ.ಎಸ್.ಶ್ರೀವತ್ಸ

ಮೈಸೂರು, ಜು. 2(ಆರ್‌ಕೆ)–ಶೇ.50:50 ಅನುಪಾತದಡಿ ಮುಡಾ ನಿವೇಶನ ಹಂಚಿಕೆಯಲ್ಲಿ ನಡೆದಿರುವ ಸಾವಿರಾರು ಕೋಟಿ ರೂ. ಹಗರಣದಲ್ಲಿ ಭಾಗಿಯಾಗಿರುವ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ, ಅಮಾನತುಗೊಳಿಸುವಂತೆ ಕೆ.ಆರ್. ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಒತ್ತಾಯಿಸಿದ್ದಾರೆ.

ಮೈಸೂರು ಮಹಾನಗರ ಪಾಲಿಕೆಯ ತಮ್ಮ ಕಚೇರಿಯಲ್ಲಿ ಈ ಸಂಬಂಧ ಇಂದು ಸುದ್ದಿಗೋಷ್ಠಿ ನಡೆಸಿದ ಅವರು, ಈ ಬೃಹತ್ ಹಗರಣವನ್ನು ನಿವೃತ್ತ ನ್ಯಾಯಾಧೀಶರ ನೇತೃತ್ವದ ಸಮಿತಿ ಅಥವಾ ವಿಶೇಷ ತನಿಖಾ ತಂಡ (ಎಸ್‌ಐಟಿ)ದಿಂದ ತನಿಖೆ ನಡೆಸಿ, ಭಾಗಿಯಾಗಿರುವವರ ವಿರುದ್ಧ ಕಾನೂನು ರೀತಿಯ ಕ್ರಮ ಕೈಗೊಳ್ಳಬೇಕು ಎಂದರು. ನಿಯಮಬಾಹಿರವಾಗಿ ಸರ್ಕಾರದ ಆದೇಶವನ್ನೂ ಧಿಕ್ಕರಿಸಿ ಸಾವಿರಾರು ನಿವೇಶನಗಳನ್ನು ಹಂಚುವ ಮೂಲಕ ಪ್ರಾಧಿಕಾರಕ್ಕೆ

● 9ನೇ ಪುಟಕ್ಕೆ

ಮುಡಾ ಆಯುಕ್ತರಾಗಿ ಎ.ಎನ್. ರಘುನಂದನ್ ಅಧಿಕಾರ ಸ್ವೀಕಾರ

ವಿ.ಕೆ.ಪ್ರಸನ್ನಕುಮಾರ ನೂತನ ಕಾರ್ಯದರ್ಶಿ



ಎ.ಎನ್.ರಘುನಂದನ್

ಮೈಸೂರು, ಜು. 2(ಆರ್‌ಕೆ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ನೂತನ ಆಯುಕ್ತರಾಗಿ ನಗರಾಭಿವೃದ್ಧಿ ಇಲಾಖೆ ಉಪಕಾರ್ಯದರ್ಶಿ–2 ಕೆಎಎಸ್ (ಹಿರಿಯ ಶ್ರೇಣಿ) ಅಧಿಕಾರಿ ಎ.ಎನ್. ರಘುನಂದನ್ ಮಂಗಳವಾರ ಸಂಜೆ ಅಧಿಕಾರ ವಹಿಸಿಕೊಂಡಿದ್ದಾರೆ. ಮುಡಾ ನಿವೇಶನ ಹಂಚಿಕೆಯಲ್ಲಿ ಭಾರಿ ಹಗರಣದ ಆರೋಪದ ಹಿನ್ನೆಲೆಯಲ್ಲಿ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್ ಅವರನ್ನು ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ವರ್ಗಾವಣೆ ಮಾಡಿದ್ದರು. ಅದರ ಬೆನ್ನಲ್ಲೇ ಸರ್ಕಾರ ಇಂದು ಮುಡಾ ಆಯುಕ್ತರಾಗಿ ಎ.ಎನ್.ರಘುನಂದನ್ ಅವರನ್ನು ವರ್ಗಾವಣೆ ಮಾಡಿತ್ತು.

ಹಗರಣದ ಆರೋಪ ಎದುರಿಸುತ್ತಿರುವ ಜಿ.ಟಿ. ದಿನೇಶ್‌ಕುಮಾರ್ ಅವರಿಗೆ ಸ್ಥಳ ನಿಯೋಜನೆ ಮಾಡಿಲ್ಲ. ಇಂದು ಅವರನ್ನು ಕರ್ತವ್ಯದಿಂದ ಬಿಡುಗಡೆ ಮಾಡಲಾಗಿದೆ.

ವರ್ಗಾವಣೆ ಮಾಡಿರುವ ಕಾರ್ಯದರ್ಶಿ ಜಿ.ಡಿ.ಶೇಖರ್ ಅವರ ಹುದ್ದೆಗೆ ಬೆಂಗಳೂರಿನ ಕರ್ನಾಟಕ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರಾದ ಹಿರಿಯ ಶ್ರೇಣಿ ಕೆಎಎಸ್ ಅಧಿಕಾರಿ ವಿ.ಕೆ. ಪ್ರಸನ್ನ ಕುಮಾರ್ ಅವರನ್ನು ವರ್ಗಾವಣೆ ಮಾಡಲಾಗಿದ್ದು, ಅವರು ನಾಳೆ (ಜು. 3) ಅಧಿಕಾರ ವಹಿಸಿಕೊಳ್ಳುವರು ಎಂದು ಮೂಲಗಳು ತಿಳಿಸಿವೆ.

ಮೈಮುಲ್ ಅಧ್ಯಕ್ಷ ಸ್ಥಾನಕ್ಕೆ ಪಿ.ಎಂ.ಪ್ರಸನ್ನ ದಿಢೀರ್ ರಾಜೀನಾಮೆ

ಸಚಿವ ಕೆ.ವೆಂಕಟೇಶ್ ದ್ವೇಷ ರಾಜಕಾರಣಕ್ಕೆ ಬೇಸತ್ತು ಈ ನಿರ್ಧಾರ




ಪಿ.ಎಂ.ಪ್ರಸನ್ನ

ಮೈಸೂರು, ಜು.2(ಎಸ್‌ಬಿಡಿ)– ಮೈಸೂರು ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದ (ಮೈಮುಲ್) ಅಧ್ಯಕ್ಷ ಪಿ.ಎಂ.ಪ್ರಸನ್ನ ತಮ್ಮ ಸ್ಥಾನಕ್ಕೆ ದಿಢೀರ್ ರಾಜೀನಾಮೆ ನೀಡಿದ್ದಾರೆ. ಮೈಮುಲ್ ಪ್ರಭಾರ ಎಂಡಿ ಜಗದೀಶ್ ಅವರಿಗೆ ರಾಜೀನಾಮೆ ನೀಡಿದ್ದು, ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್ ಅವರ ಕಿರುಕುಳದಿಂದ ಬೇಸತ್ತು ಈ ನಿರ್ಧಾರ ಕೈಗೊಂಡಿದ್ದಾಗಿ ಪ್ರಸನ್ನ ಆರೋಪಿಸಿದ್ದಾರೆ.

ಪಿರಿಯಾಪಟ್ಟಣ ಕ್ಷೇತ್ರದಲ್ಲಿ ಕೆ.ವೆಂಕಟೇಶ್ ಹಾಗೂ ಕೆ.ಮಹದೇವ್ ಬದ್ಧ ಎದುರಾಳಿಗಳು. ಇವರ ನಡುವೆ ರಾಜಕೀಯ ಜಿದ್ದಾಜಿದ್ದಿ ಇದ್ದೇ ಇದೆ.

● 9ನೇ ಪುಟಕ್ಕೆ





ಮೈಸೂರು ಮಿತ್ರ ಬುಧವಾರ 3 ಜುಲೈ 2024

ಪ್ಲಾಸ್ಟಿಕ್ ಮುಕ್ತ ಮೈಸೂರಿಗಾಗಿ ಮನೆ ಮನೆಗೆ ಬಟ್ಟೆ ಬ್ಯಾಗ್ ವಿತರಣೆ



ಮೈಸೂರು ಪಾಲಿಕೆ ಆಯುಕ್ತ ಆಶಾದ್ ಉರ್ ರೆಹಮಾನ್ ಶರೀಫ್ ಮನೆ ಮನೆಗೆ ಬಟ್ಟೆ ಬ್ಯಾಗ್ ವಿತರಿಸಿ, ಪ್ಲಾಸ್ಟಿಕ್ ಮುಕ್ತ ಮೈಸೂರಿಗೆ ಸಹಕರಿಸಲು ಮನವಿ ಮಾಡಿದರು.

ಮೈಸೂರು, ಜು. 2– ಮನೆ ಮನೆಗೆ ಬಟ್ಟೆ ಬ್ಯಾಗ್ ವಿತರಿಸಿ, ಪ್ಲಾಸ್ಟಿಕ್ ಮುಕ್ತ ಮೈಸೂರಿಗೆ ಕೈಜೋಡಿಸಬೇಕೆಂದು ಸಾರ್ವಜನಿಕರಲ್ಲಿ ಮೈಸೂರು ಮಹಾನಗರ ಪಾಲಿಕೆಯ ಆಯುಕ್ತ ಆಶಾದ್ ಉರ್ ರೆಹಮಾನ್ ಶರೀಫ್ ಮನವಿ ಮಾಡಿದರು.

ಮೈಸೂರಿನ ಚಾಮುಂಡಿಪುರಂನಲ್ಲಿ ಕೆಎಂಪಿಕೆ ಟ್ರಸ್ಟ್ ಆಯೋಜಿಸಿದ್ದ ಅಂತರ ರಾಷ್ಟ್ರೀಯ ಪ್ಲಾಸ್ಟಿಕ್ ಚೀಲ ಮುಕ್ತದಿನ ಅಂಗವಾಗಿ ಮನೆ ಮನೆಗೆ ತೆರಳಿ ಪ್ಲಾಸ್ಟಿಕ್ ಬ್ಯಾಗ್ ತ್ಯಜಿಸಿ ಬಟ್ಟೆ ಬ್ಯಾಗ್ ಬಳಸಿ ಘೋಷ ವಾಕ್ಯದೊಂದಿಗೆ ಮನೆಗಳಿಗೆ ಬಟ್ಟೆ ಬ್ಯಾಗ್ ನೀಡುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ಪರಿಸರಕ್ಕೆ ಮಾರಕವಾಗಿರುವ ಪ್ಲಾಸ್ಟಿಕ್ ಬಳಕೆಯನ್ನು ಪ್ರತಿಯೊಬ್ಬರೂ ತ್ಯಜಿಸಬೇಕು. ಆ ಮೂಲಕ ಪ್ಲಾಸ್ಟಿಕ್‌ಮುಕ್ತ ನಗರ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದರು.

ಪ್ಲಾಸ್ಟಿಕ್ ನಿಷೇಧ ಹಾಗೂ ಪರಿಸರ ರಕ್ಷಣೆ ಜವಾಬ್ದಾರಿ ಕೇವಲ ಸರ್ಕಾರ ಹಾಗೂ ಸ್ಥಳೀಯ ಆಡಳಿತದ್ದು ಎಂಬ ಮನೋಭಾವದಿಂದ ಹೊರಬರಬೇಕು. ಸಾರ್ವಜನಿಕರು ತಮ್ಮ ಹೊಣೆ ಅರಿತು ಪರಿಸರ ರಕ್ಷಣೆಗೆ ಮುಂದಾಗಬೇಕು ಎಂದು ಮನವಿ ಮಾಡಿದರು.

ಪಾಲಿಕೆಯ ಆರೋಗ್ಯ ಅಧಿಕಾರಿ ಡಾ.ವೆಂಕಟೇಶ್ ಮಾತನಾಡಿ, ಪ್ಲಾಸ್ಟಿಕ್ ಬ್ಯಾಗುಗಳು ಹಾಗೂ ವಸ್ತುಗಳನ್ನು ಬಳಸುವುದನ್ನು ನಿಲ್ಲಿಸಿ ಸುಂದರ ಪರಿಸರ ನಿರ್ಮಿಸಿ. ದೈನಂದಿನ ಜೀವನದಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ತ್ಯಜಿಸಿ ಬಟ್ಟೆ, ಕಾಗದ ಹಾಗೂ ಇತರ ಪರಿಸರ ಸ್ನೇಹಿ ಕೈಚೀಲ ಬಳಸಿ ಪ್ಲಾಸ್ಟಿಕ್‌ನಿಂದ ಪರಿಸರವನ್ನು ದೂರವಿಡಿ. ಮುಂದಿನ ಪೀಳಿಗೆಗೆ ಪ್ಲಾಸ್ಟಿಕ್ ಮುಕ್ತ ಪರಿಸರ ಕೊಡುಗೆಯಾಗಿ ನೀಡಲು ಇಂದೇ ಶಪಥ ಮಾಡಿ. ನಿಮ್ಮ ಮನೆಯನ್ನು ಸಂಪೂರ್ಣ ಪ್ಲಾಸ್ಟಿಕ್ ಮುಕ್ತವಾಗಿ ಮಾಡಿ. ಇಂತಹ ಜಾಗೃತಿ ಕಾರ್ಯಕ್ರಮಗಳನ್ನು ನಗರದ ವಿವಿಧ ಸಂಘ ಸಂಸ್ಥೆಗಳು ಆಯೋಜಿಸುವಂತೆ ಮನವಿ ಮಾಡಿದರು

> “ಪ್ಲಾಸ್ಟಿಕ್ ಪರಿಸರಕ್ಕೆ ಮಾರಕ, ಭೂಮಿಯಲ್ಲಿ ಕೊಳೆಯದ ಪದಾರ್ಥವಿದು. ದಹಿಸಿದಾಗ ವಿಷಕಾರಕ ಅಂಶಗಳನ್ನು ಪರಿಸರಕ್ಕೆ ಬಿಡುಗಡೆ ಮಾಡುತ್ತದೆ. ಇದರಿಂದ ಕ್ಯಾನ್ಸರ್ ಸೇರಿ ಹಲವು ಮಾರಣಾಂತಿಕ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಪ್ರತಿಯೊಬ್ಬರು ಪ್ಲಾಸ್ಟಿಕ್ ಬಳಕೆಯನ್ನು ತ್ಯಜಿಸುವ ಸಂಕಲ್ಪ ಮಾಡಬೇಕು.
>
> –ಆಶಾದ್ ಉರ್ ರೆಹಮಾನ್ ಶರೀಫ್, ಪಾಲಿಕೆ ಆಯುಕ್ತ


ಈ ಸಂದರ್ಭದಲ್ಲಿ ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಮುತ್ತಣ್ಣ, ಅಜಯ್ ಶಾಸ್ತ್ರಿ, ವಲಯ ಆಯುಕ್ತ ಮಂಜುನಾಥ್ ರೆಡ್ಡಿ, ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಮೀನಾಕ್ಷಿ, ಮೈಸೂರು ನಗರ ಪಾಲಿಕೆ ಪರಿಸರ ಅಭಿಯಂತರಾದ ಜ್ಯೋತಿ, ಹಿರಿಯ ಆರೋಗ್ಯ ನಿರೀಕ್ಷಕರಾದ ಶಿವಪ್ರಸಾದ್, ಕಿರಿಯ ಆರೋಗ್ಯ ನಿರೀಕ್ಷಕರಾದ ಪ್ರೀತಿ, ರೇಣುಕಾರಾಜ್, ವಿನಯ್ ಕಣಗಾಲ್, ಶ್ರೀಕಾಂತ್ ಕಶ್ಯಪ್, ರಾಜೇಶ್, ಸುಚಿಂದ್ರ, ಸಚಿನ್ ನಾಯಕ್, ಟ್ರಸ್ಟ್ ಪದಾಧಿಕಾರಿಗಳು ಹಾಗೂ ಪೌರಕಾರ್ಮಿಕರು, ಪಾಲಿಕೆ ಅಧಿಕಾರಿಗಳು ಹಾಜರಿದ್ದರು.

ನೇಮಕಾತಿ ಪತ್ರ ವಿತರಣೆ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಎನ್‌ಆರ್ ಕ್ಷೇತ್ರದ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷರನ್ನಾಗಿ ಅಯೂಬ್ ಪಾಷ ಅವರನ್ನು ನೇಮಕ ಮಾಡಲಾಯಿತು. ಚಿತ್ರದಲ್ಲಿ ಮೈಸೂರು ಜಿಲ್ಲಾ ಅಲ್ಪಸಂಖ್ಯಾತರ ಘಟಕದ ವಿನೋದ್ ಜೈನ್ ಇದ್ದಾರೆ.

ರಾಜ್ಯ ಮಟ್ಟದ ಪಂಜ ಕುಸ್ತಿ ಪಂದ್ಯಾವಳಿ



ಮೈಸೂರು,ಜು.2–ಕರ್ನಾಟಕ ರಾಜ್ಯಪಂಜ ಕುಸ್ತಿ ಸಂಘದ ವತಿಯಿಂದ 12ನೇ ರಾಜ್ಯಮಟ್ಟದ ಪುರುಷರು, ಮಹಿಳೆಯರು ಹಾಗೂ ವಿಶೇಷ ಚೇತನ ಪುರುಷರು ಮತ್ತು ಮಹಿಳೆಯರ ಪಂಜ ಕುಸ್ತಿ ಸ್ಪರ್ಧೆ ಯನ್ನು ಜು.7ರ ಭಾನುವಾರದಂದು ಮೈಸೂರಿನ ನೆಕ್ಸಸ್ ಮಾಲ್‌ನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ಮಟ್ಟದ ಪಂಜ ಕುಸ್ತಿಯ ಅಧ್ಯಕ್ಷ ನವೀನ್ ಚಂದ್ರು ಹಾಗೂ ಕಾರ್ಯದರ್ಶಿ ವಿಶ್ವನಾಥ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಂಜ ಕುಸ್ತಿಯಲ್ಲಿ ಸಬ್ ಜೂನಿಯರ್ 15 ವರ್ಷದ ಮಕ್ಕಳು, ಬಾಲಕ, ಬಾಲಕಿಯರು, 18 ವರ್ಷ ಮೇಲ್ಪಟ್ಟ ಯುವಕ, ಯುವತಿಯರು ಹಾಗೂ ಪುರುಷರು–ಮಹಿಳೆಯರು ಪಂದ್ಯಾವಳಿಯಲ್ಲಿ ಭಾಗವಹಿಸಲಿದ್ದಾರೆ. ವಿಶೇಷವಾಗಿ ಅಂಗವಿಕಲ ಪುರುಷರು ಹಾಗೂ ಮಹಿಳೆಯರ ತೋಳ್ಬಲ ಪ್ರದರ್ಶನಕ್ಕೆ ಅವಕಾಶವಿದೆ. ರಾಜ್ಯಾದ್ಯಂತ ಪಂಜ ಕುಸ್ತಿಪಟುಗಳು ಇದರಲ್ಲಿ ಭಾಗವಹಿಸಲಿದ್ದಾರೆ. ಹೆಚ್ಚಿನ ಮಾಹಿತಿ ಹಾಗೂ ನೋಂದಣಿಗೆ 9901229166, 8951512028, 9448980010 ಸಂಪರ್ಕಿಸಬಹುದು.

ಮಾದಕ ವಸ್ತುಗಳ ದುರುಪಯೋಗ, ಅಕ್ರಮ ಸಾಗಾಣಿಕೆ ವಿರುದ್ಧ ಜಾಗೃತಿ ಕಾರ್ಯಕ್ರಮ



‘ನಾನು ಮಾದಕ ವಸ್ತುಗಳನ್ನು ಬಳಸುವುದಿಲ್ಲ’ ಎಂದು ಪ್ರತಿಜ್ಞಾವಿಧಿ ಬೋಧಿಸಲಾಯಿತು.

ಮೈಸೂರು, ಜು. 2– ಮೈಸೂರಿನ ಎಂಎಂಕೆ ಮತ್ತು ಎಸ್‌ಡಿಎಂ ಬಾಲಕಿಯರ ಪದವಿ ಪೂರ್ವ ಕಾಲೇಜಿನಲ್ಲಿ ಲಕ್ಷ್ಮಿಪುರಂ ಪೊಲೀಸ್ ಠಾಣೆ ವತಿಯಿಂದ ಮಾದಕ ವಸ್ತುಗಳ ದುರುಪಯೋಗ ಮತ್ತು ಅಕ್ರಮ ಸಾಗಾಣಿಕೆ ವಿರುದ್ಧ ಅಂತರರಾಷ್ಟ್ರೀಯ ದಿನಾಚರಣೆ ಅಂಗವಾಗಿ ವಿದ್ಯಾರ್ಥಿನಿಯರಲ್ಲಿ ಜಾಗೃತಿ ಮೂಡಿಸಲಾಯಿತು.

ಮುಖ್ಯ ಅತಿಥಿಗಳಾಗಿದ್ದ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ರವಿಶಂಕರ್, ವಿದ್ಯಾರ್ಥಿಗಳಲ್ಲಿ ಮಾದಕ ವಸ್ತುಗಳ ಮಾರಾಟ, ದುರುಪಯೋಗ ಹಾಗೂ ಅಕ್ರಮ ಸಾಗಾಣಿಕೆ ವಿರುದ್ಧ ಜಾಗೃತಿ ಮೂಡಿಸಿದರು.

ಹದಿಹರೆಯದ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಮಾದಕ ದ್ರವ್ಯಗಳ ಸುಳಿಯಲ್ಲಿ ಸಿಲುಕುತ್ತಿರುವುದನ್ನು ಇತ್ತೀಚೆಗೆ ಗುರುತಿಸಲಾಗಿದೆ. ಮಾದಕ ದ್ರವ್ಯ ವ್ಯಸನಿಗಳು ಆರೋಗ್ಯದ ಜೊತೆ ಬದುಕನ್ನು ಕಳೆದುಕೊಳ್ಳುತ್ತಿದ್ದಾರೆ. ಶ್ರೀಮಂತ ವರ್ಗದಲ್ಲಿ ಬಹಳಷ್ಟು ಮಂದಿ ಈ ದುರ್ವ್ಯಸನಕ್ಕೆ ಒಳಗಾಗಿರುವುದು ಬೆಳಕಿಗೆ ಬಂದಿದೆ. ಇಂತಹ ಜಾಲಗಳಿಂದ ದೂರವಿದ್ದು, ಎಚ್ಚರಿಕೆ ವಹಿಸಬೇಕು ಎಂದರು.

ನಂತರ ವಿದ್ಯಾರ್ಥಿನಿಯರಿಗೆ ‘ನಾನು ಮಾದಕ ವಸ್ತುಗಳನ್ನು ಬಳಸುವುದಿಲ್ಲ’ ಎಂದು ಪ್ರತಿಜ್ಞಾವಿಧಿ ಬೋಧಿಸಿದರು. ಇನ್ಸ್‌ಪೆಕ್ಟರ್ ಬಾನುಕುಮಾರಿ, ವಿದ್ಯಾರ್ಥಿನಿಯರಿಗೆ ಮಾದಕ ವಸ್ತುವಿನಿಂದ ಆಗುವಂತಹ ದುಷ್ಪರಿಣಾಮ ಪ್ರದರ್ಶಿಸುವ ಮೂಲಕ ಜಾಗೃತಿ ಮೂಡಿಸಿದರು. ಈ ವೇಳೆ ಪ್ರಾಂಶುಪಾಲೆ ನಯನಕುಮಾರಿ, ಕಾಲೇಜಿನ ಜೀವಶಾಸ್ತ್ರ ಉಪನ್ಯಾಸಕಿ, ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿ ಡಾ.ಸುಮಾ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಬೆಲೆ ಏರಿಕೆ, ಸರ್ಕಾರದ ರೈತ ವಿರೋಧಿ ನೀತಿ ಖಂಡಿಸಿ ಬಿಜೆಪಿ ಪ್ರತಿಭಟನೆ



ಅಗತ್ಯ ವಸ್ತುಗಳ ಬೆಲೆ ಏರಿಕೆ, ಕಾಂಗ್ರೆಸ್ ಸರ್ಕಾರದ ರೈತ ವಿರೋಧಿ ನೀತಿ ಖಂಡಿಸಿ ಮೈಸೂರಲ್ಲಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು, ಜು. 2 (ಆರ್‌ಕೆ)– ಅಗತ್ಯ ವಸ್ತುಗಳ ಬೆಲೆ ಏರಿಕೆ, ಕಾಂಗ್ರೆಸ್ ಸರ್ಕಾರದ ರೈತ ವಿರೋಧಿ ನೀತಿ ಖಂಡಿಸಿ ಮೈಸೂರಲ್ಲಿ ಮಂಗಳವಾರ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಬಿಜೆಪಿ ನಗರ, ಜಿಲ್ಲಾ ಘಟಕ ಹಾಗೂ ರೈತ ಮೋರ್ಚಾ ವತಿಯಿಂದ ಶಾಸಕ ಟಿ.ಎಸ್.ಶ್ರೀವತ್ಸ, ನಗರಾಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ ಅವರ ನೇತೃತ್ವದಲ್ಲಿ ಮೈಸೂರಿನ ಜಿಲ್ಲಾ ಪಂಚಾಯ್ತಿ ಕಚೇರಿ ಮುಂದೆ ನಡೆದ ಪ್ರತಿಭಟನೆಯಲ್ಲಿ 200ಕ್ಕೂ ಹೆಚ್ಚು ಬಿಜೆಪಿ ಕಾರ್ಯಕರ್ತರು ಭಾಗವಹಿಸಿದ್ದರು.

ಪೆಟ್ರೋಲ್, ಡೀಸೆಲ್, ಹಾಲು, ಮದ್ಯ ಹಾಗೂ ಸ್ಟಾಂಪ್ ಪೇಪರ್ ಬೆಲೆ ಏರಿಸಿ ಸಾಮಾನ್ಯ ಮನುಷ್ಯ ಜೀವನ ನಡೆಸಲು ಗ್ಯಾರಂಟಿ ಯೋಜನೆಗಳನ್ನು ಮುಂದಿಟ್ಟು ಗೆದ್ದು ಅಧಿಕಾರ ಹಿಡಿದಿರುವ ಕಾಂಗ್ರೆಸ್ ಸರ್ಕಾರ, ಗ್ಯಾರಂಟಿಗಾಗಿ ಜನಸಾಮಾನ್ಯರ ಆದಾಯವನ್ನು ಬೆಲೆ ಏರಿಕೆ ಮಾಡಿ ಕಿತ್ತುಕೊಳ್ಳುತ್ತಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಸರ್ಕಾರವು ಸಾರ್ವಜನಿಕರ ತೆರಿಗೆ ಹಣವನ್ನು ಕೇವಲ ಗ್ಯಾರಂಟಿ ಯೋಜನೆಗಳ ಜಾರಿಗೆ ವಿನಿಯೋಗಿಸಿ ಅಗತ್ಯವಾಗಿ ಕೈಗೊಳ್ಳಬೇಕಾದ ಅಭಿವೃದ್ಧಿ ಯೋಜನೆಗಳನ್ನು ಕಡೆಗಣಿಸುತ್ತಿದೆ. ಅದರಿಂದ ಜನರು ಮೂಲ ಸೌಕರ್ಯಗಳಿಂದ ವಂಚಿತರಾಗಿದ್ದಾರೆ ಎಂದು ಬಿಜೆಪಿ ಕಾರ್ಯಕರ್ತರು ಆರೋಪಿಸಿದ್ದಾರೆ.

ಕಿಸಾನ್ ಸಮ್ಮಾನ್, ಭೂಸಿರಿಯಂತಹ ರೈತ ಪರ ಯೋಜನೆಗಳಿಗೆ ಎಳ್ಳು ನೀರು ಬಿಟ್ಟಿರುವ ಸರ್ಕಾರ ರೈತರನ್ನು ಸಂಕಷ್ಟಕ್ಕೆ ದೂಡಿದೆ. ಪ್ರೋತ್ಸಾಹ ಧನ, ರೈತ ಶಕ್ತಿ ಯೋಜನೆಯನ್ನು ಸ್ಥಗಿತಗೊಳಿಸಿ ಅನ್ನ ನೀಡುವ ಭೂಮಿಪುತ್ರರಿಗೆ ಸಿದ್ದರಾಮಯ್ಯ ಸರ್ಕಾರ ಮೋಸ ಮಾಡುತ್ತಿದೆ ಎಂದು ಪ್ರತಿಭಟನಾ ಕಾರರು ಆಕ್ರೋಶ ವ್ಯಕ್ತಪಡಿಸಿದರು.


ಸರ್ಕಾರಕ್ಕೆ ಧಿಕ್ಕಾರ ಕೂಗಿದ ಅವರು, ಬೆಲೆ ಏರಿಕೆ, ರೈತ ವಿರೋಧಿ ನೀತಿ ವಿರುದ್ಧ ಘೋಷಣೆಗಳನ್ನು ಕೂಗಿದರಲ್ಲದೆ ಜಾರಿಯಲ್ಲಿದ್ದ ಎಲ್ಲಾ ರೈತ ಪರ ಯೋಜನೆಗಳನ್ನು ಮುಂದುವರಿಸಬೇಕು. ಅಗತ್ಯ ವಸ್ತುಗಳ ಮೇಲಿನ ತೆರಿಗೆ ಕಡಿಮೆ ಮಾಡಬೇಕೆಂದು ಬಿಜೆಪಿ ಕಾರ್ಯಕರ್ತರು ಒತ್ತಾಯಿಸಿದರು. ಬಿಜೆಪಿ ಮುಖಂಡರಾದ ಹೇಮಂತ ಕುಮಾರ್‌ಗೌಡ, ಫಣೀಶ, ರಮೇಶ್ ಸೇರಿದಂತೆ ಹಲವು ಬಿಜೆಪಿ ಮುಖಂಡರು, ಕಾರ್ಯಕರ್ತರು ಪ್ರತಿಭಟನೆಯಲ್ಲಿ ಭಾಗಹಿಸಿದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಜು. 2– ಮೈಸೂರಿನ ಬೋಗಾದಿಯ ಬಸವ ಬಳಗ ಟ್ರಸ್ಟ್ ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ. 85ಕ್ಕಿಂತ ಹೆಚ್ಚು ಅಂಕ ಪಡೆದ ವೀರಶೈವ ಲಿಂಗಾಯಿತ ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಟ್ರಸ್ಟ್ ವ್ಯಾಪ್ತಿಗೆ ಬರುವ ಬೋಗಾದಿ ಗ್ರಾಮ, ಬೋಗಾದಿ 2ನೇ ಹಂತ (ಉತ್ತರ), ಪ್ರಶಾಂತನಗರ, ವಿಜಯನಗರ 3 ಮತ್ತು 4ನೇ ಹಂತ, ಸಿಎಫ್‌ಟಿಆರ್ ಬಡಾವಣೆ, ಆರ್‌ಬಿಐ ಬಡಾವಣೆ, ಎಎಲ್‌ಎಲ್‌ಎಸ್‌ಎಚ್ ಬಡಾವಣೆ, ಬ್ಯಾಂಕ್ ಕಾಲೋನಿ, ಶಾರದಾ ರೈಲ್ವೆ ಬಡಾವಣೆ, ಎಸ್‌ಬಿಎಂ ಬಡಾವಣೆ, ದೀಪಾನಗರ, ರೂಪನಗರ, ಪ್ರೀತಿ ಬಡಾವಣೆ, ಬಾಪೂಜಿ ಬಡಾವಣೆ, ನ್ಯಾಯಾಂಗ ಬಡಾವಣೆ, ಖಜಾನೆ ಬಡಾವಣೆ, ಬಸವೇಶ್ವರನಗರ ಇಲ್ಲಿ ವಾಸವಾಗಿರುವ ವೀರಶೈವ ಲಿಂಗಾಯಿತ ಸಮಾಜದ ಮಕ್ಕಳು ಅಂಕಪಟ್ಟಿ, ಆಧಾರ್ ಪ್ರತಿ, ವಾಸ ದೃಢೀಕರಣ ಪತ್ರದ ನಕಲು ಪ್ರತಿಯೊಂದಿಗೆ ಅರ್ಜಿಯನ್ನು ಟ್ರಸ್ಟ್ ಖಜಾಂಚಿ ಎ.ಆರ್.ವಿಶ್ವನಾಥ್ ಅವರಿಗೆ ಜು.15ರೊಳಗಾಗಿ ತಲುಪಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9449007032 ಸಂಪರ್ಕಿಸಬಹುದು.

ರಾಜಯೋಗ ಶಿಕ್ಷಣದಿಂದ ಮಹಾನ್ ಮಾನವನಾಗಲು ಸಾಧ್ಯ

ಈಶ್ವರೀಯ ವಿವಿಯ ರಾಷ್ಟ್ರೀಯ ಅಧ್ಯಕ್ಷ ಬ್ರಹ್ಮಾಕುಮಾರ ಕರುಣಾಜಿ ಅಭಿಮತ



ಅಂತರರಾಷ್ಟ್ರೀಯ ಆಧ್ಯಾತ್ಮಿಕ ಸಂಸ್ಥೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಮೌಂಟ್ ಅಬುವಿನ ಮೀಡಿಯಾ ರಾಷ್ಟ್ರೀಯ ಅಧ್ಯಕ್ಷ ರಾಜಯೋಗಿ ಬ್ರಹ್ಮಾಕುಮಾರ ಕರುಣಾಜೀ ಅವರ 84ನೇ ಜನ್ಮದಿನ ಆಚರಿಸಲಾಯಿತು.

ಮೈಸೂರು, ಜು. 2–ಜಗತ್ತಿನಲ್ಲಿ ಎಲ್ಲಾ ಪ್ರಕಾರದ ಶಿಕ್ಷಣವಿದ್ದರೂ ಮಾನವೀಯ ಮೌಲ್ಯಗಳ ಕೊರತೆಯಿಂದ ಸಮಾಜದಲ್ಲಿ ಅಶಾಂತಿ ಮೂಡುತ್ತಿದೆ. ಮಾನವನನ್ನು ಮಹಾಮಾನವನನ್ನಾಗಿ ಮಾಡುವುದು ರಾಜಯೋಗ ಶಿಕ್ಷಣ ಎಂದು ಅಂತರರಾಷ್ಟ್ರೀಯ ಆಧ್ಯಾತ್ಮಿಕ ಸಂಸ್ಥೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಮೌಂಟ್ ಅಬುವಿನ ಮೀಡಿಯಾ ರಾಷ್ಟ್ರೀಯ ಅಧ್ಯಕ್ಷ ರಾಜಯೋಗಿ ಬ್ರಹ್ಮಾಕುಮಾರ ಕರುಣಾಜೀ ಅಭಿಪ್ರಾಯಪಟ್ಟರು.

ಮೈಸೂರಿನ ಯಾದವಗಿರಿ ಶಾಖೆಯಲ್ಲಿ 84ನೇ ಜನ್ಮದಿನೋತ್ಸವದ ಅಭಿನಂದನೆಯನ್ನು ಸ್ವೀಕರಿಸಿ ಮಾತನಾಡುತ್ತಾ ಆಧ್ಯಾತ್ಮಿಕ ಶಕ್ತಿ ಹೆಚ್ಚಿಸಿಕೊಂಡರೆ ಮಾತ್ರ ಮುಂಬರುವ ದಿನಗಳಲ್ಲಿ ಬರುವ ಜೀವನದ ಪರೀಕ್ಷೆ ಪರಿಸ್ಥಿತಿಗಳನ್ನು ಎದುರಿಸಲು ಸಾಧ್ಯ ಎಂದರು.

ರಾಜಯೋಗ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಅಂತರ್ಮುಖತೆ ಅಭ್ಯಾಸ ಮಾಡಿದರೆ ಒಳಿತು. ಅಂತರಮುಖಿ ಸದಾ ಸುಖಿ ಬಹಿರ್ಮುಖಿ ಸದಾ ದುಃಖಿ ಎಂದು ಅವರು ಹೇಳಿದರು.

ಜ್ಞಾನ ಸರೋವರ ರಾಜಯೋಗ ರಿಟ್ರೀಟ್ ಸೆಂಟರ್‌ನ ಪ್ರಾಂಶುಪಾಲರಾದ ಬ್ರಹ್ಮಾಕುಮಾರ ರಂಗನಾಥ್ ಶಾಸ್ತ್ರೀಜಿ ಮಾತನಾಡಿ, 60ರ ದಶಕದಲ್ಲಿ ಮೈಸೂರು ಮಹಾರಾಜರಿಂದ ಸಹಯೋಗ ಪಡೆದು ಪುಟ್ಟದಾದ ರೀತಿಯಲ್ಲಿ ಆರಂಭಿಸಿದ ಈಶ್ವರೀಯ ವಿಶ್ವವಿದ್ಯಾಲಯ ಇಂದು ನಾಲ್ಕು ನೂರಕ್ಕೂ ಹೆಚ್ಚು ವಿವಿಗಳು ಕರ್ನಾಟಕದಾದ್ಯಂತ ಹೆಮ್ಮರವಾಗಿ ಬೆಳೆದಿದೆ ಅದಕ್ಕೆ ಮೂಲ ಕಾರಣಕರ್ತರು ಕರುಣಾಜಿ ಎಂದರು.

ಯೋಗ ಭವನದ ನಾಗರಾಜ್ ಭಾಯಿ, ರಾಜಯೋಗಿ ಬ್ರಹ್ಮಾಕುಮಾರ ಪ್ರಾಣೇಶ್ ಜಿ, ರಾಜಯೋಗಿನಿ ಬ್ರಹ್ಮಾಕುಮಾರಿ ಲಕ್ಷ್ಮೀಜಿ, ಸ್ವಾಮಿ ವಿವೇಕಾನಂದ ರಾಜ್ಯ ಸದ್ಭಾವನ ಪ್ರಶಸ್ತಿ ಪುರಸ್ಕೃತೆ ಬ್ರಹ್ಮಾಕುಮಾರಿ ದಾನೇಶ್ವರೀಜಿ ಮೀನಾಜಿ ಓಂ ಶಾಂತಿ ನ್ಯೂ ಸರ್ವಿಸ್‌ನ ಆರಾಧ್ಯ, ಮಾಧ್ಯಮದ ಮಹದೇವಸ್ವಾಮಿ, ನಿವೃತ್ತ ಡಿವೈಎಸ್ಪಿ ಕೃಷ್ಣಮೂರ್ತಿ, ಇಂಜಿನಿಯರ್ ರಾಮಚಂದ್ರ, ಯೋಗ ಭವನದ ಕುಮಾರ್, ಮಣಿ, ವೀಣಾ, ಮೀನಾಜಿ ಸೇರಿದಂತೆ ಮೈಸೂರು ಉಪವಿಭಾಗದ ರಾಜಯೋಗ ವಿದ್ಯಾರ್ಥಿಗಳು ಇದ್ದರು.

ಮೈಸೂರು, ಚಾಮರಾಜನಗರ ಜನೌಷಧಿ ಅಂಗಡಿ ಮಾಲೀಕರ ಸಂಘದಿಂದ ವೈದ್ಯರ ದಿನಾಚರಣೆ



ರಾಷ್ಟ್ರೀಯ ವೈದ್ಯರ ದಿನಾಚರಣೆಯ ಅಂಗವಾಗಿ ವಿವಿಧ ಆಸ್ಪತ್ರೆಯ ವೈದ್ಯರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಮೈಸೂರು, ಜು. 2– ವೈದ್ಯರ ಶ್ರೇಷ್ಠತೆ, ಅವಶ್ಯಕತೆ ಜಗತ್ತಿನ ಕಣ್ಣು ತೆರೆಸಿದ್ದು, ಮಹಾಮಾರಿ ಕೊರೊನಾ ವ್ಯಾಪಿಸಿದಾಗ ಎಂದು ಡಾ. ಅನಿಲ್ ಹೇಳಿದರು.

ಮೈಸೂರಿನ ಕಬೀರ್ ರಸ್ತೆಯಲ್ಲಿರುವ ಶ್ರೀ ಕಂಠಿ ಮಲ್ಲಣ್ಣ ಕಲ್ಯಾಣ ಮಂಟಪದಲ್ಲಿ ಮೈಸೂರು ಹಾಗೂ ಚಾಮರಾಜನಗರ ಪ್ರಧಾನಮಂತ್ರಿ ಭಾರತೀಯ ಜನೌಷಧಿ ಕೇಂದ್ರಗಳ ಮಾಲೀಕರ ಸಂಘದ ವತಿಯಿಂದ ರಾಷ್ಟ್ರೀಯ ವೈದ್ಯರ ದಿನಾಚರಣೆ ಅಂಗವಾಗಿ ವಿವಿಧ ಆಸ್ಪತ್ರೆಯ ವೈದ್ಯರನ್ನು ಸನ್ಮಾನಿಸಿ, ಮಾತನಾಡಿದರು.

ಮನುಷ್ಯನ ಆರೋಗ್ಯ ರಕ್ಷಣೆಗಾಗಿಯೇ ವೈದ್ಯಲೋಕವಿದೆ. ರೋಗಿಗಳ ಜೀವ ರಕ್ಷಣೆಗೆ ಸಾವಿರಕ್ಕೂ ಹೆಚ್ಚು ವೈದ್ಯರು ಬಲಿದಾನ ಮಾಡಿದ್ದಾರೆ. ಯಾವುದೇ ವಿಭಾಗದ ವೈದ್ಯರಾಗಲೀ ಸ್ವಹಿತವನ್ನು ಬದಿಗೊತ್ತಿ ರೋಗಿಗಳ ಹಿತವನ್ನು ಕಾಪಾಡುವ ಮನೋಪ್ರವೃತ್ತಿಯನ್ನು ರೂಢಿಸಿಕೊಳ್ಳಬೇಕು. ಹಿರಿಯ ಹಾಗೂ ಕಿರಿಯ ವೈದ್ಯರಿಗೆ ಡಾ.ಬಿದನ್ ಚಂದ್ರ ರಾಯ್ ಅವರ ಸೇವಾ ಮಾದರಿ ಮೇಲ್ಪಂಕ್ತಿಯಾಗಬೇಕು. ಇಂದಿನ ದಿನಗಳಲ್ಲಿ ವೈದ್ಯಕೀಯ ಶಿಕ್ಷಣ ದುಬಾರಿಯಾಗಿದ್ದು, ಅನಿವಾರ್ಯವಾಗಿ ಚಿಕಿತ್ಸಾವೆಚ್ಚಗಳೂ ಹೆಚ್ಚಳವಾಗುತ್ತಿವೆ. ಶಿಕ್ಷಣ ಉಚಿತವಾಗಿ ದೊರೆಯುವುದು ಕಷ್ಟಕರವಾಗಿದ್ದರೂ ಜನಸಾಮಾನ್ಯರಿಗೆ ಕೈಗೆಟುಕುವ ದರದಲ್ಲಿ ಸಿಗುವಂತಾಗಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ವಿವಿಧ ಆಸ್ಪತ್ರೆ ವೈದ್ಯರಾದ ಡಾ.ಶಿವಕುಮಾರ್ ಎಂ.ಎಸ್, ಡಾ.ರಮ್ಯಾ ಎಂ, ಡಾ.ಮಣಿಮಾಲ ಆರ್, ಡಾ.ವಾಣಿಶ್ರೀ, ಡಾ.ಅನಿಲ್, ಡಾ.ಶಂಕರಯ್ಯ ಅವರನ್ನು ಗೌರವಿಸಲಾಯಿತು. ಪ್ರಧಾನ ಮಂತ್ರಿ ಜನೌಷಧಿ ಕೇಂದ್ರದ ವಿತರಕ ಎಂ.ಲೋಕೇಶ್, ಸಂಘದ ಪದಾಧಿಕಾರಿಗಳಾದ ಹರ್ಷ ಜಿ, ಉಮೇಶ್, ಗಿರಿಜಾ, ಲಕ್ಷ್ಮಿ, ಕಿಶೋರ್, ಮಲ್ಲೇಶ್, ಪ್ರೇಮಕುಮಾರಿ, ಜನೌಷಧಿ ಕೇಂದ್ರದ ಮೇಲುಸ್ತುವಾರಿ ಅನುಪಮ್ ಪಾಠಕ್, ನಾಗಮಣಿ ಜೆ, ದರ್ಶನ್ ಮೂರ್ತಿ ಹಾಗೂ ಇನ್ನಿತರ ಜನೌಷಧಿ ಅಂಗಡಿ ಮಾಲೀಕರು ಹಾಜರಿದ್ದರು.

ಉಚಿತ ಮೆಗಾ ಆರೋಗ್ಯ ಶಿಬಿರ, ಕಣ್ಣಿನ ತಪಾಸಣೆ



ಮೈಸೂರು, ಜು. 2– ಮೈಸೂರಿನ ಅಜೀಜಿಯ ಎಜುಕೇಷನಲ್ ಟ್ರಸ್ಟ್ ಟ್ರಸ್ಟಿಗಳು, ಆಸ್ತಾನ–ಎ–ಸಲ್ಮಾನಿಯಾ ದರ್ಗಾ ಕಮಿಟಿ ಪದಾಧಿಕಾರಿಗಳು, ದಾರುಲ್ ಉಲೂಮ್ ಅಜೀಜಿಯ ಟ್ರಸ್ಟ್‌ನ ಟ್ರಸ್ಟಿಗಳ ಸಂಯುಕ್ತಾಶ್ರಯದಲ್ಲಿ ನಾಳೆ (ಜು.3) ಬೆಳಗ್ಗೆ 9ರಿಂದ ಮಧ್ಯಾಹ್ನ 2.00 ಗಂಟೆಯವರೆಗೆ ಕಲ್ಯಾಣಗಿರಿಯ ಕೆಹೆಚ್‌ಬಿ, ವಾಟರ್ ಟ್ಯಾಂಕ್ ಬಳಿಯ ಎ.ಇ.ಟಿ. ಹೈಸ್ಕೂಲು (ಅಜೀಜಿಯ ಬಿಲ್ಡಿಂಗ್) ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ವಿವರಗಳಿಗಾಗಿ ದೂರವಾಣಿ ಸಂಖ್ಯೆ : 0821–2457786 ಅಥವಾ ಮೊಬೈಲ್ ನಂ.6360540445 ಅನ್ನು ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...




ಇಂದಿನ ಪಂಚಾಂಗ

3.07.2024 ಬುಧವಾರ, ಮಳೆ ನಕ್ಷತ್ರ: ಆರ್ದ್ರಾ 22.06.2024ರಿಂದ 05.07.2024
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಕೃಷ್ಣ ಪಕ್ಷ,
ತಿಥಿ: ದ್ವಾದಶಿ, ನಕ್ಷತ್ರ: ರೋಹಿಣಿ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 9 ರಿಂದ ಬೆನ್ನುನೋವಿಗೆ ಕಾರಣಗಳು, ಲಕ್ಷಣಗಳು ಮತ್ತು ಚಿಕಿತ್ಸೆಗಳ ಬಗ್ಗೆ ತಜ್ಞ ವೈದ್ಯರಿಂದ ಸಲಹೆ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.
- **ಅಜೀಜಿಯ ಎಜುಕೇಷನಲ್ ಟ್ರಸ್ಟ್ ಟ್ರಸ್ಟಿಗಳು, ಆಸ್ತಾನ–ಎ–ಸಲ್ಮಾನಿಯಾ ದರ್ಗಾ ಕಮಿಟಿ ಪದಾಧಿಕಾರಿಗಳು, ದಾರುಲ್ ಉಲೂಮ್ ಅಜೀಜಿಯ ಟ್ರಸ್ಟ್‌ನ ಟ್ರಸ್ಟಿಗಳು :** ಉಚಿತ ಮೆಗಾ ಆರೋಗ್ಯ ಮತ್ತು ಕಣ್ಣಿನ ತಪಾಸಣಾ ಶಿಬಿರ, ಸ್ಥಳ: ಎ.ಇ.ಟಿ. ಹೈಸ್ಕೂಲು (ಅಜೀಜಿಯ ಬಿಲ್ಡಿಂಗ್), ವಾಟರ್ ಟ್ಯಾಂಕ್ ಬಳಿ, ಕೆ.ಹೆಚ್.ಬಿ. ಕಲ್ಯಾಣಗಿರಿ, ಬೆಳಗ್ಗೆ 9 ರಿಂದ.
- **ಹರಿ ವಿದ್ಯಾಲಯ ಸಂಯುಕ್ತ ಪಿಯು ಕಾಲೇಜು :** ಹಣಕಾಸಿನ ಬುದ್ಧಿವಂತಿಕೆ ಕುರಿತು ಕಾರ್ಯಾಗಾರ, ಸಂಪನ್ಮೂಲ ವ್ಯಕ್ತಿ : ಶ್ರೀಮಂತ ಚೀಫ್ ಮಾರ್ಕೆಟ್ ಆಫೀಸರ್ ಪ್ರಿಯಾರಾಂ ಬಿಂಡಿಗನವಿಲೆ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10ಕ್ಕೆ.
- **ಫ್ಯಾಷನಿಸ್ಟ್ ಗ್ರೂಪ್ ಆಫ್ ಎಕ್ಸಿಬಿಷನ್ :** ಫ್ಯಾಷನವ್ಯ ವಸ್ತುಪ್ರದರ್ಶನ, ಸ್ಥಳ: ಹೋಟೆಲ್ ಸದರನ್ ಸ್ಟಾರ್, ಬೆಳಗ್ಗೆ 11 ರಿಂದ.
- **ಶ್ರೀ ಕೃಷ್ಣ ಟ್ರಸ್ಟ್, ಶ್ರೀ ಕೃಷ್ಣಧಾಮ :** ಶ್ರೀ ಅದಮಾರು ಪೀಠಾಧೀಶರಾದ ಶ್ರೀ ಶ್ರೀ ವಿಶ್ವಪ್ರಿಯತೀರ್ಥ ಶ್ರೀಪಾದಗಳವರಿಂದ ಶ್ರೀಮದ್ ವಾದಿರಾಜ ವಿರಚಿತ ರುಕ್ಮಿಣೀಶ ವಿಜಯ ಕುರಿತು ಪ್ರವಚನ, ಸ್ಥಳ: ಶ್ರೀಕೃಷ್ಣಧಾಮ, ಸರಸ್ವತಿಪುರಂ, ಸಂಜೆ 6 ರಿಂದ.
- **ರವಿವರ್ಮ ಆರ್ಟ್ ಇನ್‌ಸ್ಟಿಟ್ಯೂಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಪೇಯಿಂಟಿಂಗ್ ಮತ್ತು ಡ್ರಾಯಿಂಗ್ ಎಕ್ಸಿಬಿಷನ್, ಉಪಸ್ಥಿತರು : ಕರ್ನಾಟಕ ಲಲಿತಕಲಾ ಅಕಾಡೆಮಿ ಅಧ್ಯಕ್ಷ ಪಿ. ಸಂಪತ್‌ಕುಮಾರ್, ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರಾದ ಪ್ರಭು ಹರಸೂರು, ರವಿವರ್ಮ ಆರ್ಟ್ ಇನ್‌ಸ್ಟಿಟ್ಯೂಟ್ ಪ್ರಿನ್ಸಿಪಾಲ್ ಶಿವಕುಮಾರ್ ಕೇಸರಮಾಡು, ಸ್ಥಳ: ರವಿವರ್ಮ ಆರ್ಟ್ ಇನ್‌ಸ್ಟಿಟ್ಯೂಟ್, ಚಾಮರಾಜಪುರಂ, ಮಧ್ಯಾಹ್ನ 12.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಬದುಕು ಬದಲಿಸಿದ ಶೋಧ–ಬಾನುಲಿ ಸರಣಿ, ಪ್ರಸ್ತುತಿ–ಎನ್. ಎನ್. ಸುರೇಂದ್ರನಾಥ್ ಸಾತ್ವಿಕ್, 6.40 ನಾನು ನ. ರತ್ನ–ಬಾನುಲಿ ಸರಣಿ. ಖ್ಯಾತ ನಾಟಕಕಾರ ಹಾಗೂ ವಾಕ್ ಶ್ರವಣ ತಜ್ಞ ಡಾ. ನ. ರತ್ನ ಅವರ ಜೀವನಗಾಥೆ ಅವರದೇ ಧ್ವನಿಯಲ್ಲಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 9.00 ಮನೋನಂದನ–ಪ್ರಾಯೋಜಿತ ಮಾನಸಿಕ ಆರೋಗ್ಯ ಕಾರ್ಯಕ್ರಮ, ವಿಷಯ : ಅತೀ ಒತ್ತಡದ ಮಾನಸಿಕ ಸಮಸ್ಯೆ ಅಂದರೆ ಸೈಕಾಲಜಿಕಲ್ ಬರ್ನ್ ಔಟ್ ತಡೆಗಟ್ಟುವುದು ಹೇಗೆ?, ವಿಷಯ ತಜ್ಞರು: ಮಾನಸಿಕ ರೋಗ ತಜ್ಞರಾದ ಡಾ.ಅಭಿಜಿತ್. ಎಚ್. ಆರ್. ಇವರೊಂದಿಗೆ ಭಾಗವಹಿಸುತ್ತಾರೆ : ಬೇಂದ್ರೆ ಮಂಜುನಾಥ್, ಪ್ರಾಯೋಜಕರು: ಪ್ರೇರಣಾ ಆಸ್ಪತ್ರೆ ಮತ್ತು ಪ್ರೇರಣಾ ಫರ್ಟಿಲಿಟಿ ಕುವೆಂಪುನಗರ, ಮೈಸೂರು, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ: ಉಸ್ತಾದ್ ಬಿಸ್ಮಿಲ್ಲಾ ಖಾನ್ – ಶಹನಾಯ್, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.30 ದೇವರನಾಮ–ದೀಪಿಕಾ ಪಾಂಡುರಂಗಿ, 12.45 ಜನಪದ ಸಂಗೀತ, 1.20 ಭಾವಗೀತೆಗಳು : ಶೈಲಜಾ ಚಂದ್ರಶೇಖರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ : ನಂದಿತಾ. ಪಿ, 4.00 ಮಹಿಳಾರಂಗ : ಹೀಗಿದೆ ನೋಡಿ ನಮ್ ಜೋಡಿ, ಭಾಗವಹಿಸುವವರು : ಡಾ. ಧರಣಿ ದೇವಿ ಮೂಲಗತ್ತಿ ಹಾಗೂ ಡಾ. ಅರವಿಂದ ಮೂಲಗತ್ತಿ, ಪ್ರಸ್ತುತಿ: ಅಬ್ದುಲ್ ರಶೀದ್, 4.45 ಹಿಂದಿ ಪಾಠ–ಡಾ. ಮಾಧವಿ ಭಂಡಾರಿ, 5.45 ನಾನು ನ. ರತ್ನ–ಬಾನುಲಿ ಸರಣಿ. ಖ್ಯಾತ ನಾಟಕಕಾರ ಹಾಗೂ ವಾಕ್ ಶ್ರವಣ ತಜ್ಞ, ಡಾ. ನ. ರತ್ನ ಅವರ ಜೀವನಗಾಥೆ ಅವರದೇ ಧ್ವನಿಯಲ್ಲಿ, 6.50 ಕೃಷಿರಂಗ : ಕೃಷಿ ದೀವಿಗೆ, ಸಂಶೋಧನಾ ಸಂಸ್ಥೆಯೊಂದಿಗೆ ಕೃಷಿ ಕಲಿಕೆ ಕುರಿತ ಬಾನುಲಿ ಸರಣಿ. ಮಣ್ಣಿನ ಆರೋಗ್ಯ ನಿರ್ವಹಣೆ ಮತ್ತು ಬೆಳೆ ಯೋಜನೆ ಕುರಿತು ಸಂವಾದ. ಭಾಗವಹಿಸುತ್ತಾರೆ : ಮಂಡ್ಯದ ವಲಯ ಕೃಷಿ ಸಂಶೋಧನಾ ಕೇಂದ್ರದ ವಿಜ್ಞಾನಿಗಳಾದ ಡಾ.ಎಂ.ಎ. ಅನಂತ್ ಕುಮಾರ್ ಹಾಗೂ ಡಾ. ತಿಮ್ಮೇಗೌಡ. ಪಿ, ಪ್ರಸ್ತುತಿ : ಎನ್. ಕೇಶವಮೂರ್ತಿ, 8.00 ಕ್ಷಿತಿಜ Literary ಗುರು–ಸಾಹಿತ್ಯ ಸಾಧಕರೊಂದಿಗೆ ಸಂವಾದ. 9.30 ನಾಟಕ : ಸಾವೇ ಸಾಕ್ಷಾತ್ಕಾರ, ರಚನೆ ಹಾಗೂ ನಿರ್ದೇಶನ : ವಿ.ಮ. ಜಗದೀಶ್, ನಿರ್ಮಾಣ : ಪ್ರಭುಸ್ವಾಮಿ ಮಳಿಮಠ್, 10.00 ಹಳ್ಳಿಹಾಡು, 10.30 ಸವಿನೆನಪು

ಮೈಸೂರು ಮಿತ್ರ

ಬುಧವಾರ 3 ಜುಲೈ 2024

3ನೇ ಅವಧಿಗೂ ಕಾಂಗ್ರೆಸ್ಸೇತರ ನಾಯಕ ಪ್ರಧಾನಿಯಾಗಿದ್ದಕ್ಕೆ ಪ್ರತಿಪಕ್ಷಗಳಿಗೆ ಅಸಮಾಧಾನ

ನವದೆಹಲಿ, ಜು.2– ಸಂಸತ್ತಿನ ನಿಯಮಗಳು ಮತ್ತು ನಡವಳಿಕೆಯನ್ನು ಅನುಸರಿಸಲು ಹಿರಿಯ ಸದಸ್ಯರಿಂದ ಕಲಿಯುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ಎನ್‌ಡಿಎ ಸಂಸದರಿಗೆ ಸಲಹೆ ನೀಡಿದ್ದಾರೆ.

ಇಂದು ಎನ್‌ಡಿಎ ಸಂಸದರ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ ಮೋದಿ, ಮೊದಲ ಬಾರಿಗೆ ಕಾಂಗ್ರೆಸ್ಸೇತರ ನಾಯಕರೊಬ್ಬರು ಸತತ ಮೂರನೇ ಅವಧಿಗೆ ಪ್ರಧಾನಿಯಾಗಿರುವುದರಿಂದ ಪ್ರತಿಪಕ್ಷಗಳು ತೀವ್ರ ಅಸಮಾಧಾನಗೊಂಡಿವೆ ಎಂದು ಹೇಳಿರುವುದಾಗಿ ಮೂಲಗಳು ತಿಳಿಸಿವೆ. ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು, ಸಂಸದರಿಗೆ ಸಂಸತ್ತಿನ ವಿಷಯಗಳನ್ನು ಅಧ್ಯಯನ ಮಾಡಲು, ನಿಯಮಿತವಾಗಿ ಸಂಸತ್ತಿಗೆ ಹಾಜರಾಗಲು ಮತ್ತು ತಮ್ಮ ಕ್ಷೇತ್ರಕ್ಕೆ ಸಂಬಂಧಿಸಿದ ವಿಷಯಗಳನ್ನು ಪರಿಣಾಮಕಾರಿಯಾಗಿ ಪ್ರಸ್ತಾಪಿಸುವಂತೆ ಮೋದಿ ಸೂಚಿಸಿದರು ಎಂದರು.

ಲೋಕಸಭೆಯಲ್ಲಿ ಸೋಮವಾರ ರಾಹುಲ್ ಗಾಂಧಿಯವರ ಭಾಷಣವನ್ನು ಮೋದಿ ಉಲ್ಲೇಖಿಸಿದ್ದಾರೆಯೇ ಎಂಬ ಪ್ರಶ್ನೆಗೆ, ರಿಜಿಜು ಅವರು ಅಂತಹ ಯಾವುದೇ ಪ್ರಸ್ತಾಪವನ್ನು ಮಾಡಲಿಲ್ಲ. ಆದರೆ ದೇಶದ ಪ್ರಧಾನಿ ಮಾತನಾಡಿದರೆ ಅದು ಎಲ್ಲರಿಗೂ ಸಂದೇಶವಾಗಿರುತ್ತದೆ ಎಂದು ಹೇಳಿರುವುದಾಗಿ ತಿಳಿಸಿದರು.

ಮೈತ್ರಿಕೂಟದ ಸಭೆಯಲ್ಲಿ, ಮೋದಿ ಅವರು 'ಐತಿಹಾಸಿಕ' ಮೂರನೇ

ಎನ್‌ಡಿಎ ಸಭೆಯಲ್ಲಿ ಮೋದಿ

ಅವಧಿಗೆ ಪ್ರಧಾನಿಯಾಗಿದ್ದಕ್ಕೆ ಎನ್‌ಡಿಎ ನಾಯಕರು ಅವರನ್ನು ಅಭಿನಂದಿಸಿದರು ಎಂದು ರಿಜಿಜು ಹೇಳಿದರು. ಮಾಧ್ಯಮಗಳ ಮುಂದೆ ಯಾವುದೇ ವಿಷಯದ ಬಗ್ಗೆ ಕಾಮೆಂಟ್ ಮಾಡುವ ಮುನ್ನ ವಿಷಯದ ಬಗ್ಗೆ ಸಂಪೂರ್ಣ ತಿಳಿದುಕೊಂಡಿರಬೇಕು ಎಂದು ಪ್ರಧಾನಿ ಹೇಳಿದರು ಮತ್ತು ಸಂಸದರು ತಮ್ಮ ಕ್ಷೇತ್ರಗಳೊಂದಿಗೆ ಸದಾ ಸಂಪರ್ಕದಲ್ಲಿರಬೇಕು ಮತ್ತು ಅವರ ಬೆಂಬಲಕ್ಕಾಗಿ ಮತದಾರರಿಗೆ ಧನ್ಯವಾದ ಹೇಳಬೇಕು ಎಂದು ಹೇಳಿರುವುದಾಗಿ ಮೂಲಗಳು ತಿಳಿಸಿವೆ. ಯಾವುದೇ ಪಕ್ಷದವರಾಗಿರಲಿ ರಾಷ್ಟ್ರಸೇವೆ ಎಂಬುದು ಪ್ರತಿಯೊಬ್ಬ ಸಂಸದನಿಗೂ ಮೊದಲ ಜವಾಬ್ದಾರಿಯಾಗಿರಬೇಕು, ಬೇರೆಯವರನ್ನು ಟೀಕಿಸುವ ಮುನ್ನ ವಿಷಯಗಳ ಅಧ್ಯಯನ ಮಾಡಬೇಕು ಎಂದು ಮೋದಿ ಸಂಸದರಿಗೆ ಸಲಹೆ ನೀಡಿದ್ದಾರೆ.

ಸೋಮವಾರ ಲೋಕಸಭೆಯಲ್ಲಿ ಬಿಜೆಪಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ, ಆಡಳಿತ ಪಕ್ಷದ ನಾಯಕರು ಕೋಮು ವಾದದ ಆಧಾರದ ಮೇಲೆ ಜನರನ್ನು ವಿಭಜಿಸುತ್ತಿದ್ದಾರೆ ಎಂದು ಆರೋಪಿಸಿದ್ದರು. ರಾಹುಲ್ ಗಾಂಧಿ ಭಾಷಣದ ಹಲವು ಭಾಗಗಳನ್ನು ತೆಗೆದುಹಾಕಲಾಗಿದೆ. ಹಿಂದೂಗಳು ಮತ್ತು ಪಿಎಂ ನರೇಂದ್ರ ಮೋದಿ–ಬಿಜೆಪಿ–ಆರ್‌ಎಸ್‌ಎಸ್ ಬಗ್ಗೆ ಮಾತನಾಡಿ ರಾಹುಲ್ ಗಾಂಧಿ ವಿವಾದ ಸೃಷ್ಟಿಸಿದ್ದನ್ನು ಕಡತದಿಂದ ತೆಗೆದುಹಾಕಲಾಗಿದೆ.

99 ಅಂಕ ಪಡೆದ 'ಮಗು'!: ಪರೋಕ್ಷವಾಗಿ ರಾಹುಲ್ ಗಾಂಧಿ ಲೇವಡಿ ಮಾಡಿದ ಪ್ರಧಾನಿ

ನವದೆಹಲಿ, ಜು.2– ಮೂರನೇ ಬಾರಿಗೆ ಪ್ರಧಾನಮಂತ್ರಿಯಾದ ಬಳಿಕ ಮೊದಲ ಬಾರಿಗೆ ನರೇಂದ್ರ ಮೋದಿ ಇಂದು ಲೋಕಸಭಾ ಅಧಿವೇಶನದಲ್ಲಿ ಭಾಷಣ ಮಾಡಿದ್ದಾರೆ. ಈ ವೇಳೆ ಪ್ರತಿಪಕ್ಷಗಳು ಮತ್ತು ಕಾಂಗ್ರೆಸ್‌ನ ರಾಹುಲ್ ಗಾಂಧಿಯವರ ವಿರುದ್ಧ ವಾಗ್ದಾಳಿ ನಡೆಸಿದ ಪ್ರಧಾನಿ ನರೇಂದ್ರ ಮೋದಿ, ಬಿಜೆಪಿ ಸರ್ಕಾರವು ಇಂಡಿಯಾ ಬ್ಲಾಕ್ ಸಂಸದರ ನಿರಂತರ ಘೋಷಣೆಗಳ ನಡುವೆ 'ತುಷ್ಟೀಕರಣ'ವನ್ನು ಅನುಸರಿಸದೆ 'ಸಂತುಷ್ಟೀಕರಣ'ವನ್ನು ಅನುಸರಿಸಿದೆ ಎಂದು ಹೇಳಿದರು. ಹಾಗೇ, ಕಾಂಗ್ರೆಸ್ ಸಂಸದ ಹಾಗೂ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಇನ್ನೂ ಮಗು ಎಂದು ಲೇವಡಿ ಮಾಡಿದ್ದಾರೆ.



ತುಷ್ಟೀಕರಣ ರಾಜಕಾರಣವನ್ನು ದೇಶ ಬಹುಕಾಲ ನೋಡಿದೆ. ನಾವು ತುಷ್ಟಿಕರಣ ವನ್ನಲ್ಲ 'ಸಂತುಷ್ಟಿಕರಣ'ವನ್ನು ಅನುಸರಿಸಿದ್ದೇವೆ. ಎಲ್ಲರಿಗೂ ನ್ಯಾಯ ಎಂಬುದು ನಮ್ಮ ಧ್ಯೇಯ. 'ಇದು ಕಾಂಗ್ರೆಸ್‌ನ ಇತಿಹಾಸದಲ್ಲಿ ಮೂರನೇ ಅತಿ ದೊಡ್ಡ ಸೋಲು. ಕಾಂಗ್ರೆಸ್ ತನ್ನ ಸೋಲನ್ನು ಒಪ್ಪಿಕೊಂಡು ಜನರ ಆದೇಶವನ್ನು ಗೌರವಿಸಿದ್ದರೆ ಅದು ಉತ್ತಮವಾಗಿರುತ್ತಿತ್ತು. ಆದರೆ, ಅವರು ಕೆಲವು 'ಶೀರ್ಷಾಸನ' ಮಾಡುವಲ್ಲಿ ನಿರತರಾಗಿದ್ದಾರೆ. ಕಾಂಗ್ರೆಸ್ ನವರೇ ನಮ್ಮನ್ನು ಸೋಲಿಸಿದ್ದಾರೆ ಎಂದು ಭಾರತದ ನಾಗರಿಕರ ಮನಸ್ಸಿನಲ್ಲಿ ಅಭಿಪ್ರಾಯ ಮೂಡಿಸುವ ಹೇಳಿಕೆಗಳನ್ನು ನೀಡುತ್ತಾ ಓಡಾಡುತ್ತಿದ್ದಾರೆ. ಒಟ್ಟಾರೆಯಾಗಿ ಮಗುವಿಗೆ ಮನರಂಜನೆ ನೀಡುವ ಕೆಲಸ ನಡೆಯುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಲೇವಡಿ ಮಾಡಿದ್ದಾರೆ.

ಮಗುವಿನ ಕತೆ ಹೇಳಿದ ಮೋದಿ: ಪ್ರಧಾನಿ ನರೇಂದ್ರ ಮೋದಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು 'ಮಗು' ಎಂದು ಬಣ್ಣಿಸಿದ್ದಾರೆ. ರಾಹುಲ್ ಗಾಂಧಿಯನ್ನು ಗುರಿಯಾಗಿಸಲು ಶಾಲಾ ಮಗುವಿನ ಕತೆಯೊಂದನ್ನು ಹೇಳಿದ ಅವರು, ನಮ್ಮ ಈ ಮಗು ಸೋಲಿನಲ್ಲಿ 'ಹೊಸ ವಿಶ್ವ ದಾಖಲೆ' ಮಾಡಿದೆ ಎಂದು ತಮಾಷೆ ಮಾಡಿದ್ದಾರೆ.

1984ರ ಚುನಾವಣೆಯನ್ನು ನೆನಪಿಸಿ ಕೊಳ್ಳೋಣ. ಆ ಚುನಾವಣೆಗಳ ನಂತರ ಈ ದೇಶದಲ್ಲಿ 10 ಲೋಕಸಭೆ ಚುನಾವಣೆಗಳು ನಡೆದವು, ಆದರೆ ಒಮ್ಮೆಯೂ ಕಾಂಗ್ರೆಸ್ 250ರ ಗಡಿ ದಾಟಲು ಸಾಧ್ಯವಾಗಲಿಲ್ಲ. ಈ ಬಾರಿ ಕಾಂಗ್ರೆಸ್ 99 ಸ್ಥಾನಗಳನ್ನು ಗಳಿಸಿತು. ಇದು ಮಗುವಿನ ಕತೆಯನ್ನು ನೆನಪಿಗೆ ತರುತ್ತದೆ. ಮಗುವೊಂದು ತಾನು 99 ಅಂಕಗಳನ್ನು ಪಡೆದಿದ್ದೇನೆ ಎಂದು ಎಲ್ಲರಿಗೂ ಹೇಳಿಕೊಂಡು ಖುಷಿಪಡುತ್ತಿತ್ತು. ಅದನ್ನು ಕೇಳಿ ಎಲ್ಲರೂ ಆ ಮಗುವಿನ ಬೆನ್ನು ತಟ್ಟುತ್ತಿದ್ದರು. ಆಗ ಬಂದ ಟೀಚರ್ ಆ ಮಗುವಿನ ಬಳಿ ನೀನೇಕೆ ಸ್ವೀಟ್ ಹಂಚುತ್ತಿದ್ದೀಯಾ? ಎಂದು ಕೇಳಿ ದರು. ವಾಸ್ತವದ ವಿಷಯ ಏನೆಂದರೆ ಆ ಮಗು 100ಕ್ಕೆ 99 ಅಂಕ ಪಡೆದಿದೆ ಎಂದು ಎಲ್ಲರೂ ಭಾವಿಸಿದ್ದರು. ಆದರೆ, ಆ ಮಗುವಿಗೆ 543ರಲ್ಲಿ 99 ಅಂಕ ಪಡೆದಿತ್ತು. ಆ ಮಗು ವಿಫಲತೆಯಲ್ಲಿ ವಿಶ್ವ ದಾಖಲೆ ನಿರ್ಮಿಸಿತ್ತು ಎಂಬುದನ್ನು ಆ ಮಗುವಿಗೆ ಅರ್ಥ ಮಾಡಿಸುವವರು ಯಾರು? ಎಂದು ಮೋದಿ ಹಾಸ್ಯಾಸ್ಪದವಾಗಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯ ಕಾಲೆಳೆದಿದ್ದಾರೆ.

ರಾಷ್ಟ್ರಪತಿಗಳ ಭಾಷಣಕ್ಕೆ ವಂದನಾ ನಿರ್ಣಯದ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದ ಪ್ರಧಾನಿ ಮೋದಿ, ಭ್ರಷ್ಟಾಚಾರದ ವಿರುದ್ಧ ಶೂನ್ಯ ಸಹಿಷ್ಣುತೆಯ ನೀತಿಗಾಗಿ ದೇಶವು ಎನ್‌ಡಿಎಗೆ ಮತ ಹಾಕಿದೆ. 2047ರ ಭಾರತ ಸಂಪೂರ್ಣವಾಗಿ ಬದಲಾಗಿರಲಿದೆ. ನಾವು ಜನರಿಗಾಗಿ 24 ಗಂಟೆಯೂ ಕೆಲಸ ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ.

ಇಂಡಿಯಾ ಬ್ಲಾಕನ್ನು ಕಾಂಗ್ರೆಸ್ ಪರಿಸರ ವ್ಯವಸ್ಥೆ ಎಂದು ಕರೆದ ಪ್ರಧಾನಿ ಮೋದಿ, ಪ್ರತಿಪಕ್ಷಗಳು ಎನ್‌ಡಿಎಯನ್ನು ಸೋಲಿಸಿದೆ ಎಂದು ಬಿಂಬಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ಹೇಳಿದ್ದಾರೆ. ಕಾಂಗ್ರೆಸ್ ಮತ್ತು ಅದರ ಪರಿಸರ ವ್ಯವಸ್ಥೆಯು ನಮ್ಮನ್ನು ಸೋಲಿಸಿದೆ ಎಂದು ಜನರ ಮೇಲೆ ಪ್ರಭಾವ ಬೀರಲು ಪ್ರಯತ್ನಿಸುತ್ತಿದೆ. ಕಾಂಗ್ರೆಸ್‌ಗೆ ಜನರ ಜನಾದೇಶವೆಂದರೆ ವಿರೋಧ ಪಕ್ಷದಲ್ಲಿ ಕುಳಿತುಕೊಳ್ಳುವುದು. ಕಾಂಗ್ರೆಸ್ ಸತತ ಮೂರು ಬಾರಿ 100 ಅಂಕಗಳನ್ನು ದಾಟಲು ಸಾಧ್ಯವಾಗಲಿಲ್ಲ ಎಂದು ಅವರು ಟೀಕಿಸಿದ್ದಾರೆ. ಇಂದು ಸದನದಲ್ಲಿ ಪ್ರಧಾನಿ ಮೋದಿ ಮಾತನಾಡಲು ಪ್ರಾರಂಭಿಸುತ್ತಿದ್ದಂತೆ ಪ್ರತಿಪಕ್ಷದ ಸದಸ್ಯರು ಮಣಿಪುರಕ್ಕೆ ನ್ಯಾಯ ಎಂದು ಕೂಗಲು ಪ್ರಾರಂಭಿಸಿದರು. ಅಲ್ಲದೆ, ಪ್ರತಿಭಟಿಸಲು ಸದನದ ಬಾವಿಗೆ ಪ್ರವೇಶಿಸಿದರು. ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಬಾವಿಗೆ ಪ್ರವೇಶಿಸಲು ಸೂಚಿಸಿದ್ದಕ್ಕಾಗಿ ಕಿಡಿಕಾರಿದರು.

ಪೌರ ಕಾರ್ಮಿಕರಿಗೆ ವಾರದ ರಜೆ



ಬೆಂಗಳೂರು, ಜು.2– ಕರ್ನಾಟಕದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೌರ ಕಾರ್ಮಿಕರಿಗೆ ವಾರಕ್ಕೆ ಒಂದು ದಿನ ಪೂರ್ತಿ ರಜೆ ನೀಡಿ ನಗರಾಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದೆ. ಈವರೆಗೆ ಪೌರಕಾರ್ಮಿಕರಿಗೆ ವಾರದಲ್ಲಿ ಎರಡು ಬಾರಿ ಅರ್ಧ ದಿನದ ರಜೆ ನೀಡಲಾಗುತ್ತಿತ್ತು. ಇದರಿಂದ ತೊಂದರೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ವಾರದ ಒಂದು ದಿನ ಸಂಪೂರ್ಣ ರಜೆ ನೀಡಬೇಕು ಎಂದು ಪೌರ ಕಾರ್ಮಿಕರು ಮನವಿ ಮಾಡಿದ್ದರು. ಇದೀಗ ನಗರಾಭಿವೃದ್ಧಿ ಇಲಾಖೆ ಪೌರಕಾರ್ಮಿಕರ ಮನವಿಗೆ ಸ್ಪಂದಿಸಿದ್ದು, ನಿತ್ಯದ ಕೆಲಸಕ್ಕೆ ತೊಂದರೆ ಆಗದಂತೆ ವ್ಯವಸ್ಥೆ ಮಾಡಿಕೊಂಡು ಇಡೀ ದಿನದ ರಜೆ ನೀಡಲು ಆದೇಶಿಸಿದೆ.

ಷರತ್ತುಗಳು

- ದಿನನಿತ್ಯದ ಸ್ವಚ್ಛತಾ ಕೆಲಸ, ಕಾರ್ಯಗಳಿಗೆ ತೊಂದರೆಯಾಗದಂತೆ ಶೇ.85 ಹಾಜರಾತಿ ಖಚಿತಪಡಿಸಿ ಕೊಂಡು ಒಂದು ರಜೆ ನೀಡುವುದು.
- ನಗರ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯ ಸ್ವಚ್ಛತಾ ಕಾರ್ಯಕ್ಕೆ ಈಗಾಗಲೇ ನೇಮಿಸಿರುವ ಸಿಬ್ಬಂದಿಗೆ ವಾರದ ರಜೆ ನೀಡುವ ಸಂದರ್ಭದಲ್ಲಿ ಬೇರೊಬ್ಬ ನೌಕರರನ್ನು ಆ ಕಾರ್ಯಕ್ಕೆ ನಿಯೋಜಿಸುವ ಮೇರೆಗೆ ರಜೆಯ ಅವಶ್ಯಕತೆಯಿರುವ ಪೌರಕಾರ್ಮಿಕರಿಗೆ ವಾರದಲ್ಲಿ ಒಂದು ದಿನ ರಜೆ ನೀಡಲು ಅವಕಾಶ ಕಲ್ಪಿಸಬಹುದು.
- ವಾರದ ರಜೆಯನ್ನು ನೌಕರರು, ಪೌರಕಾರ್ಮಿಕರ ಹಕ್ಕು ಎಂದು ಪರಿಗಣಿಸತಕ್ಕದ್ದಲ್ಲ ಹಾಗೂ ಒಂದು ವಾರದ ಒಂದು ರಜೆಯನ್ನು ಮುಂದಿನ ವಾರಕ್ಕೆ ಹಿಂಬಾಕಿ ಎಂದು ಪರಿಗಣಿಸಿ ಸತತವಾಗಿ ರಜೆ ಪಡೆಯಲು ಅವಕಾಶವಿರುವುದಿಲ್ಲ.
- ಪ್ರಕೃತಿ ವಿಕೋಪ, ಸ್ಥಳೀಯ ಜಾತ್ರೆ, ಸಭೆ ಸಮಾರಂಭಗಳ ವಿಶೇಷ ಸಂದರ್ಭಗಳಲ್ಲಿ ವಾರದ ರಜೆಯನ್ನು ಕಡ್ಡಾಯವಾಗಿ ನೀಡಬೇಕೆಂದು ಒತ್ತಾಯಿಸುವಂತಿಲ್ಲ ಹಾಗೂ ಈ ಸಂದರ್ಭದಲ್ಲಿ ವಾರದ ರಜೆ ನೀಡುವ ಅಧಿಕಾರ ಆಯಾ ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರ ವಿವೇಚನೆಗೆ ಒಳಪಟ್ಟಿರುತ್ತದೆ.
- ರಜೆಯ ಮೇಲೆ ತೆರಳಿದ ನೌಕರ, ಪೌರ ಕಾರ್ಮಿಕರ ವ್ಯಾಪ್ತಿಗೆ ಸೇರಿದ ಪ್ರದೇಶದ ಸ್ವಚ್ಛತಾ ಕಾರ್ಯವನ್ನು ಸಾರ್ವಜನಿಕರಿಗೆ ತೊಂದರೆಯಾಗದಂತೆ ಕೆಲಸಕ್ಕೆ ಹಾಜರಾಗಿರುವ ಇತರೆ ಸಿಬ್ಬಂದಿ ಸ್ವಚ್ಛಗೊಳಿಸಬೇಕು.
- ಪ್ರಸ್ತುತ ಪೌರಕಾರ್ಮಿಕರಿಗೆ ವಾರಕ್ಕೆ ಎರಡು ಬಾರಿ ಅರ್ಧ ದಿನ ರಜೆ ನೀಡಲಾಗುತ್ತಿತ್ತು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೆಲಸ ಮಾಡುವ ಪೌರಕಾರ್ಮಿಕರಿಗೆ ಬುಧವಾರ, ಭಾನುವಾರ 11 ಗಂಟೆವರೆಗೂ ಕೆಲಸ ಆಮೇಲೆ ರಜೆ ನೀಡಲಾ ಗುತ್ತಿತ್ತು, ಇದೀಗ ವಾರದಲ್ಲಿ ಒಂದು ದಿನ ಪೂರ್ತಿ ರಜೆ ನೀಡಲು ಸರ್ಕಾರ ಕ್ರಮ ಕೈಗೊಂಡಿದೆ.

ಲೋಕಸಭೆಯಲ್ಲಿ ರಾಹುಲ್‌ಗಾಂಧಿ ಭಾಷಣಕ್ಕೆ ಕತ್ತರಿ

ವಾಸ್ತವದಲ್ಲಿ ಸತ್ಯವನ್ನು ತೆಗೆದುಹಾಕಲು ಸಾಧ್ಯವಿಲ್ಲ: ರಾಹುಲ್‌ಗಾಂಧಿ



ನವದೆಹಲಿ, ಜು.2– ಅಲ್ಪಸಂಖ್ಯಾತರು, ನೀಟ್ ವಿವಾದ ಮತ್ತು ಅಗ್ನಿಪಥ್ ಯೋಜನೆ ಸೇರಿದಂತೆ ವಿವಿಧ ವಿಷಯಗಳ ಕುರಿತು ಕೇಂದ್ರ ಸರ್ಕಾರವನ್ನು ಗುರಿಯಾಗಿಸಿಕೊಂಡು ಲೋಕಸಭೆಯಲ್ಲಿ ನಿನ್ನೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮಾಡಿದ ಚೊಚ್ಚಲ ಭಾಷಣದ ಹಲವು ಭಾಗಗಳನ್ನು ಸ್ಪೀಕರ್ ಆದೇಶ ಮೇರೆಗೆ ಸಂಸತ್ತಿನ ದಾಖಲೆಗಳಿಂದ ತೆಗೆದುಹಾಕಲಾಗಿದೆ.

ತೆಗೆದುಹಾಕಲಾದ ಭಾಗಗಳಲ್ಲಿ ಹಿಂದೂಗಳು ಮತ್ತು ಪಿಎಂ ನರೇಂದ್ರ ಮೋದಿ–ಬಿಜೆಪಿ–ಆರ್‌ಎಸ್‌ಎಸ್ ಇತರರ ಬಗ್ಗೆ ಅವರ ಮಾತುಗಳು ಕೂಡ ಸೇರಿವೆ.

ನಿನ್ನೆ ಮಧ್ಯಾಹ್ನ ಲೋಕಸಭೆಯಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲಿನ ಚರ್ಚೆಯ ವೇಳೆ ರಾಹುಲ್ ಗಾಂಧಿ ಅವರು ತಮ್ಮ ಭಾಷಣದಲ್ಲಿ, ಬಿಜೆಪಿ ಮತ್ತು ಆರ್‌ಎಸ್‌ಎಸ್ ಬೋಧನೆ ದೇಶದಲ್ಲಿ ಹಿಂಸೆ ಮತ್ತು ದ್ವೇಷವನ್ನು ಹರಡುತ್ತಿದೆ ಎಂದು ಆರೋಪಿಸಿದರು. ಅವರ ಹೇಳಿಕೆಗಳಿಗೆ ಆಡಳಿತ ಪಕ್ಷದ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಭಾರತೀಯ ಜನತಾ ಪಕ್ಷ ಮತ್ತು ಕೇಂದ್ರ ಸಚಿವರಾದ ಅಮಿತ್ ಶಾ ಮತ್ತು ರಾಜನಾಥ್ ಸಿಂಗ್ ಸೇರಿದಂತೆ ಇತರರು ರಾಹುಲ್ ಗಾಂಧಿ ಮಾತಿಗೆ ಆಕ್ಷೇಪ ವ್ಯಕ್ತಪಡಿಸಿದರು. ರಾಹುಲ್ ಗಾಂಧಿ ಸುಳ್ಳು ಮಾತನಾಡುತ್ತಿದ್ದಾರೆ, ಸದನವನ್ನು ದಾರಿ ತಪ್ಪಿಸುತ್ತಿದ್ದಾರೆ, ಇಡೀ ಹಿಂದೂ ಸಮುದಾಯವನ್ನು ಹಿಂಸಾತ್ಮಕ ಎಂದು ಟೀಕಿಸುತ್ತಿದ್ದಾರೆ ಎಂದು ಆರೋಪಿಸಿದರು. ಇದಕ್ಕೆ ಮೋದಿ ಸರ್ಕಾರದ ವಿರುದ್ಧ ಪ್ರತ್ಯಾರೋಪಗಳ ಮೂಲಕ ಕಾಂಗ್ರೆಸ್ ತಿರುಗೇಟು ನೀಡಿದೆ. ಭಗವಾನ್ ಶಿವ, ಪ್ರವಾದಿ ಮೊಹಮ್ಮದ್, ಗುರುನಾನಕ್, ಜೀಸಸ್ ಕ್ರೈಸ್ಟ್, ಭಗವಾನ್ ಬುಧ ಮತ್ತು ಭಗವಾನ್ ಮಹಾವೀರರನ್ನು ಉಲ್ಲೇಖಿಸಿದ ರಾಹುಲ್ ಗಾಂಧಿ, ಅವರ ಬೋಧನೆಗಳಿಂದ ನಿರ್ಭಯತೆಯ ಕಲ್ಪನೆಯನ್ನು ತೆಗೆದುಕೊಂಡಿದ್ದೇನೆ ಎಂದು ಹೇಳಿದರು. ಪ್ರಧಾನಿ ಮೋದಿ ಭಾಷಣದ ವೇಳೆ ರಾಹುಲ್ ಗಾಂಧಿ ವಿರುದ್ಧ ವಾಗ್ದಾಳಿ ನಡೆಸಿದರು. ಇಡೀ ಹಿಂದೂ ಸಮುದಾಯ ವನ್ನು ಹಿಂಸಾತ್ಮಕ ಎಂದು ಕರೆಯುವುದು ಬಹಳ ಗಂಭೀರವಾದ ವಿಷಯ ಎಂದು ಪ್ರಧಾನಿ ಹೇಳಿದರು. ರಾಹುಲ್ ಗಾಂಧಿ ಕ್ಷಮೆಯಾಚಿಸಬೇಕು ಎಂದು ಗೃಹ ಸಚಿವ ಅಮಿತ್ ಶಾ ಆಗ್ರಹಿಸಿದರು. ರಾಹುಲ್ ಗಾಂಧಿ ಹೇಳಿಕೆಯನ್ನು ಖಂಡಿಸಲು ಬಿಜೆಪಿ ನಂತರ ಪತ್ರಿಕಾಗೋಷ್ಠಿ ನಡೆಸಿದರೆ, ಕಾಂಗ್ರೆಸ್ ಕೂಡ ಕೇಂದ್ರದ ಆಡಳಿತ ಪಕ್ಷವನ್ನು ತರಾಟೆಗೆ ತೆಗೆದುಕೊಳ್ಳಲು ಸಂಜೆ ಪತ್ರಿಕಾಗೋಷ್ಠಿ ನಡೆಸಿತು.

ರಾಹುಲ್ ಗಾಂಧಿ ಪ್ರತಿಕ್ರಿಯೆ: ತಮ್ಮ ಭಾಷಣದ ಭಾಗಗಳನ್ನು ಹೊರಹಾಕಿದ್ದಕ್ಕೆ ಇಂದು ಸಂಸತ್ತು ಕಲಾಪಕ್ಕೆ ತೆರಳುವ ವೇಳೆ ಮಾಧ್ಯಮ ಪ್ರತಿನಿಧಿಗಳಿಗೆ ಪ್ರತಿಕ್ರಿಯೆ ನೀಡಿರುವ ರಾಹುಲ್ ಗಾಂಧಿ, ಮೋದಿಯವರೇ ಜಗತ್ತಿನಲ್ಲಿ ಸತ್ಯವನ್ನು ಹೊರಹಾಕಬಹುದು. ಆದರೆ ವಾಸ್ತವದಲ್ಲಿ ಸತ್ಯವನ್ನು ಹೊರಹಾಕಲು ಸಾಧ್ಯವಿಲ್ಲ. ನಾನು ಹೇಳಬೇಕಾಗಿದ್ದನ್ನು ಹೇಳಿದ್ದೇನೆ, ಅದು ಸತ್ಯ ಎಂದಿದ್ದಾರೆ.

ಸೋನಿಯಾ ಗಾಂಧಿ, ಜನರಿಂದ ನಾನಿಂದು ಇಲ್ಲಿದ್ದೇನೆ, ನಿಮ್ಮಿಂದ ಅಲ್ಲ

ಸಭಾಪತಿ ಛೀಮಾರಿಗೆ ಖರ್ಗೆ ಪ್ರತ್ಯುತ್ತರ

ನವದೆಹಲಿ, ಜು.2– ರಾಜ್ಯಸಭೆಯಲ್ಲಿ ಇಂದು ಸಭಾಪತಿ ಜಗದೀಪ್ ಧನ್‌ಕರ್ ಮತ್ತು ಕಾಂಗ್ರೆಸ್ ಅಧ್ಯಕ್ಷ, ಹಿರಿಯ ಸಂಸದ ಮಲ್ಲಿಕಾರ್ಜುನ ಖರ್ಗೆ ನಡುವೆ ತೀವ್ರ ಮಾತಿನ ಚಕಮಕಿ ನಡೆಯಿತು. ಈಮಧ್ಯೆ, ರಾಜ್ಯಸಭಾ ಅಧ್ಯಕ್ಷ ಜಗದೀಪ್ ಧನಖರ್ ಅವರು ಮಲ್ಲಿಕಾರ್ಜುನ ಖರ್ಗೆ ಅವರಿಗೆ ಛೀಮಾರಿ ಹಾಕಿದ ಪ್ರಸಂಗ ನಡೆಯಿತು. ನೀವು ಸಭಾಪತಿ ಸ್ಥಾನಕ್ಕೆ ಅಗೌರವ ತೋರಿಸುತ್ತಿದ್ದೀರಿ ಎಂದು ಆರೋಪಿಸಿದರು.



ನೀವು ಪ್ರತಿ ಬಾರಿಯೂ ಈ ಸ್ಥಾನಕ್ಕೆ ಅಗೌರವ ತೋರಬಾರದು. ನಾನು ಏನು ಹೇಳುತ್ತಿದ್ದೇನೆಂದು ಅರ್ಥಮಾಡಿಕೊಳ್ಳದೆ ನೀವು ಏಕಾಏಕಿ ನಿಂತು ನಿಮಗೆ ಬೇಕಾದುದನ್ನು ಮಾತನಾಡುತ್ತೀರಿ ಎಂದು ರಾಜ್ಯಸಭಾಧ್ಯಕ್ಷರು ಸಿಟ್ಟಿನಿಂದ ಹೇಳಿದರು.

ಈ ದೇಶದ ಮತ್ತು ಸಂಸದೀಯ ಪ್ರಜಾಪ್ರಭುತ್ವ ಮತ್ತು ರಾಜ್ಯಸಭೆಯ ಕಲಾಪಗಳ ಇತಿಹಾಸದಲ್ಲಿ ಎಂದಿಗೂ ಸದಸ್ಯರು ಅಗೌರವ ತೋರಿಸಿದ ಸಂದರ್ಭ ಉಂಟಾಗಿರಲಿಲ್ಲ. ನಿಮ್ಮ ಘನತೆಯನ್ನು ಹಲವಾರು ಬಾರಿ ನೀವೇ ಹಾಳು ಮಾಡಿಕೊಂಡಿದ್ದೀರಿ. ನಾನು ನಿಮ್ಮ ಘನತೆಯನ್ನು ಕಾಪಾಡಲು ಯಾವಾಗಲೂ ಪ್ರಯತ್ನಿಸುತ್ತೇನೆ ಎಂದು ಸಭಾಪತಿಗಳು ಹೇಳಿದರು. ಈ ವೇಳೆ ಎದ್ದುನಿಂತ ಜೈರಾಮ್ ರಮೇಶ್ ಅವರಿಗೆ ಸಭಾಪತಿಗಳು, ನೀವು ತುಂಬಾ ಬುದ್ಧಿವಂತರು, ತುಂಬಾ ಪ್ರತಿಭಾವಂತರಿದ್ದೀರಿ. ನೀವು ತಕ್ಷಣ ಬಂದು ಖರ್ಗೆ ಅವರ ಸ್ಥಾನದಲ್ಲಿ ಕುಳಿತುಕೊಳ್ಳಬೇಕು. ನೀವು ಅವರ ಕೆಲಸವನ್ನು ಮಾಡುತ್ತಿದ್ದೀರಿ, ನಿಮಗೆ ಅದೇ ಸೂಕ್ತ ಎಂದು ವ್ಯಂಗ್ಯವಾಗಿ ಹೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ಖರ್ಗೆಯವರು, ಸೋನಿಯಾಗಾಂಧಿ ಕಡೆ ಕೈ ತೋರಿಸಿ, ನನ್ನನ್ನು ಈ ಸ್ಥಾನಕ್ಕೆ ತಂದವರು ಇಲ್ಲಿ ಕುಳಿತಿದ್ದಾರೆ, ಯಾವ ಜೈರಾಮ್ ರಮೇಶ್ ನನ್ನನ್ನು ಈ ಸ್ಥಾನಕ್ಕೆ ತಂದಿಲ್ಲ ಎಂದರು. ವರ್ಣ (ಜಾತಿ) ವ್ಯವಸ್ಥೆ ನಿಮ್ಮ ಮನಸ್ಸಿನಲ್ಲಿ ಇನ್ನೂ ಇದೆ. ಅದಕ್ಕಾಗಿಯೇ ನೀವು ರಮೇಶ್ ಅವರನ್ನು ತುಂಬಾ ಬುದ್ಧಿವಂತ ಎಂದು ಕರೆಯುತ್ತಿದ್ದೀರಿ ಮತ್ತು ನಾನು ದಡ್ಡನಿರಬಹುದು ಎಂದರು.

ಮುಡಾ ಹಗರಣ: ಮೈಸೂರು ಗ್ರಾಹಕರ ಪರಿಷತ್ ಸಭೆ

ಮೈಸೂರು, ಜು.2(ಎಸ್‌ಪಿಎನ್)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಕೋಟ್ಯಾಂತರ ರೂ. ಹಗರಣ ನಡೆದಿದ್ದು, ಈ ಬಗ್ಗೆ ಚರ್ಚಿಸಲು ಮೈಸೂರು ಗ್ರಾಹಕರ ಪರಿಷತ್ ಜು.4ರಂದು ಸಂಜೆ 4 ಗಂಟೆಗೆ ಯಾದವಗಿರಿಯ ವಿವೇಕಾನಂದ ರಸ್ತೆಯಲ್ಲಿರುವ ಮೈಗ್ರಾಪ ಕಚೇರಿಯಲ್ಲಿ ಸದಸ್ಯರ ಸಭೆ ಕರೆದಿದೆ. ಮುಡಾದಲ್ಲಿ ಬೆಲೆಬಾಳುವ ನಿವೇಶನ ಉಳ್ಳುವರ ಪಾಲಾಗಿದ್ದು, ಬಾರೀ ಹಗರಣ ನಡೆದಿದೆ. ರಾಜಕಾರಣಿಗಳು, ಅಧಿಕಾರಿಗಳ ಕೈವಾಡ ಇರುವ ಹಿನ್ನೆಲೆಯಲ್ಲಿ ಈ ಬೃಹತ್ ಹಗರಣವನ್ನು ಸಿಬಿಐ ಅಥವಾ ಹೈಕೋರ್ಟ್ ಹಾಲಿ ನ್ಯಾಯಾಮೂರ್ತಿಗಳ ನೇತೃತ್ವದಲ್ಲಿ ತನಿಖೆ ನಡೆಸುವಂತೆ ಸಭೆಯಲ್ಲಿ ಚರ್ಚಿಸಿ ಒತ್ತಾಯಿಸಲಾಗುವುದು. ಹೆಚ್ಚಿನ ವಿವರಗಳಿಗೆ ದೂ.ಸಂ:0821–2515150ಅನ್ನು ಸಂಪರ್ಕಿಸಬಹುದು ಎಂದು ಮೈಗ್ರಾಪ ಕಚೇರಿ ನೀಡಿರುವ ಪ್ರಕಟಣೆಯಲ್ಲಿ ತಿಳಿಸಿದೆ.

ಇಸ್ಪೀಟ್ ಅಡ್ಡೆ ಮೇಲೆ ದಾಳಿ: ನದಿಗೆ ಹಾರಿದ ಆರು ಮಂದಿ ಸಾವಿನ ಶಂಕೆ

ವಿಜಯಪುರ: ಜಿಲ್ಲೆಯ ಕೊಲ್ಹಾರ ತಾಲ್ಲೂಕಿನ ಹಳೇ ಬಳೂತಿ ಬಳಿ ಕೃಷ್ಣಾ ನದಿ ತೀರದಲ್ಲಿ ಇಸ್ಪೀಟ್ ಆಡುತ್ತಿದ್ದ ಗುಂಪಿನ ಮೇಲೆ ಪೊಲೀಸರು ಮಂಗಳವಾರ ಸಂಜೆ ದಾಳಿ ನಡೆಸಿದ್ದು, ಈ ಸಂದರ್ಭದಲ್ಲಿ ಪೊಲೀಸರಿಂದ ತಪ್ಪಿಸಿಕೊಳ್ಳಲು ತೆಪ್ಪ ಏರಿ ಹೊರಟ ಆರು ಜನ ನದಿಯಲ್ಲಿ ಮುಳುಗಿ ಸಾವಿಗೀಡಾಗಿರುವ ಶಂಕೆ ವ್ಯಕ್ತವಾಗಿದೆ.

ಕೊಲ್ಹಾರ ಪಟ್ಟಣದ ನಿವಾಸಿಗಳಾದ ಮಹಿಬೂಬ್ ವಾಲಿಕಾರ(30), ತಯ್ಯಬ್ ಚೌಧರಿ(42), ರಫೀಕ್ ಜಾಲಗಾರ ಅಲಿಯಾಸ್ ಬಾಂದೆ(55), ಪುಂಡಲೀಕ ಮಲ್ಲಪ್ಪ ಯಂಕಂಚಿ(36), ದಶರಥ ಗೌಡರ ಸೂಳಿಬಾವಿ(66) ಸಾವಿಗೀಡಾಗಿದ್ದಾರೆ ಎಂದು ಸ್ಥಳೀಯರು ತಿಳಿಸಿದ್ದಾರೆ. ಸಾವಿಗೀಡಾಗಿರುವ ಇನ್ನೊಬ್ಬರ ಹೆಸರು ತಿಳಿದುಬಂದಿಲ್ಲ. ಅಗ್ನಿ ಶಾಮಕ ಸಿಬ್ಬಂದಿ ಸ್ಥಳೀಯ ಮೀನುಗಾರರ ಸಹಾಯದೊಂದಿಗೆ ಶವಗಳ ಪತ್ತೆಗೆ ಕಾರ್ಯಾಚರಣೆ ನಡೆಸಿದ್ದಾರೆ. ಸುಮಾರು ಆರು ಜನರ ಗುಂಪು ನದಿ ತೀರದಲ್ಲಿ ಇಸ್ಪೀಟ್ ಆಡುತ್ತಿರುವ ಬಗ್ಗೆ ಖಚಿತ ಮಾಹಿತಿ ಬಂದ ಮೇರೆಗೆ ಕೊಲ್ಹಾರ ಠಾಣೆ ಪೊಲೀಸರು ದಾಳಿ ನಡೆಸಿದ್ದಾರೆ. ಈ ಸಂದರ್ಭದಲ್ಲಿ ಪೊಲೀಸರಿಂದ ತಪ್ಪಿಸಿಕೊಳ್ಳಲು ಆರೋಪಿಗಳು ಅಲ್ಲಿಯೇ ಇದ್ದ ತೆಪ್ಪ ಏರಿದ್ದಾರೆ. ನದಿಯಲ್ಲಿ ಸ್ವಲ್ಪ ದೂರ ಹೋಗುತ್ತಿರುವಂತೆ ಸುಳಿಗೆ ಸಿಲುಕಿ ತೆಪ್ಪ ನೀರಿನಲ್ಲಿ ಮಗುಚಿದೆ. ಈಜು ಬಾರದೇ ಎಲ್ಲರೂ ನದಿಯಲ್ಲಿ ಮುಳುಗಿ ಸಾವಿಗೀಡಾಗಿದ್ದಾರೆ. ಘಟನಾ ಸ್ಥಳದಲ್ಲಿ ನೂರಾರು ಜನರು ಜಮಾಯಿಸಿದ್ದಾರೆ.

ಶಾಸಕರ ಬೆಂಬಲ ಪಡೆದೇ ಸಿದ್ದರಾಮಯ್ಯ ಸಿಎಂ ಆಗಿದ್ದಾರೆ

- ಪ್ರಜಾಪ್ರಭುತ್ವದಲ್ಲಿ ಬಹುಮತಕ್ಕೆ ಬೆಲೆ ಜಾಸ್ತಿ: ಮಹದೇವಪ್ಪ
- ಡಿಕೆಶಿ ಎಚ್ಚರಿಕೆ ಮರುದಿನವೇ ಸಿಎಂ ಪರ ಆಪ್ತನ ಬ್ಯಾಟಿಂಗ್



ಬೆಂಗಳೂರು, ಜು.2– ಅವರಿಗೆ ಕೊಡಿ ಇವರಿಗೆ ಕೊಡಿ ಎನ್ನುವುದಕ್ಕೆ ಸಿಎಂ ಹುದ್ದೆ ಏನು ಕಡಲೆಪುರಿನಾ? ಅದು ನನ್ನ ಕೈಯ್ಯಲ್ಲೂ ಇಲ್ಲ, ಧರ್ಮ ಗುರುಗಳ ಕೈಯ್ಯಲ್ಲೂ ಇಲ್ಲ. ಶಾಸಕರ ಬೆಂಬಲ ಕ್ರೋಢಿಕರಿಸಿಯೇ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾರೆ ಎಂದು ಸಮಾಜ ಕಲ್ಯಾಣ ಸಚಿವ ಹೆಚ್‌ಸಿ ಮಹದೇವಪ್ಪ ಹೇಳಿದ್ದಾರೆ.

ಸಿಎಂ, ಡಿಸಿಎಂ, ಅಧ್ಯಕ್ಷ ಹುದ್ದೆಯ ಬಗ್ಗೆ ಯಾರೂ ಬಹಿರಂಗ ಹೇಳಿಕೆ ನೀಡಬಾರದು. ಈ ರೀತಿ ಹೇಳಿಕೆ ನೀಡಿದವರಿಗೆ ನೋಟಿಸ್ ನೀಡಲಾಗುವುದು ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಎಚ್ಚರಿಕೆ ನೀಡಿದ ಮರುದಿನವೇ ಸಿಎಂ ಆಪ್ತ ಮಹದೇವಪ್ಪ ಈಗ ಬಹಿರಂಗವಾಗಿಯೇ ಸಿದ್ದರಾಮಯ್ಯ ಪರ ಬ್ಯಾಟಿಂಗ್ ಮಾಡಿದ್ದಾರೆ. ವಿಶೇಷ ಏನೆಂದರೆ ಈ ಮೊದಲು ಮಳವಳ್ಳಿಯ ಶಾಸಕ ನರೇಂದ್ರಸ್ವಾಮಿ ಅವರು ಸಿದ್ದರಾಮಯ್ಯ ಅವರನ್ನು ಸಿಎಂ ಮಾಡಿದ್ದು ಶಾಸಕರು ಎಂದು ಹೇಳಿಕೆ ನೀಡಿ ಸಿಎಂ ಪರ ಬ್ಯಾಟಿಂಗ್ ಮಾಡಿದ್ದರು. ಈಗ ಮಹದೇವಪ್ಪನವರು ಸಿಎಂ ವಿಚಾರ ಪ್ರಸ್ತಾಪಿಸುವ ಮೂಲಕ ಡಿಕೆ ಶಿವಕುಮಾರ್ ಆದೇಶಕ್ಕೂ ಡೋಂಟ್ ಕೇರ್ ಅಂದಿದ್ದಾರೆ.

2023ರಲ್ಲಿ ವಿಧಾನಸಭೆ ಚುನಾವಣೆ ನಡೆದು ರಾಜ್ಯದ ಮತದಾರರು ಕಾಂಗ್ರೆಸ್‌ಗೆ 135 ಶಾಸಕರನ್ನು ಆಯ್ಕೆ ಮಾಡಿದರು. ಪಕ್ಷದ ಹೈಕಮಾಂಡ್ ವೀಕ್ಷಕರನ್ನು ಕಳಿಸಿ ಶಾಸಕಾಂಗ ಪಕ್ಷದ ನಾಯಕರನ್ನು ಆಯ್ಕೆ ಮಾಡಿತು. ಶಾಸಕಾಂಗ ಪಕ್ಷದ ನಾಯಕರ ಸ್ಪರ್ಧೆಯಲ್ಲಿ ಒಬ್ಬೊಬ್ಬ ಶಾಸಕರು ಯಾರು ಆಯ್ಕೆ ಆಗಬೇಕು ಎಂಬುದನ್ನು ಚೀಟಿಯಲ್ಲಿ ಹೆಸರು ಬರೆದು ಕೊಟ್ಟಿದ್ದರು. ಇದನ್ನು ಲೆಕ್ಕ ಹಾಕಿದಾಗ ಸಿದ್ದರಾಮಯ್ಯ ಅವರು ಹೆಚ್ಚು ಶಾಸಕರ ಬೆಂಬಲ ಪಡೆದು ಆಯ್ಕೆ ಆಗಿದ್ದಾರೆ ಎಂದರು. ಪ್ರಜಾಪ್ರಭುತ್ವದ ಅಡಿಯಲ್ಲಿ ಹೆಚ್ಚು ಶಾಸಕರ ಬೆಂಬಲ ಪಡೆದು ಮುಖ್ಯಮಂತ್ರಿಯಾಗಿ ಆಯ್ಕೆ ಆಗಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಬಹುಮತವೇ ಮುಖ್ಯ. ಬೊಗಸೆ.. ಬೊಗಸೆ. ಅಂತ ಎತ್ತಿ ಕೊಡುವುದಕ್ಕೆ ಸಿಎಂ ಸ್ಥಾನವೇನೂ ಕಡಲೆಪುರಿನಾ ಎಂದು ಪ್ರಶ್ನೆ ಮಾಡಿದ್ದಾರೆ. ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ವಿಚಾರದ ಬಗ್ಗೆ ಕೇಳಲಾದ ಪ್ರಶ್ನೆಗೆ, ಒನ್ ಮ್ಯಾನ್ ಒನ್ ಪೋಸ್ಟ್ ಪಾಲಿಸಿಯನ್ನು ನಮ್ಮ ಹೈಕಮಾಂಡ್ ನಾಯಕರು ಇಟ್ಟುಕೊಂಡಿದ್ದಾರೆ. ತೀರ್ಮಾನ ನೋಡಿಕೊಂಡು ಮಾಡುತ್ತಾರೆ ಎಂದರು.

ಮುಡಾ ಹಗರಣದಲ್ಲಿ ನಮ್ಮ ಕುಟುಂಬದ ಪಾತ್ರವಿಲ್ಲ

- ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ
- ಮುಡಾದಿಂದ ನಮಗೆ ನಷ್ಟವಾಗಿದೆಯೇ ಹೊರತು ಲಾಭವಾಗಿಲ್ಲ
- ನಮ್ಮ ಪತ್ನಿಯವರ ಹೆಸರಲ್ಲಿದ್ದ 3.16 ಎಕರೆ 71,457 ಚದರಡಿ ನಿವೇಶನ ಕೊಡುವಲ್ಲಿ ಬರೀ 38,284 ಚದರಡಿ ನೀಡಲಾಗಿದೆ
- ವಿಪಕ್ಷ ನಾಯಕರ ಆರೋಪಕ್ಕೆ ಎದಿರೇಟು



ಬೆಂಗಳೂರು, ಜು.2(ಕೆಎಂಶಿ) – ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಡೆದಿರುವ ಹಗರಣದಲ್ಲಿ ನಮ್ಮ ಕುಟುಂಬದ ಪಾತ್ರವಿಲ್ಲ ಎಂದು ಸ್ಪಷ್ಟಪಡಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಬಿಜೆಪಿ ಅಧಿಕಾರಾವಧಿಯಲ್ಲಿ ನಿವೇಶನ ಹಂಚಿಕೆ ಆಗಿದೆ ಎಂದರು.

ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಮುಡಾ ಹಗರಣದಲ್ಲಿ ನಾಲ್ಕು ಸಾವಿರ ಕೋಟಿ ರೂ. ಗುಳುಂ ಮಾಡಿದ್ದು ತಮ್ಮ ಪತ್ನಿಯವರ ಹೆಸರಿನಲ್ಲೂ ಶೇ.50:50 ಅನುಪಾತದಡಿ ವರ್ಗಾವಣೆ ನಿವೇಶನ ಪಡೆದಿದ್ದಾರೆ ಎಂದು ಗುರುತರ ಆರೋಪ ಮಾಡಿದ್ದರು.

ಅಶೋಕ್ ಈ ಸಂಬಂಧ ಟ್ವೀಟ್ ಮಾಡಿದ ಸ್ವಲ್ಪ ಸಮಯದಲ್ಲೇ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಅವರು, ಈ ಹಗರಣ ಬಿಜೆಪಿಯವರ ಕಾಲದಲ್ಲೇ ಆಗಿದೆ. ಮೈಸೂರು ಹೊರವಲಯದ ವರ್ತುಲ ರಸ್ತೆ ಸಮೀಪದಲ್ಲೇ ನನ್ನ ಪತ್ನಿ ಪಾರ್ವತಿ ಹೆಸರಿನಲ್ಲಿ ಮೂರು ಎಕರೆ 16 ಗುಂಟೆ ಜಮೀನು ಇತ್ತು.

ಪ್ರಾಧಿಕಾರ ಹೊಸ ಬಡಾವಣೆ ನಿರ್ಮಾಣ ಸಂದರ್ಭದಲ್ಲಿ ನಮ್ಮ ಜಮೀನನ್ನು ಭೂಸ್ವಾಧೀನ ಮಾಡಿಕೊಳ್ಳದೆ, ನಿವೇಶನ ಮಾಡಿ ಮಾರಾಟ ಮಾಡಿದರು.

ನಮ್ಮ ಜಮೀನಿಗೆ ಸಮಾನಾಂತರವಾಗಿ ನಿವೇಶನಗಳನ್ನು ನೀಡುವುದಾಗಿ ಮುಡಾ ನಮಗೆ 50:50ರ ಅನುಪಾತದಲ್ಲಿ, ಅಂದರೆ 2021ರಲ್ಲಿ 14 ನಿವೇಶನಗಳನ್ನು ಹಂಚಿಕೆ ಮಾಡಿದೆ. ಈ ನಿವೇಶನಗಳ ಬಗ್ಗೆ ನಾನು ನಮ್ಮ ಆಸ್ತಿಯನ್ನು ಚುನಾವಣಾ ಸಂದರ್ಭದಲ್ಲಿ ಘೋಷಿಸಿಕೊಂಡಿದ್ದೇನೆ, ನಮಗೆ ಮುಡಾದಿಂದ ನಷ್ಟವಾಗಿದೆಯೇ ಹೊರತು ಲಾಭವಾಗಿಲ್ಲ. ಈ ಜಮೀನನ್ನು ನನ್ನ ಪತ್ನಿಯ ಸಹೋದರ ಮಲ್ಲಿಕಾರ್ಜುನ ಅರಿಶಿನ–ಕುಂಕುಮ ರೂಪದಲ್ಲಿ ನನ್ನ ಪತ್ನಿಗೆ ದಾನವಾಗಿ ನೀಡಿದ್ದರು. ಅವರ ಕುಟುಂಬದವರು ಆಸ್ತಿ ಹಂಚಿಕೊಳ್ಳುವ ಸಂದರ್ಭದಲ್ಲಿ ನನ್ನ ಪತ್ನಿಗೆ ಈ ಭೂಮಿ ನೀಡಿದ್ದರು.

ನಾನು ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ಈ ಜಮೀನು ಖರೀದಿ ಮಾಡಿಲ್ಲ. ಅದು ದಾನದ ರೂಪದಲ್ಲಿ ಬಂದಿದ್ದು, ಈ ಬಗ್ಗೆ ಸ್ಪಷ್ಟ ಮಾಹಿತಿ ಇಲ್ಲದವರು ಇಲ್ಲ–ಸಲ್ಲದ ಆರೋಪ ಮಾಡುತ್ತಿದ್ದಾರೆ ಎಂದು ಹೇಳಿದರು. ನಿವೇಶನ ಅನುಪಾತದ ಹಂಚಿಕೆಗೆ ಸಂಬಂಧಿಸಿದಂತೆ ನಗರಾಭಿವೃದ್ಧಿ ಸಚಿವರು ಮುಡಾದಲ್ಲಿ ಸಭೆ ನಡೆಸಿ, ಅಧಿಕಾರಿಗಳನ್ನು ವರ್ಗಾವಣೆ ಮಾಡಿದ್ದಾರೆ. ಅದು ಶಿಕ್ಷೆಯಲ್ಲ, ಪ್ರಕರಣಕ್ಕೆ ಸಂಬಂಧಿಸಿದಂತೆ ಐಎಎಸ್ ಅಧಿಕಾರಿಗಳಿಂದ ತನಿಖೆಗೆ ಆದೇಶ ಮಾಡಿದ್ದಾರೆ. ವರದಿ ಬರಲಿ ನಂತರ ಮುಂದಿನ ಕ್ರಮ ಎಂದರು.

ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ, ದೇವನೂರು ಬಡಾವಣೆ ನಿರ್ಮಾಣ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿತ್ತು.

ಸ್ವಾಧೀನಪಡಿಸಿಕೊಂಡ ಜಮೀನಿಗೆ ಪರಿಹಾರವಾಗಿ 71,457 ಚದರಡಿ ಜಾಗ ನೀಡಬೇಕಿತ್ತು, ಆದರೆ, 38,284 ಚದರಡಿ ಜಾಗ ಮಾತ್ರ ಕೊಟ್ಟಿದ್ದಾರೆ.

ಮುಡಾದವರು ಪಾರ್ವತಿ ಅವರಿಗೆ ಪುಕ್ಕಟೆಯಾಗಿ ಕೊಟ್ಟಿಲ್ಲ. ಅವರಿಗೆ ವಿಜಯನಗರ ಬಡಾವಣೆಯಲ್ಲಿ ಕೇವಲ 14 ನಿವೇಶನ ಕೊಟ್ಟಿದ್ದಾರೆ, ಇದು ಅವರಿಗೆ ನಷ್ಟವೇ ಆಗಿದೆ. ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿ ಆಗಿದ್ದ 2021ರಲ್ಲಿ ಈ ನಿವೇಶನಗಳನ್ನು ಹಂಚಿಕೆ ಮಾಡಿದೆ. ಇದರಲ್ಲಿ ನಮ್ಮ ಸರ್ಕಾರದ ಪಾತ್ರವೇ ಇಲ್ಲ ಎಂದು ಸ್ಪಷ್ಟಪಡಿಸಿದರು.

ಮುಡಾದಲ್ಲಿ ಪರ್ಯಾಯ ನಿವೇಶನ ಹಂಚಿಕೆಯಲ್ಲಿ ಸಿದ್ದರಾಮಯ್ಯ ಸರ್ಕಾರ 4 ಸಾವಿರ ಕೋಟಿ ಗುಳುಂ



ಬೆಂಗಳೂರು, ಜು.2(ಕೆಎಂಶಿ) – ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಪರ್ಯಾಯ ನಿವೇಶನ ಹಂಚಿಕೆ ಹೆಸರಿನಲ್ಲಿ ನಾಲ್ಕು ಸಾವಿರ ಕೋಟಿ ರೂ.ಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಗುಳುಂ ಮಾಡಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಗುರುತರ ಆರೋಪ ಮಾಡಿದ್ದಾರೆ.

ಈ ಸಂಬಂಧ ಟ್ವೀಟ್ ಮಾಡಿರುವ ಅವರು, ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ 187 ಕೋಟಿ ರೂ. ದಲಿತರ ಹಣ ಗುಳುಂ ಮಾಡಿದ ಈ ಸರ್ಕಾರ ಇದೀಗ ನಿವೇಶನ ಹಂಚಿಕೆ ಹೆಸರಿನಲ್ಲೂ ಲೂಟಿ ಮಾಡಿದೆ ಎಂದಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಗೋಲ್ಮಾಲ್ ಮುಖ್ಯಮಂತ್ರಿಯಾಗಿದ್ದು, ಆರೋಪ ಕೇಳಿಬಂದಿರುವ ಮುಡಾ ಅಧಿಕಾರಿಗಳನ್ನು ಅಮಾನತು ಮಾಡದೆ, ಕೇವಲ ವರ್ಗಾವಣೆ ಮಾಡಿ ಕೈತೊಳೆದುಕೊಂಡಿದ್ದು, ಇಂತಹ ಕ್ರಮಗಳಿಂದ ಯಾರನ್ನು ರಕ್ಷಣೆ ಮಾಡಲು ಹೊರಟಿದ್ದೀರಿ ಎಂದು ಪ್ರಶ್ನಿಸಿದ್ದಾರೆ.

ಹಗರಣದ ತನಿಖೆಗೆ ಇಬ್ಬರು ಐಎಎಸ್ ಅಧಿಕಾರಿಗಳನ್ನು ನೇಮಿಸಿ ಪ್ರಕರಣ ಮುಚ್ಚಿಹಾಕುವ ಪ್ರಯತ್ನ ನಡೆದಿದ್ದು ಇದರಲ್ಲಿ ಮುಖ್ಯಮಂತ್ರಿ ಪಾಲು ಎಷ್ಟು ಎಂಬುದನ್ನು ತಿಳಿಸಬೇಕು ಎಂದು ಒತ್ತಾಯಿಸಿದ್ದಾರೆ.

ಮುಡಾದಲ್ಲಿನ 4,000 ಕೋಟಿ ರೂ. ಬ್ರಹ್ಮಾಂಡ ಭ್ರಷ್ಟಾಚಾರ ಪ್ರಕರಣ ತನಿಖೆಯನ್ನು ಸಿಬಿಐಗೆ ವಹಿಸಬೇಕು. ಇಲ್ಲವೇ ನಿವೃತ್ತ ನ್ಯಾಯಮೂರ್ತಿ ನೇತೃತ್ವದ ತನಿಖಾ ಆಯೋಗಕ್ಕೆ ನೀಡಬೇಕು. ಮುಖ್ಯಮಂತ್ರಿಗಳ ತವರು ಜಿಲ್ಲೆಯಲ್ಲಿ, ಸ್ವಂತ ಊರಿನಲ್ಲಿ, ತಮ್ಮ ಆಪ್ತ ಸಚಿವರ ಇಲಾಖೆಯಲ್ಲಿ, ಇಂಥದ್ದೊಂದು ಬೃಹತ್ ಹಗರಣ ತಮ್ಮ ಗಮನಕ್ಕೆ ಬಾರದೆ ನಡೆಯಲು ಸಾಧ್ಯವೇ ಎಂದು ಪ್ರಶ್ನಿಸಿದ್ದಾರೆ.

ಇದಲ್ಲದೆ, ಸಚಿವ ಸಂಪುಟದ ಅನುಮತಿ ಪಡೆಯದೆ ಮನಸ್ಸಿಗೆ ಬಂದಂತೆ ನಿವೇಶನ ನೀಡಲು ಅನುಮತಿ ನೀಡಲಾಗಿದೆ. ಪರ್ಯಾಯ ನಿವೇಶನ ಹಂಚಿಕೆ ವೇಳೆ ಸದರಿ ಬಡಾವಣೆ ಕೈಬಿಟ್ಟು ಲಾಭದ ಬಡಾವಣೆಗಳಲ್ಲಿ ನಿವೇಶನಕ್ಕೆ ಶಿಫಾರಸ್ಸು ಮಾಡಿದವರು ಯಾರು ಎಂದು ಪ್ರಶ್ನಿಸಿದ್ದಾರೆ. ಮುಖ್ಯಮಂತ್ರಿಗಳು ತಮ್ಮ ಪತ್ನಿ ಹೆಸರಿನಲ್ಲೂ ನಿಯಮಬಾಹಿರವಾಗಿ ನಿವೇಶನ ವರ್ಗಾವಣೆ ಮಾಡಿರುವ ಆರೋಪಗಳು ಕೇಳಿಬರುತ್ತಿದ್ದು, ಈ ಪ್ರಶ್ನೆಗಳಿಗೆ ಉತ್ತರಿಸಬೇಕು ಎಂದಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಹೆಂಡತಿ : ಪಕ್ಕದ ಮನೆಯಲ್ಲಿ ಬೆಳಗ್ಗೆಯಿಂದ ಗಂಡ ಹೆಂಡತಿ ಜಗಳ ಆಡ್ತಾ ಇದ್ದಾರೆ. ನೀವು ಒಮ್ಮೆ ಹೋಗಿ ನೋಡಬಾರದ?

ಗಂಡ : ಒಮ್ಮೆ ನಾನು ಹೋಗಿದ್ದಕ್ಕೆ ಈ ಜಗಳ...

ಮೈಸೂರು ಮಿತ್ರ

ಬುಧವಾರ, 3 ಜುಲೈ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಜೀವನ ಇರುವುದೇ ಎರಡು ದಿನ. ಒಂದು ನಿನ್ನ ಪರವಾದ ದಿನ. ಮತ್ತೊಂದು ನಿನ್ನ ವಿರುದ್ಧವಾದ ದಿನ. ಪರವಾದ ದಿನದಲ್ಲಿ ಅಹಂಕಾರ ತೋರಿಸಬೇಡ. ವಿರುದ್ಧವಾದ ದಿನದಲ್ಲಿ ತಾಳ್ಮೆ ಕಳೆದುಕೊಳ್ಳಬೇಡ...

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಇರೋರ್ಗೆ ಜಾಗ ಇಲ್ಲಾಂದ್ರೆ, ನನ್ ಕಂಬ್ಳಿ ಎಲ್ಲಿ ಹಾಸ್ಲಿ ಅಂದ್ನಂತೆ

ನಿಮ್ಮ ಪತ್ರಗಳು

ತ್ರಿಪುರಾಂತಕರ ಲೇಖನ ಅರ್ಥಪೂರ್ಣ

ಮಾನ್ಯರೆ,

'ಮೈಸೂರು ಮಿತ್ರ' ದಿನಪತ್ರಿಕೆಯ 1.7.2024ರ ಸೋಮವಾರದ ಸಂಚಿಕೆಯಲ್ಲಿ ಜಿ.ಎಲ್.ತ್ರಿಪುರಾಂತಕ ಅವರ ಬೆರಗು ಅಂಕಣದಲ್ಲಿ 'ಅನ್ನ ದಾರಿದ್ರ್ಯವನ್ನು ನೀಗಿಸಬಹುದು... ಬುದ್ಧಿ ದಾರಿದ್ರ್ಯವನ್ನು ನೀಗಿಸಲಾಗದು...!' ಶೀರ್ಷಿಕೆಯಡಿ ಪ್ರಕಟವಾಗಿರುವ ಲೇಖನವು ಅರ್ಥಪೂರ್ಣವಾಗಿದೆ ಮತ್ತು ಅನ್ನ ಮಹತ್ವದ ಬಗ್ಗೆ ಜಾಗೃತಿ ಮೂಡಿಸುವಂತಿದೆ. ಜನರಿಗೆ ತಮ್ಮ ಮೂಲಭೂತ ಕರ್ತವ್ಯಗಳ ಬಗ್ಗೆ ಅರಿವು ಇಲ್ಲದಿರುವುದು ಇದಕ್ಕೆ ಕಾರಣ ಇರಬಹುದು. ಆಫ್ರಿಕಾ ಖಂಡದ ಹಲವು ದೇಶಗಳು ಸೇರಿದಂತೆ ಜಗತ್ತಿನ ಹಲವು ದೇಶಗಳಲ್ಲಿ ಹಸಿವಿನಿಂದಲೇ ಎಷ್ಟೋ ಜನ ಮೃತಪಡುತ್ತಿರುವ ಸುದ್ದಿಯನ್ನು ನಾವು ಆಗಾಗ ಓದುತ್ತಿರುತ್ತೇವೆ. ಈ ಬಗ್ಗೆ ಅಂತಾರಾಷ್ಟ್ರೀಯ ಸಂಸ್ಥೆಗಳ ವರದಿಗಳು ಹೇಳುತ್ತವೆ. ಒಂದು ಅನ್ನದ ಅಗುಳು ಬೆಳೆಯಲು ರೈತ ಎಷ್ಟು ಶ್ರಮ ಪಡುತ್ತಾನೆ ಎಂಬುದು ನಮ್ಮ ಜನರಿಗೆ ಗೊತ್ತಿದ್ದರೆ, ಈ ರೀತಿ ಅನ್ನವನ್ನು ವ್ಯರ್ಥ ಮಾಡುತ್ತಿರಲಿಲ್ಲ.

ಇಂದಿಗೂ ಆಫ್ರಿಕಾದ ದೇಶವೊಂದರಲ್ಲಿ ಸೇವಿಸಲು ಆಹಾರ ಇಲ್ಲದೆ, ಮಣ್ಣಿನಲ್ಲಿ ಮಾಡಿದ ರೊಟ್ಟಿಯನ್ನು ಅಲ್ಲಿನ ಜನರು ಸೇವಿಸುತ್ತಾರೆ. ಹೀಗಿರುವಾಗ ಜನರು ಅನಗತ್ಯವಾಗಿ ಆಹಾರವನ್ನು ವ್ಯರ್ಥ ಮಾಡಿದರೆ, ಇನ್ನೊಬ್ಬರ ಅನ್ನವನ್ನು ಕಿತ್ತುಕೊಂಡಷ್ಟೇ ಸಮ. ವ್ಯವಸ್ಥೆ ಎಷ್ಟೇ ಕ್ರಮ ಕೈಗೊಂಡರು ವೈಯಕ್ತಿಕ ನೆಲೆಯಲ್ಲಿ ಬದಲಾವಣೆ ಕಾಣದ ಹೊರತು, ಸಮಸ್ಯೆಗೆ ಪರಿಹಾರವಿಲ್ಲ. ಈ ನಿಟ್ಟಿನಲ್ಲಿ ಜಿ.ಎಲ್. ತ್ರಿಪುರಾಂತಕ ಅವರ ಲೇಖನವನ್ನು ಆಹಾರ ವ್ಯರ್ಥ ಮಾಡುವ ಜನರು ತಪ್ಪದೇ ಓದಬೇಕು. ಆಗಲಾದರು ಅನ್ನದ ಮಹತ್ವ ತಿಳಿಯಬಹುದು.

–ಜಿ.ಎಂ. ಪ್ರಸಾದ್, ಮೈಸೂರು.

ಭಾರತೀಯ ಕ್ರಿಕೆಟ್ ತಂಡದ ಸಾಧನೆ ಶ್ಲಾಘನೀಯ

ಮಾನ್ಯರೆ,

ವಿರಾಟ್ ಕೊಹ್ಲಿ ಅವರ ಜಾಣ್ಮೆಯ ಬ್ಯಾಟಿಂಗ್ ಮತ್ತು ರೋಹಿತ್ ಶರ್ಮಾ ಅವರ ಸ್ಫೂರ್ತಿದಾಯಕ ನಾಯಕತ್ವದಿಂದ ಐಸಿಸಿ ಪ್ರಶಸ್ತಿಗಾಗಿ ಭಾರತ ಕ್ರಿಕೆಟ್ ತಂಡ 2007ರ ನಂತರ ಟಿ–20 ವಿಶ್ವಕಪ್ ಟ್ರೋಫಿಯನ್ನು ಎತ್ತಿ ಹಿಡಿದಿದೆ. ಈ ಪ್ರಶಸ್ತಿಯು ಭಾರತ ತಂಡದ ಸ್ಟಾರ್ ಆಟಗಾರರಾದ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಸೇರಿದಂತೆ ಕೋಟ್ಯಂತರ ಕ್ರಿಕೆಟ್ ಪ್ರೇಮಿಗಳಿಗೆ ಸಮಾಧಾನ ಮತ್ತು ಸಂಭ್ರಮದ ಭಾವನೆ ತಂದು ಕೊಟ್ಟಿದ್ದರೆ, ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ರಾಹುಲ್ ದ್ರಾವಿಡ್‌ಗೆ ಪರಿಪೂರ್ಣ ವಿದಾಯವನ್ನು ಅರ್ಥಪೂರ್ಣವಾಗಿ ನೀಡಿದ್ದು ಮೆಚ್ಚುಗೆಯ ಸಂಗತಿ ಕೂಡ ಆಗಿದೆ.

ಈ ಫೈನಲ್ ಪಂದ್ಯ ಕೋಟ್ಯಂತರ ಭಾರತೀಯರನ್ನು ತುದಿಗಾಲ ಮೇಲೆ ನಿಲ್ಲುವಂತೆ ಮಾಡಿತ್ತು. ಅಂತಿಮ ಎಸೆತದವರೆಗೂ ತೀವ್ರ ಕುತೂಹಲ ಕೆರಳಿಸಿದ್ದ ಪಂದ್ಯದಲ್ಲಿ ತಂಡ 7 ರನ್‌ಗಳಿಂದ ಭರ್ಜರಿ ಗೆಲುವು ಪಡೆಯುವುದರೊಂದಿಗೆ ಭಾರತ ತಂಡ ಎರಡನೇ ಬಾರಿಗೆ ಟಿ–20 ವಿಶ್ವಕಪ್‌ಗೆ ಮುತ್ತಿಕ್ಕಿದೆ. ಫೈನಲ್ ಪಂದ್ಯದ ಕೆಲವು ಹಂತಗಳಲ್ಲಿ ಭಾರತದ ಕೈಯಿಂದ ಕಪ್ ಕೈ ಜಾರುವಂತೆ ತೋರಿದರೂ ಛಲ ಬಿಡದೆ ಮತ್ತೆ ಪಂದ್ಯದ ಮೇಲೆ ಹಿಡಿತ ಸಾಧಿಸಿ ಗೆಲುವು ದಾಖಲಿಸಿದ್ದು ಭಾರತ ತಂಡದ ಮಹತ್ಸಾಧನೆಯೇ ಸರಿ. ಇದರಿಂದ ಕೋಟ್ಯಂತರ ಭಾರತೀಯರ ಕ್ರಿಕೆಟ್ ಪ್ರೇಮಿಗಳ ಕನಸು ನನಸಾಗಿದೆ. ಲಕ್ಷಾಂತರ ಪ್ರಾರ್ಥನೆಗಳಿಗೆ ಫಲ ಸಿಕ್ಕಂತಾಗಿದೆ. ಭಾರತ ಮತ್ತೊಮ್ಮೆ ಕ್ರಿಕೆಟ್ ಜಗತ್ತಿನ ವಿಶ್ವ ಸಾಮ್ರಾಟವಾಗಿದೆ. ಕಳೆದ ವರ್ಷ ಏಕದಿನ ಕ್ರಿಕೆಟಿನ ಫೈನಲಿನಲ್ಲಿ ಸೋತು ಅನುಭವಿಸಿದ್ದ ಬೇಗುದಿಯು ಇದೀಗ ಟಿ–20 ವಿಶ್ವಕಪ್ ಕ್ರಿಕೆಟ್ ಗೆಲ್ಲುವುದರೊಂದಿಗೆ ಶಮನವಾಗಿದೆ.

ವಿರಾಟ್ ಕೊಹ್ಲಿ ಫೈನಲ್ ಪಂದ್ಯದಲ್ಲಿ ಆಪತ್ಬಾಂಧವನಾಗಿ ಮೂಡಿ ಬಂದದ್ದು, ಪಂದ್ಯದ ಕೊನೆಯ ಓವರಿನಲ್ಲಿ ಸೂರ್ಯಕುಮಾರ್ ಯಾದವ್ ಅತ್ಯದ್ಭುತವಾದ ಕ್ಯಾಚೊಂದನ್ನು ಹಿಡಿದದ್ದು, ಹಾರ್ದಿಕ್ ಪಾಂಡ್ಯ ಅತ್ಯಂತ ಒತ್ತಡದ ನಡುವೆಯೂ ಬಿಗಿ ಬೌಲಿಂಗ್ ನಡೆಸಿದ್ದು... ಎಲ್ಲವೂ ದೀರ್ಘಕಾಲ ಕ್ರಿಕೆಟ್ ಪ್ರೇಮಿಗಳ ಮನದಲ್ಲಿ ಅಚ್ಚಳಿಯದೆ ಉಳಿಯುವ ಚಿತ್ರಗಳಾಗಿವೆ. ಒಟ್ಟಾರೆಯಾಗಿ ಕೋಟಿ ಕೋಟಿ ಭಾರತೀಯರಿಗೆ ಸಂತೃಪ್ತಿ ತಂದ ರೋಹಿತ್ ಬಳಗಕ್ಕೆ ಅಭಿನಂದನೆಗಳು!

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

7ನೇ ವೇತನ ಆಯೋಗ ವರದಿ ಜಾರಿಯಾಗಲಿ

ಮಾನ್ಯರೆ,

ಕರ್ನಾಟಕ ರಾಜ್ಯ ಸರ್ಕಾರಿ ನೌಕರರಿಗೆ ಸರ್ಕಾರ ನೀಡಲೇಬೇಕಾದ 7ನೇ ವೇತನ ಆಯೋಗದ ಕಮಿಟಿಯ ಶಿಫಾರಸು ಪತ್ರ ಸರ್ಕಾರಕ್ಕೆ ಬಂದು ತಿಂಗಳು ಕಳೆದರೂ ಸರ್ಕಾರ ಇದರ ಬಗ್ಗೆ ನಿದ್ರೆ ಮಾಡುತ್ತಿರುವುದು ಖಂಡನೀಯ. ಚುನಾವಣೆ ನೀತಿ ಸಂಹಿತೆ ಕುಂಟು ನೆಪವೊಡ್ಡಿ ಸದರಿ ವರದಿ ಅನುಷ್ಠಾನಗೊಳಿಸಲು ಸರ್ಕಾರ ತಡಮಾಡಿದೆ. ಚುನಾವಣೆ ಮುಗಿದು ನೀತಿ ಸಂಹಿತೆ ಕಳೆದಿದ್ದರೂ ಸರ್ಕಾರ ಇದನ್ನು ಜಾರಿಗೊಳಿಸಲು ವಿಳಂಬ ಮಾಡುತ್ತಿರುವುದು ಸರಿಯಲ್ಲ. ತಕ್ಷಣ ಸರ್ಕಾರ ಎಚ್ಚೆತ್ತು 7ನೇ ವೇತನ ಆಯೋಗ ಕಮಿಟಿ ಶಿಫಾರಸು ಜಾರಿಗೊಳಿಸಬೇಕೆಂದು ಈ ಮೂಲಕ ಮನವಿ.

–ನೊಂದ ಅಸಂಖ್ಯಾತ ನೌಕರರು, ಮೈಸೂರು.

ಚಾಮುಂಡಿಬೆಟ್ಟದಲ್ಲಿ ಪ್ಲಾಸ್ಟಿಕ್ ವಸ್ತುಗಳು ನಿಷೇಧವಾಗಲಿ

ಮಾನ್ಯರೆ,

ಮೈಸೂರಿನ ಚಾಮುಂಡಿಬೆಟ್ಟ ಪ್ರಾಕೃತಿಕವಾಗಿ, ಭೌಗೋಳಿಕವಾಗಿ, ಧಾರ್ಮಿಕವಾಗಿ ವೈಶಿಷ್ಟ್ಯತೆಯಿಂದ ಕೂಡಿದೆ. ಮುಂಬರುವ ಆಷಾಢ ಮಾಸದಲ್ಲಿ ನಡೆಯುವ ವಿಶೇಷ ಪೂಜೆಯಲ್ಲಿ ಪಾಲ್ಗೊಂಡು ಚಾಮುಂಡಿ ದೇವಿಯ ದರ್ಶನ ಪಡೆಯಲು ಚಾಮುಂಡಿಬೆಟ್ಟದ ಪಾದದಿಂದ ಲಕ್ಷಾಂತರ ಭಕ್ತರು ಮೆಟ್ಟಿಲುಗಳ ಮೂಲಕ ಹತ್ತುತ್ತಾರೆ. ಮೂಲಭೂತವಾಗಿ ಕುಡಿಯುವ ನೀರಿಗಾಗಿ ಪ್ಲಾಸ್ಟಿಕ್ ವಾಟರ್ ಬಾಟಲ್ ಅನ್ನು ಉಪಯೋಗಿಸಿ ಎಲ್ಲೆಂದರಲ್ಲಿ ಬಿಸಾಡುವುದರಿಂದ ಬೆಟ್ಟದ ಸ್ವಚ್ಛತೆಗೆ, ವನ್ಯಜೀವಿ ಪ್ರಾಣಿ ಪಕ್ಷಿಗಳಿಗೆ ಧಕ್ಕೆ ಉಂಟಾಗಿದೆ. ಭಕ್ತರಿಗೆ ನಮ್ಮ ಪಕ್ಕದ ರಾಜ್ಯ ಕೇರಳ ಪವಿತ್ರ ಧಾರ್ಮಿಕ ಸ್ಥಳ ಶಬರಿಮಲೆಯಲ್ಲಿ ಪಂಪಾನದಿ ತೀರದಿಂದ ಶಬರಿಮಲೆ ಅಯ್ಯಪ್ಪ ಸನ್ನಿಧಾನದವರೆಗೆ ಕುಡಿಯುವ ನೀರಿನ ಆರ್‌ಓ ವಾಟರ್ ಸರಬರಾಜು ಇನ್ನಿತರ ನೀರಿನ ಸೌಲಭ್ಯವನ್ನು ಒದಗಿಸುವ ಮೂಲಕ ಪ್ಲಾಸ್ಟಿಕ್ ವಸ್ತುಗಳನ್ನು ಶಬರಿಮಲೆಯಲ್ಲಿ ನಿಷೇಧಿಸಲಾಗಿದೆ. ಇದೇ ಮಾದರಿ ವಾಟರ್ ಸಪ್ಲೈಯನ್ನು ಚಾಮುಂಡಿಬೆಟ್ಟದ ಪಾದದಿಂದ ಚಾಮುಂಡಿಬೆಟ್ಟದ ಮೆಟ್ಟಿಲು ಮತ್ತು ದೇವಸ್ಥಾನದ ಆವರಣದಲ್ಲಿ ಸೌಲಭ್ಯವನ್ನು ಒದಗಿಸಬೇಕು.

ಆಷಾಢ ಶುಕ್ರವಾರದ ಶುಭ ಸಂದರ್ಭದಲ್ಲಿ ದಾನಿಗಳು ಹಂಚುವ ಪ್ರಸಾದ ಮತ್ತು ಪಾನೀಯಗಳನ್ನು ಸ್ಟೀಲ್ ಲೋಟ ಮತ್ತು ಪೇಪರ್ ಲೋಟ ಹಂಚಲು ಪರಿಸರ ಸ್ನೇಹಿ ಅಡಕೆ ತಟ್ಟೆ, ಬಾಳೆ ಎಲೆ, ಮುತ್ತುಗದ ಎಲೆ ತಟ್ಟೆ ಇನ್ನಿತರ ಪರಿಸರ ಸ್ನೇಹಿ ವಸ್ತುಗಳ ಮೂಲಕ ವಿತರಣೆ ಮಾಡಬೇಕು. ಜಿಲ್ಲಾಡಳಿತ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಮನವಿ.

– ಪರಿಸರ ವಾರಿಯರ್ಸ್ ಗ್ರೂಪ್, ಮೈಸೂರು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ಮಂಕುತಿಮ್ಮನ ಕಗ್ಗದಲ್ಲಿ ಯೋಗ

ಡಿವಿಜಿ ಯೋಗಾಸನಗಳನ್ನು ಮಾಡುತ್ತಿದ್ದರೋ ಇಲ್ಲವೋ ನನಗೆ ತಿಳಿಯದು. ಆದರೆ ಅವರು ಶ್ರೇಷ್ಠ ಯೋಗಿಯ ಬದುಕನ್ನು ನಡೆಸುತ್ತಿದ್ದರೆಂಬುದಂತೂ ಸತ್ಯ.

ಜ್ಞಾನ ವಿಜ್ಞಾನ ತೃಪ್ತಾತ್ಮಾ ಕೂಟಸ್ಥೋ ವಿಜಿತೇಂದ್ರಿಯಃ।
ಯುಕ್ತ ಇತ್ಯುಚ್ಯತೇ ಯೋಗೀ ಸಮಲೋಷ್ಟಾಶ್ಮಕಾಂಚನಃ॥

ಎಂಬ ಯೋಗಿಯ ಲಕ್ಷಣ ಅವರಲ್ಲಿ ಪೂರ್ಣವಾಗಿ ಅನ್ವಯಿಸುತ್ತಿತ್ತು. ಅವರು ಮಂಕುತಿಮ್ಮನ ಕಗ್ಗದಲ್ಲಿ ಯೋಗದ ಬಗೆಗೆ, ಯೋಗಿಯ ಬಗೆಗೆ ಹೇಳುವ ಮಾತುಗಳು ಅವರ ಜೀವನ ದೃಷ್ಟಿಯನ್ನು ತಿಳಿಸುತ್ತವೆ. ಯೋಗ ಜೀವನದ ಫಲ ಪ್ರೀತಿ, ಸುಖ, ಸತ್ಯ ದರ್ಶನ ಮತ್ತು ಶಾಂತಿ. ಹಣ, ಕೀರ್ತಿ, ಪ್ರತಿಷ್ಠೆ ಮುಂತಾದುವಲ್ಲ ಎಂಬುದು ಡಿ.ವಿ.ಜಿ. ಅವರ ಸಿದ್ಧಾಂತವಾಗಿತ್ತು. ಅದನ್ನು ಕಗ್ಗದ ಒಂದು ಪದ್ಯದಲ್ಲಿ ನಿರೂಪಿಸಿದ್ದಾರೆ –



ಸ್ವಾತಿ ಮಳೆ ಹನಿ ಬೀಳ್ವ ಶುಕ್ತಿ ಬಾಯ್ತೆರೆದೇಳ್ವ
ಕೌತುಕದ ಸಮಯಯೋಗದೆ ಮೌಕ್ತಿಕಫಲ ।
ಪ್ರೀತಿ ಸುಖ ಸತ್ಯ ದರ್ಶನ ಶಾಂತಿಗಳ ಹುಟ್ಟುಂ
ಆ ತೆರದ ಯೋಗದಿನೆ ಮಂಕುತಿಮ್ಮ ॥

ಅಶ್ವಿನ್ಯಾದಿ ಮಳೆಯ ನಕ್ಷತ್ರಗಳಲ್ಲಿ ಸ್ವಾತಿಯೂ ಒಂದು. ಆ ಮಳೆಯ ಹನಿ ಸಮುದ್ರದ ಶುಕ್ತಿ (ಒಂದು ವಿಧವಾದ ಜಲಚರದ ಚಿಪ್ಪು)ಯೊಳಗೆ ಬೀಳಬೇಕು. ಯಾವಾಗ ಹನಿ ಬೀಳುವುದೋ ಆವಾಗ ಶುಕ್ತಿ ಬಾಯ್ತೆರೆದಿರಬೇಕು. ಇದು ಕೌತುಕವನ್ನುಂಟು ಮಾಡುವ ಸಮಯ ಯೋಗ. ಅದರ ಫಲವಾಗಿ ಮೌಕ್ತಿಕವು (ಶ್ರೇಷ್ಠವಾದ ಮುತ್ತು) ಹುಟ್ಟುವುದೇ ಒಂದು ಕೌತುಕ, ವಿಸ್ಮಯ. ಇದನ್ನೇ ಸಂಸ್ಕೃತ ಕವಿ ಭರ್ತೃಹರಿಯು–

'ಸ್ವಾತ್ಯಾಂ ಸಾಗರ ಶುಕ್ತಿ ಮಧ್ಯಪತಿತಂ ಸನ್ಮೌಕ್ತಿಕಂ ಜಾಯತೇ'

ಎಂದು ವರ್ಣಿಸಿದ್ದಾನೆ. ಇದೇ ರೀತಿಯಾಗಿ ದೇಹ, ಮನಸ್ಸು, ಬುದ್ಧಿಗಳೆಲ್ಲ ಸರಿಯಾಗಿ ಹೊಂದಿಕೊಂಡು ಏಕಾಗ್ರತೆಯನ್ನು ಹೊಂದುವ ಯೋಗದಿಂದ ಮಾತ್ರ ಪ್ರೀತಿಯ, ಸುಖದ, ಸತ್ಯದರ್ಶನದ, ಶಾಂತಿ ಹುಟ್ಟು ಸಾಧ್ಯ ಎಂಬುದನ್ನು ಡಿವಿಜಿ ಇಲ್ಲಿ ಪ್ರತಿಪಾದಿಸಿದ್ದಾರೆ.

ಯೋಗದಲ್ಲಿ ಹಠಯೋಗ, ರಾಜಯೋಗ ಎಂಬ ಎರಡು ವಿಧಗಳು ಇವೆ. ಶರೀರಕ್ಕೆ ಪ್ರಾಧಾನ್ಯವನ್ನು ನೀಡಿ, ನಾನಾ ವಿಧವಾದ ಕಷ್ಟ ಸಾಧ್ಯ ಆಸನಗಳನ್ನು ಕಲಿಯುವುದು ಹಠ ಯೋಗ. ಚಿತ್ತವೃತ್ತಿಗಳ ನಿಯಂತ್ರಣಕ್ಕೆ ಪ್ರಾಧಾನ್ಯವನ್ನು ನೀಡಿ, ಯಮ–ನಿಯಮ–ಆಸನ–ಪ್ರಾಣಾಯಾಮ, ಪ್ರತ್ಯಾಹಾರ, ಧಾರಣಾ, ಧ್ಯಾನ, ಸಮಾಧಿ ಎಂಬ ಎಂಟು ಅಂಗಗಳ ಅನುಷ್ಠಾನದಿಂದ ಕೈವಲ್ಯವನ್ನು ಸಾಧಿಸುವುದು ರಾಜಯೋಗ. ಡಿ.ವಿ.ಜಿ. ಈ ಎರಡರಲ್ಲಿ ರಾಜಯೋಗದಲ್ಲೇ ಹೆಚ್ಚು ಒಲವನ್ನು ಹೊಂದಿದ್ದರು. ಶರೀರಕ್ಕೆ ನೋವನ್ನು ಕೊಟ್ಟು ವಿವಿಧ ಭಂಗಿಗಳಲ್ಲಿ ಬಗ್ಗಿಸುವುದರಿಂದ ಫಲವೇನು? ಅದು ಒಂದು ಸರ್ಕಸ್ಸಿನ ಪ್ರದರ್ಶನವಾಗುತ್ತದೆ ಅಷ್ಟೆ. ಮನಸ್ಸಿನಲ್ಲಿ ಪರಿವರ್ತನೆಯನ್ನು ತಾರದ ವ್ಯಾಯಾಮ ಮಾತ್ರ ಯೋಗ ಎನ್ನುವುದಾದರೆ ಅದು ದರ್ಶನ ಹೇಗಾದೀತು? ಎಂದು ಡಿ.ವಿ.ಜಿ. ಅಭಿಪ್ರಾಯಪಟ್ಟಿದ್ದಾರೆ.

ಇದನ್ನು ಕಗ್ಗದ ಒಂದು ಪದ್ಯ ತಿಳಿಸುತ್ತದೆ.

ಈ ಜಗದ ಗಂಧ ಪರಿತುರಿ ಹಸಿವ ಕೆಣಕುತಿರೆ
ಭೋಜನವ ನೀಡೆನೆನೆ ಮನ ಸುಮ್ಮನಿಹುದೆ?
ಸಾಜಗಳ ಕೊಲ್ಲೆನುವ ಹಠಯೋಗಕ್ಕಿಂತ ಸರಿ
ರಾಜಯೋಗದುಪಾಯ ಮಂಕುತಿಮ್ಮ

ಈ ಜಗತ್ತಿನ ಗಂಧ, ಎಂದರೆ ಅನುಭವ ಪರಿಪರಿಯ ಹಸಿವನ್ನು ಕೆಣಕುತ್ತದೆ. ಕಣ್ಣು ಆಕರ್ಷಕ ವಸ್ತುಗಳನ್ನು ನೋಡಲು ಬಯಸುತ್ತದೆ. ಕಿವಿ ಇಂಪಾದ ಗಾನವನ್ನು ಕೇಳಲು ಮನುಷ್ಯನನ್ನು ಸೆಳೆಯುತ್ತದೆ. ನಾಲಗೆ ಷಡ್ರಸೋಪೇತವಾದ ಆಹಾರ ಪಾನೀಯಗಳನ್ನು ಅಪೇಕ್ಷಿಸುತ್ತದೆ. ಮೂಗು ಸೌರಭಕ್ಕಾಗಿ ಕಾತರಿಸುತ್ತದೆ. ಚರ್ಮ ವಿವಿಧ ಸ್ಪರ್ಶಗಳನ್ನು ಇಷ್ಟಪಡುತ್ತದೆ. ಇದೆಲ್ಲ ಒಂದು ಪ್ರಕಾರದ ಹಸಿವು. ಇವುಗಳಿಂದ ಪ್ರಭಾವಿತನಾಗದವನಾರು? ಇವುಗಳಿಗೆ ಆಯಾ ಹಸಿವನ್ನು ತಣಿಸಲು ಭೋಜನವನ್ನು ನೀಡುವುದಿಲ್ಲ ಎಂದರೆ ಮನಸ್ಸು ಸುಮ್ಮನೆ ಇರದು. ಅದು ದಂಗೆ ಏಳುತ್ತದೆ. ಹಠಯೋಗವು ಈ ಬಯಕೆಗಳನ್ನೆಲ್ಲ ಹತ್ತಿಕ್ಕಬೇಕೆನ್ನುತ್ತದೆ. ಸಾಜ ಎಂದರೆ ಸಹಜ ಎಂದು ಅರ್ಥ. ಸಹಜವಾದ ಆಶೆಗಳನ್ನು ಕೊಲ್ಲು ಎನ್ನುವ ಹಠ ಯೋಗಕ್ಕಿಂತ, ರಾಜರು ಅನುಸರಿಸುತ್ತಿದ್ದ ರಾಜಯೋಗವೇ ಸರಿ ಎನ್ನುವುದು ಡಿವಿಜಿ ಅವರ ಸಿದ್ಧಾಂತ.

ಯೋಗಿಯ ಜೀವನ ಹೇಗಿರುತ್ತದೆ ಎಂಬುದನ್ನು ಕಗ್ಗದ ಒಂದು ಪದ್ಯದಲ್ಲಿ ದಾರ್ಶನಿಕ ಕವಿ ಡಿ.ವಿ.ಜಿ. ಹೇಳುತ್ತಾರೆ–

ಬೇಕು ಜೀವನಯೋಗಕೊಂದು ಬಹುಸೂಕ್ಷ್ಮನಯ
ಬೇಕೊಂದು ಜಾಗರೂಕತೆ, ಬುದ್ಧಿಸಮತೆ।
ತಾಕನೊಂದನು ಯೋಗಿ ನೂಕನೊಂದನು ಜಗದಿ
ಏಕಾಕಿ ಸಹವಾಸಿ ಮಂಕುತಿಮ್ಮ ॥

ಜೀವನವೇ ಒಂದು ಯೋಗವಾದರೆ ಅದು ಜೀವನ ಯೋಗ ಅಥವಾ ಜೀವನವನ್ನು ಪಾವನಗೊಳಿಸುವ ಯೋಗ ಜೀವನ ಯೋಗ. ಅದಕ್ಕೆ ಬಹುಸೂಕ್ಷ್ಮವಾದ ಒಂದು ನಯ, ಎಂದರೆ ನೀತಿ ಬೇಕಾಗುತ್ತದೆ. ಅದರ ಸಾಫಲ್ಯಕ್ಕೆ ಜಾಗರೂಕತೆಯೂ ಬೇಕು, ಬುದ್ಧಿಯ ಸಮತೆಯೂ ಬೇಕು. ಇದನ್ನೇ ಸಮದರ್ಶಿತ್ವ ಎನ್ನುವುದು. ಯೋಗಿಯಾದವನಿಗೆ ಯಾವುದರಲ್ಲೂ ಮೋಹವಿರುವುದಿಲ್ಲ. ಯಾವುದನ್ನು ಅವನು ದ್ವೇಷಿಸುವುದೂ ಇಲ್ಲ. ಇದನ್ನೇ ಇಲ್ಲಿ–ತಾಕನೊಂದನು ಯೋಗಿ, ನೂಕನೊಂದನು ಯೋಗಿ–ಎಂದಿದ್ದಾರೆ. ತಾಕುವುದು ಎಂದರೆ ಮೋಹದಿಂದ ಆಕರ್ಷಿತನಾಗುವುದು. ನೂಕುವುದು ಎಂದರೆ ದ್ವೇಷದಿಂದ, ತಿರಸ್ಕಾರದಿಂದ ತ್ಯಜಿಸುವುದು. ಯೋಗಿ ಅದನ್ನು ಮಾಡನು. ಎಂದರೆ ಅವನು ರಾಗ ದ್ವೇಷ ವರ್ಜಿತನಾಗಿರುತ್ತಾನೆ ಮತ್ತೆ ಅವನು ಏಕಾಂಗಿ ಸಹವಾಸಿ. ಗುಂಪಿನಲ್ಲಿ, ಗಜಿಬಿಜಿಯಲ್ಲಿ ಅವನು ಸೇರುವುದಿಲ್ಲ. ಇದನ್ನೇ ಭಗವದ್ಗೀತೆಯು 'ವಿವಿಕ್ತಸೇವೀ' ಎಂದು ಹೇಳಿದೆ. ನೀರಿನಲ್ಲಿದ್ದರೂ ನೀರನ್ನು ಸೋಕಿಸಿಕೊಳ್ಳದ ತಾವರೆ ಎಲೆಯಂತೆ ಸಮಾಜದಲ್ಲಿದ್ದರೂ ಯಾವ ಗೋಜಿಗೂ ಸಿಕ್ಕಿಕೊಳ್ಳದೆ ಯೋಗಿಯು ಆತ್ಮತೃಪ್ತನಾಗಿರುತ್ತಾನೆ.

ನಾಟಕವನ್ನು ನೋಡುವಾಗ ನಾವು ಅದರಲ್ಲಿ ಬೆರೆತಿರುತ್ತೇವೆ. ಅದೆಲ್ಲವೂ ಅವಾಸ್ತವ ಎಂಬ ಅರಿವಿದ್ದರೂ ರಸಾನುಭವಕ್ಕಾಗಿ ಅಲ್ಲಿಯ ಸನ್ನಿವೇಶಗಳ ತಾತ್ಕಾಲಿಕ ಸತ್ಯವನ್ನು ಒಪ್ಪಿಕೊಳ್ಳುತ್ತೇವೆ. ಹಾಗೆ ಯೋಗಿಯ ದೃಷ್ಟಿಯಲ್ಲೂ ಈ ಜಗತ್ತು ಮಾಯಾಕಲ್ಪಿತವಾದರೂ ವ್ಯಾವಹಾರಿಕ ಜಗತ್ತಿನಲ್ಲಿ ಅದರ ಸತ್ಯತ್ವವನ್ನು ಅವನು ತತ್ಕಾಲದಲ್ಲಿ ಒಪ್ಪಿಕೊಂಡು ನೋಟಕ (ಪ್ರೇಕ್ಷಕ)ನಾಗಿ ನಲಿಯುತ್ತಾನೆ. ಇತರರನ್ನೂ ನಲಿಸುತ್ತಾನೆ. ಇದನ್ನು ಕಗ್ಗದ ಒಂದು ಪದ್ಯ ಹೃದ್ಯವಾಗಿ ನಿರೂಪಿಸಿದೆ–

ನಾಟಕದೊಳನುವಿಂದ ಬೆರೆತದನು ಮೆಚ್ಚೆನಿಸಿ
ನೋಟಕನುಮಾಗಿ ತಾಂ ನಲಿದು ನಲಿಯಿಸುವಾ।
ಪಾಠವನು ಕಲಿತವನೆ ಬಾಳನಾಳುವ ಯೋಗಿ
ಆಟಕಂ ನಯವುಂಟು ಮಂಕುತಿಮ್ಮ ॥

ಯೋಗಿ ಸಮಾಜದಿಂದ ದೂರ ಓಡಿ ಹೋಗಿರುವುದಿಲ್ಲ. ಅದರಲ್ಲಿ ಬೆರೆತು ಹೋಗಿರುತ್ತಾನೆ. ಅದರ ಉತ್ತಮಾಂಶಗಳನ್ನು ಮೆಚ್ಚಿಕೊಳ್ಳುತ್ತಾನೆ. ತಾನೇ ನಟನೂ ಪ್ರೇಕ್ಷಕನೂ ಆಗಿ ನಲಿಯುತ್ತಾನೆ, ನಲಿಸುತ್ತಾನೆ. ಆದರೆ ಇದೆಲ್ಲ ನಟನೆ ಎಂಬ ಅರಿವು ಅವನಿಗಿರುತ್ತದೆ. ಈ ಪಾಠವನ್ನು ಕಲಿತವನೇ ಬಾಳನ್ನು ಆಳುವ ಯೋಗಿ. ಇದೊಂದು ಆಟ. ಇದಕ್ಕೆ ಹಲವು ನಿಯಮಗಳುಂಟು. ಚದುರಂಗದಾಟದಲ್ಲಿ ಇಟ್ಟುಕೊಳ್ಳುವ ರಾಜ ರಾಜನಲ್ಲ, ರಾಣಿ ರಾಣಿಯಲ್ಲ. ಆದರೆ ಆಟದ ನಿಯಮಾನುಸಾರ ಆ ಕಾಯಿಗಳಿಗೆ ಒಂದೊಂದು ರೀತಿ ಸಂಚರಿಸುವ ಶಕ್ತಿಯುಂಟು. ಆ ನಿಯಮವನ್ನು ಮೀರುವಂತಿಲ್ಲ. ಈ ವಿಶ್ವ ನಾಟಕದ ರಹಸ್ಯವನ್ನು ಅರಿತವನೇ ಯೋಗಿ ಎಂದು ಡಿ.ವಿ.ಜಿ. ಪ್ರತಿಪಾದಿಸಿದ್ದಾರೆ.

ಮನುಷ್ಯನು ಬಹಿರ್ಮುಖನಾಗಿರುವಾಗ, ಎಂದರೆ ಲೋಕದ ವ್ಯವಹಾರದಲ್ಲಿದ್ದಾಗ, ಎಲ್ಲ ವಿಷಯಗಳಲ್ಲಿ ಆಸಕ್ತನಾಗಿರಬೇಕು. ಆದರೆ ಅಂತರ್ಮುಖನಾಗಿ ಧ್ಯಾನಮಗ್ನನಾಗಿರುವಾಗ ಸಂಪೂರ್ಣ ವಿರಕ್ತನಾಗಿರಬೇಕು. ಅಂತಹ ಜೀವನವನ್ನು ನಡೆಸುವವನು ನಿಜವಾದ ಯೋಗಿ ಎಂದು ಡಿ.ವಿ.ಜಿ. ಒಂದು ಪದ್ಯದಲ್ಲಿ ತಿಳಿಸಿಕೊಟ್ಟಿದ್ದಾರೆ.

ಹೊರಗೆ ಲೋಕಾಸಕ್ತಿಯೊಳಗೆ ಸಕಲವಿರಕ್ತಿ
ಹೊರಗೆ ಕಾರ್ಯಧ್ಯಾನವೊಳಗುದಾಸೀನ।
ಹೊರಗೆ ಸಂಸ್ಕೃತಿಭಾರವೊಳಗದರ ತಾತ್ಸಾರ
ವರಯೋಗಮಾರ್ಗವಿದು ಮಂಕುತಿಮ್ಮ ॥

ಹೊರ ಪ್ರಪಂಚದಲ್ಲಿ ಜನರ ಕಣ್ಣಿಗೆ ಯೋಗಿ ಆಸಕ್ತನಂತೆ ಕಾರ್ಯನಿರತನಾಗಿ ಕಾಣಿಸುತ್ತಾನೆ. ಆದರೆ ಅಂತರಂಗದಲ್ಲಿ ಇದೆಲ್ಲ ಮಿಥ್ಯೆ, ಅರ್ಥವಿಲ್ಲದ ಗೊಡವೆ ಎಂಬ ಅರಿವಿನಿಂದ ವಿರಕ್ತನಾಗಿರುತ್ತಾನೆ. ಹೊರಗೆ ನಾನಾ ಕಾರ್ಯಗಳಲ್ಲಿ ಮಗ್ನನಾಗಿದ್ದರೂ, ಒಳಗೆ ಅವೆಲ್ಲ ನಿಸ್ಸಾರ, ಜೀವನದಲ್ಲಿ ಸಾಧಿಸಬೇಕಾದುದು ಬೇರೆ ಎಂಬ ಭಾವನೆ ಜಾಗೃತವಾಗಿರುವುದರಿಂದ ಬಾಹ್ಯ ಜಗತ್ತಿನ ಬಗೆಗೆ ಉದಾಸೀನತೆ.

ಹೊರಗೆ ಸಂಸ್ಕೃತಿ ಭಾರ, ನಾಟಕ, ಸಮಾರಂಭ, ಭಾಷಣ, ಸಂಗೀತಶ್ರವಣ, ಹಾರ, ತುರಾಯಿ. ಜನರಿಗಾಗಿ ಇದರಲ್ಲೆಲ್ಲ ಯೋಗಿಯೂ ಭಾಗಿ. ಆದರೆ ಹೃದಯದೊಳಗೆ ಈ ತೋರಿಕೆಯ ಕಾರ್ಯದ ಬಗೆಗೆ ತಾತ್ಸಾರ. ಅವನ ಬಗೆಗೆ ಏನೂ ತಿಳಿಯದವರು ವೇದಿಕೆಯ ಮೇಲೆ ನಿಂತು ಪರಿಚಯ ಭಾಷಣ ಮಾಡುವುದು, ಮುಖಸ್ತುತಿ ಮಾಡಿಸುವುದು ಇದೆಲ್ಲ ಯೋಗಿಗೆ ಅಸಹ್ಯವನ್ನುಂಟು ಮಾಡುತ್ತಿರುತ್ತದೆ ಅಂತರಂಗದಲ್ಲಿ. ಅದೇ ತಾತ್ಸಾರಕ್ಕೆ ಕಾರಣ. ಆದರೆ ಲೋಕ ವ್ಯವಹಾರಕ್ಕಾಗಿ ಬಹಿರಂಗದಲ್ಲಿ ಹಸನ್ಮುಖನಾಗಿ ಎಲ್ಲವನ್ನೂ ಯೋಗಿಯು ಸಹಿಸಿಕೊಳ್ಳುತ್ತಾನೆ. ಹೀಗೆ ಬಹಿರಂಗವು ಅಂತರಂಗವನ್ನು ಬಾಧಿಸದಂತೆ ನೋಡಿಕೊಳ್ಳುವ ವಿಧಾನವೇ ಯೋಗಮಾರ್ಗ. ಇದೆಲ್ಲ ಡಿ.ವಿ.ಜಿ. ಅವರ ಸ್ವಾನುಭವದ ನುಡಿಮುತ್ತು.

ಮಹಾಪುರುಷರನ್ನು ಕಂಡಾಗ ಜನರು 'ಇವರೂ ನಮ್ಮ ಹಾಗೆ ಇದ್ದಾರೆ. ಇವರಿಗೂ ನಮ್ಮಂತೆ ಸಂಸಾರವಿದೆ. ಲೋಕ ವ್ಯವಹಾರಗಳಲ್ಲಿ ತೊಡಗಿದ್ದಾರೆ, ಇವರಲ್ಲಿ ವಿಶೇಷವೇನಿದೆ?' ಎಂದುಕೊಳ್ಳುತ್ತಾರೆ. ಆದರೆ ಒಳಗಿನ ಜೀವನದಲ್ಲಿ ಆ ಮಹಾಪುರುಷರು ತ್ಯಾಗಿಗಳಾಗಿ ಆತ್ಮಾರಾಮರಾಗಿರುತ್ತಾರೆ. ಮೇಲ್ನೋಟಕ್ಕೆ ನಮಗೂ ಅವರಿಗೂ ವ್ಯತ್ಯಾಸವಿಲ್ಲದಿರಬಹುದು. ಇದನ್ನು ಕಾಗೆ–ಕೋಗಿಲೆಗಳ ದೃಷ್ಟಾಂತದಿಂದ ಡಿವಿಜಿ ನಿರೂಪಿಸುತ್ತಾರೆ.

ಕಾಗೆಯುಂ ಕೋಗಿಲೆಯುಮೊಂದೆ ಮೇಲ್ನೋಟಕ್ಕೆ
ಯೋಗಿಯುಂ ಸಂಸಾರಭೋಗಿಯೇ ಹೊರಕೆ ।
ಲೋಗರವೊಲಿರುತೆ ಸುಖ ದುಃಖಸಂಭ್ರಮಗಳಲಿ
ತ್ಯಾಗಿಯವನಂತರದಿ ಮಂಕುತಿಮ್ಮ ॥

ದೂರದಿಂದ ನೋಡಿದಾಗ ಕಾಗೆ ಕೋಗಿಲೆಗಳಲ್ಲಿ ಅಂತರವಿಲ್ಲ. ಎರಡರ ಬಣ್ಣವೂ ಕಪ್ಪೇ. ಹಾಗೆ ಹೊರಗಣ್ಣಿಗೆ ಯೋಗಿಯೂ ಒಬ್ಬ ಭೋಗಿಯಂತೆ ಕಾಣಿಸಬಹುದು. ಸುಖದ ಸಂದರ್ಭಗಳಲ್ಲಿ ಅವನೂ ಸಾಮಾನ್ಯ ಮಾನವರಂತೆ ನಗಬಹುದು. ದುಃಖದ ಸನ್ನಿವೇಶಗಳಲ್ಲಿ ಅವನೂ ಕಣ್ಣೀರು ಹಾಕಬಹುದು. ಮದುವೆ, ಮುಂಜಿ, ಸನ್ಮಾನ ಇತ್ಯಾದಿ ಸಂಭ್ರಮದ ಸಮಾರಂಭಗಳಲ್ಲಿ ಭಾಗವಹಿಸಬಹುದು. ಪ್ರಾಪಂಚಿಕ ಜನರಂತೆ ಕಾಣಿಸಬಹುದು. ಆದರೆ ಅಂತರಂಗದಲ್ಲಿ ಅವನು ಇವೆಲ್ಲದರಿಂದ ಮುಕ್ತ.

ಡಿವಿಜಿ ಹೀಗೆ ಬದುಕಿದ ಯೋಗಿ. ಲೋಕದಲ್ಲಿ ಎಲ್ಲರಂತೆ ಇದ್ದು ಅಂತರಂಗದಲ್ಲಿ ಅಧ್ಯಾತ್ಮ ಶಿಖರವನ್ನೇರಿದ ತ್ಯಾಗಿ. ಅವರು ತೋರಿಸಿದ ದಾರಿಯಲ್ಲಿ ಸಾಗಿ ಸತ್ಯವನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವವರಾಗಿ ಧನ್ಯರಾಗಬೇಕು.

ಫ್ಯಾಷನವ್ಯ ಎಗ್ಸಿಬಿಷನ್...



ಮೈಸೂರಿನ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ಫ್ಯಾಷನವ್ಯ ಎಗ್ಸಿಬಿಷನ್ ಅನ್ನು ಮಂಗಳವಾರ ದಿವ್ಯ ಫೌಂಡೇಶನ್ ಸಂಸ್ಥಾಪಕ ಟ್ರಸ್ಟಿ ನಮ್ರತಾ ಶೆಣೈ ಉದ್ಘಾಟಿಸಿದರು. ಜುನೋ ಅಹುವಾಲಿಯಾ, ಮೈಸೂರು ಇನ್ನರ್‌ವೀಲ್ ಕ್ಲಬ್ ಗೋಲ್ಡ್ ಪ್ರೆಸಿಡೆಂಟ್ ಪ್ರತಿಭಾರಾವ್, ಎ ಶಂಕರ್‌ಚೆಟ್ಟಿ ಅಂಡ್ ಸನ್ಸ್ ಡೈರೆಕ್ಟರ್ ಪಲ್ಲವಿ ಆದರ್ಶ್ ಈ ವೇಳೆ ಉಪಸ್ಥಿತರಿದ್ದರು. ಬುಧವಾರ ಬೆಳಗ್ಗೆ 11ರಿಂದ ರಾತ್ರಿ 9ರವರೆಗೆ ತರಾತರಿ ಫ್ಯಾಷನ್ ಮತ್ತು ಲೈಫ್‌ಸ್ಟೈಲ್ ವಸ್ತ್ರ ವಿನ್ಯಾಸಗಳ ಪ್ರದರ್ಶನ ಮತ್ತು ಮಾರಾಟವಿದೆ.

ರೈತರಿಗೆ ಮೂರು ದಿನ ಕೃಷಿ ತರಬೇತಿ

ಮೈಸೂರು, ಜು.2– ನಾಗನಹಳ್ಳಿಯ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಜು.8ರಿಂದ 10ರವರೆಗೆ "ಭವಿಷ್ಯಕ್ಕಾಗಿ ಸಾವಯವ ಕೃಷಿ" ವಿಷಯದ ಕುರಿತು ರೈತ/ರೈತ ಮಹಿಳೆಯರಿಗೆ ತರಬೇತಿ ಕಾರ್ಯಕ್ರಮ ಆಯೋಜಿಸಲಾಗಿದೆ. ತರಬೇತಿಯಲ್ಲಿ ಭಾಗವಹಿಸುವ ರೈತ/ರೈತಮಹಿಳೆಯರಿಗೆ ಊಟ, ವಸತಿ ವ್ಯವಸ್ಥೆ ಒದಗಿಸಲಾಗುವುದು. ಆಸಕ್ತರು ಹೆಸರನ್ನು ತರಬೇತಿ ಕೇಂದ್ರದ ಸಹಾಯಕ ಕೃಷಿ ನಿರ್ದೇಶಕರ ಮೊಬೈಲ್ ಸಂ: 9945493589ಗೆ ಕರೆಮಾಡಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು.

ಸದ್ಯಕ್ಕೆ ಯಾವ ಸಭೆ ನಡೆಸಬೇಡಿ; ಯಾವುದೇ ನಿರ್ಣಯ ಕೈಗೊಳ್ಳಬೇಡಿ

ಮುಡಾ ನೂತನ ಆಯುಕ್ತರಿಗೆ ಸರ್ಕಾರ ಸೂಚನೆ

ಮೈಸೂರು, ಜು.2(ಎಸ್‌ಬಿಡಿ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ನಿವೇಶನ ಹಂಚಿಕೆಯಲ್ಲಿನ ಹಗರಣ ಸಂಬಂಧ ತನಿಖೆ ಮುಗಿಯುವವರೆಗೆ ಯಾವುದೇ ಸಭೆ ನಡೆಸದಂತೆ ಪ್ರಾಧಿಕಾರದ ನೂತನ ಆಯುಕ್ತ ಎ.ಎನ್. ರಘುನಂದನ್ ಅವರಿಗೆ ನಗರಾಭಿವೃದ್ಧಿ ಇಲಾಖೆ ಮಂಗಳವಾರ ಸೂಚಿಸಿದೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಕಾಯ್ದೆ, ನಿಯಮ, ವಲಯ ನಿಯಮಾವಳಿ, ಸರ್ಕಾರದ ಆದೇಶ ಹಾಗೂ ಸುತ್ತೋಲೆಗಳನ್ವಯ ಸೂಚನೆಗಳನ್ನು ಪಾಲಿಸದೇ ಅವ್ಯವಹಾರ, ಕರ್ತವ್ಯ ಲೋಪವೆಸಗಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಕೂಲಂಕುಷವಾಗಿ ತನಿಖೆ ನಡೆಸಿ, ಸರ್ಕಾರಕ್ಕೆ ಸಮಗ್ರ ವರದಿ ಸಲ್ಲಿಸಲು ತನಿಖಾ ತಂಡ ರಚಿಸಲಾಗಿದೆ. ಆ ತನಿಖಾ ತಂಡ

ಪ್ರಾಧಿಕಾರದಲ್ಲಿನ ಕಡತಗಳನ್ನು ಪರಿಶೀಲಿಸಿ, ಸರ್ಕಾರಕ್ಕೆ ವರದಿ ಸಲ್ಲಿಸುವವರೆಗೆ ಅಥವಾ ಸರ್ಕಾರದ ಮುಂದಿನ ಆದೇಶದವರೆಗೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ ಕಲಂ 8ರನ್ವಯ ಜರುಗಿಸಬೇಕಾದ ಯಾವುದೇ ಸಭೆಗಳನ್ನು ನಡೆಸತಕ್ಕದ್ದಲ್ಲ. ಪ್ರಸ್ತುತ ಹಂತದಲ್ಲಿರುವ ಯಾವುದೇ ಕಡತಗಳಲ್ಲಿ ತೀರ್ಮಾನವನ್ನು ಕೈಗೊಳ್ಳುವಂತಿಲ್ಲ. ಈ ಹಿಂದೆ ಕೈಗೊಂಡ ಯಾವುದೇ ಸಾಮಾನ್ಯ ಸಭೆಯ ತೀರ್ಮಾನಗಳನ್ನು ಅನುಷ್ಠಾನಗೊಳಿಸುವಂತಿಲ್ಲ. ಸರ್ಕಾರದ ನಿರ್ದೇಶನಗಳಿಲ್ಲದೇ ಯಾವುದೇ ನಿವೇಶನಗಳ ವಿಲೇವಾರಿ ಕುರಿತು ಕ್ರಮ ಜರುಗಿಸುವಂತಿಲ್ಲ.

ಈ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ಕೆ.ಲತಾ ಪತ್ರದ ಮೂಲಕ ಮುಡಾ ಆಯುಕ್ತರಿಗೆ ತಿಳಿಸಿದ್ದಾರೆ.

ಅತ್ಯಾಚಾರ ಆರೋಪ ಪ್ರಕರಣ: ಜೈಲಿನಿಂದ ದೇವರಾಜೇಗೌಡ ಬಿಡುಗಡೆ

ಹಾಸನ: ಅತ್ಯಾಚಾರ ಆರೋಪದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದ ವಕೀಲ, ಬಿಜೆಪಿ ಮುಖಂಡ ಜಿ.ದೇವರಾಜೇ ಗೌಡ ಅವರಿಗೆ ಹೈಕೋರ್ಟ್ ಸೋಮವಾರ ಜಾಮೀನು ಮಂಜೂರು ಮಾಡಿದ್ದು, ಮಂಗಳವಾರ ಇಲ್ಲಿನ ಜಿಲ್ಲಾ ಕಾರಾಗೃಹದಿಂದ ಬಿಡುಗಡೆಯಾದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ವಕೀಲನಾಗಿ ನ್ಯಾಯಾಂಗದ ವ್ಯವಸ್ಥೆಗೆ ತಲೆಬಾಗುವೆ. ತನಿಖೆಗೆ ಸಹಕರಿಸಿದ್ದೇನೆ. ನಾನು ರಾಜಕಾರಣಿಯಾಗಿರುವುದರಿಂದ ರಾಜ ಕೀಯವೂ ಇರುತ್ತದೆ. ಪ್ರಕರಣದಲ್ಲಿ ಯಾರಿದ್ದಾರೆ ಎಂಬುದು ಹೊರಬರುತ್ತದೆ. ಸತ್ಯಕ್ಕೆ ಜಯವಿದೆ. ಪ್ರಕರಣದಿಂದ ಮುಕ್ತ ಗೊಳ್ಳುವವರೆಗೂ ಯಾವುದೇ ಪ್ರತಿಕ್ರಿಯೆ ಕೊಡಲ್ಲ ಎಂದರು.



Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ ಬುಧವಾರ 3 ಜುಲೈ 2024

ಮಲಬಾರ್ ಗೋಲ್ಡ್ ಆಂಡ್ ಡೈಮಂಡ್ಸ್‌ನಲ್ಲಿ ವೈದ್ಯರ ದಿನಾಚರಣೆ



ಮೈಸೂರಿನ ಬಿ.ಎನ್. ರಸ್ತೆಯಲ್ಲಿರುವ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್‌ನಲ್ಲಿ ವೈದ್ಯರ ದಿನ ಆಚರಿಸಲಾಯಿತು. ಈ ವೇಳೆ ಇಎಸ್ಐ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಎಚ್.ಎನ್.ಶಿವಕುಮಾರ್, ವೈದ್ಯಕೀಯ ಅಧಿಕಾರಿ ಡಾ.ಶೇಕ್ ಮನ್ಸೂರ್ ಹುಸೇನ್, ಪಲ್ಮನರಿ ಮೆಡಿಸಿನ್ ಆಸ್ಪತ್ರೆಯ ಡಾ.ಪ್ರಶಾಂತ್, ಸರ್ಕಾರಿ ಆಯುರ್ವೇದಿಕ್ ಆಸ್ಪತ್ರೆಯ ಡಾ.ಶೋಭಾ ಸಿಂಗ್, ದಂತ ವೈದ್ಯ ಡಾ.ಅಶ್ರತ್ ಅಜ್ವಿನ್ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಮೈಸೂರು ಶೋರೂಂನ ಸ್ಟೋರ್ ಹೇಡ್ ಶರಫುದ್ದೀನ್ ಉಪಸ್ಥಿತರಿದ್ದರು.

ಕೈವಲ್ಯ ದೊರೆಯಬೇಕಾದರೆ ಆಧ್ಯಾತ್ಮಕ ಪರಮಾನುಭವಬೇಕು



ಮಹಾರಾಣಿ ಕಲಾ ಕಾಲೇಜಿನ ಪ್ರಾಂಶುಪಾಲರಾದ ಡಾ.ವಸಂತ ಕುಮಾರ್ ಮಾತನಾಡಿದರು.

ಮೈಸೂರು,ಜು.2–ಕೈವಲ್ಯ ದೊರೆಯಬೇಕಾದರೆ ಆಧ್ಯಾತ್ಮಿಕ ಪರಮಾನುಭವಬೇಕು ಎಂದು ಮೈಸೂರು ಮಹಾರಾಣಿ ಕಲಾ ಕಾಲೇಜಿನ ಪ್ರಾಂಶುಪಾಲ ಡಾ.ಬಿ.ವಿ. ವಸಂತಕುಮಾರ್ ತಿಳಿಸಿದರು.

ಮೈಸೂರು ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವ ಜ್ಯೋತಿ ಸಭಾಂಗಣದಲ್ಲಿ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ವತಿಯಿಂದ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳವರ ದಿವ್ಯ ಆಶೀರ್ವಾದಗಳೊಂದಿಗೆ ನಡೆದ ಶಿವಾನುಭವ ದಾಸೋಹ ಮಾಲಿಕೆಯ 314ನೆಯ ಕಾರ್ಯಕ್ರಮದಲ್ಲಿ 'ಶ್ರೀ ನಿಜಗುಣ ಶಿವಯೋಗಿಗಳವರ ಪರಮಾರ್ಥ ಗೀತೆ' ಕುರಿತು ಉಪನ್ಯಾಸ ನೀಡುತ್ತಾ ತಿಳಿಸಿದರು.

ಕೈವಲ್ಯ ಎಂದರೆ ನೋವನ್ನು ಕಳೆದುಕೊಂಡು ಸಂತೋಷವನ್ನು ಹುಡುಕುವುದು. ಯಾರು ಸಾಯಬಾರದು ಎಂದು ಬಯಸುತ್ತಾರೊ, ನೋವಿಲ್ಲದ ಬದುಕು ಬೇಕು ಎಂದು ಬಯಸುತ್ತಾರೋ ಅವರು ಪರಮಾರ್ಥಗೀತೆ ಗ್ರಂಥವನ್ನು ಅಧ್ಯಯನ ಮಾಡಬೇಕು. ಈ ಗ್ರಂಥದಿಂದ ಭಾರತೀಯ ಜ್ಞಾನಪರಂಪರೆಯ ಸತ್ಯ ಮತ್ತು ಸ್ವರೂಪ ತಿಳಿಯುತ್ತದೆ. ಅದರ ಜೊತೆಗೆ ವೈದ್ಯಕೀಯ ವಿಜ್ಞಾನದ ಸೂಕ್ಷ್ಮ ಸತ್ಯಗಳು ಇದರಲ್ಲಿವೆ. ಇದು ಕೇವಲ ಧಾರ್ಮಿಕತೆಗೆ ಸಂಬಂಧಪಟ್ಟ ಗ್ರಂಥವಲ್ಲ, ಮಹಾ ವೈಜ್ಞಾನಿಕ ಕೃತಿಯೂ ಹೌದು ಎಂದು ಹೇಳಿದರು.

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಜನಸಾಮಾನ್ಯರಿಗೆ ಅರ್ಥವಾಗುವ ರೀತಿಯಲ್ಲಿ ದಾಸ ಸಾಹಿತ್ಯ ಮತ್ತು ವಚನ ಸಾಹಿತ್ಯ ರಚನೆಯಾಗಿವೆ. ನಿಜಗುಣ ಶಿವಯೋಗಿಗಳವರು ಪರಮಾರ್ಥಗೀತೆಯಲ್ಲಿ ಅತ್ಯಂತ ಸರಳ–ಸುಂದರವಾಗಿ ಆಧ್ಯಾತ್ಮಿಕ ವಿಷಯಗಳ ಬಗ್ಗೆ ತಿಳಿಸಿದ್ದಾರೆ ಎಂದರು.

ದೇವನೂರು ಬಿ.ನಿರಂಜನಮೂರ್ತಿ ಕಾರ್ಯಕ್ರಮದ ಪ್ರಾಯೋಜಕತ್ವ ವಹಿಸಿದ್ದರು. ಶ್ರೀ ಶಿವರಾತ್ರಿ ರಾಜೇಂದ್ರ ಕಲಾ ತಂಡದವರು ಭಜನೆ ನಡೆಸಿಕೊಟ್ಟರು. ಪಿ.ಎಂ.ಮಹದೇವಸ್ವಾಮಿ ಸ್ವಾಗತಿಸಿದರು. ಡಾ. ಡಿ.ಎಂ. ಮಹೇಂದ್ರಮೂರ್ತಿ ವಂದಿಸಿದರು. ಆರ್.ಎಸ್. ಕುಮಾರ್ ಕಾರ್ಯಕ್ರಮ ನಿರೂಪಿಸಿದರು.

ಸೇವಾ ಕಾರ್ಯದ ಮೂಲಕ ಗೋಲ್ಡನ್ ಸ್ಟಾರ್ ಗಣೇಶ್ ಹುಟ್ಟುಹಬ್ಬ ಆಚರಣೆ



ಅರುಣೋದಯ ವಿಶೇಷ ಶಾಲೆಯಲ್ಲಿ ಗೋಲ್ಡನ್ ಸ್ಟಾರ್ ಆರ್ಮಿ ಮೈಸೂರು ಸಂಘಟನೆಯಿಂದ ಗೋಲ್ಡನ್ ಸ್ಟಾರ್ ಗಣೇಶ್ ಹುಟ್ಟುಹಬ್ಬ ಆಚರಿಸಲಾಯಿತು.

ಮೈಸೂರು, ಜು.2– ಚಾಮುಂಡಿಪುರಂನಲ್ಲಿರುವ ಅರುಣೋದಯ ವಿಶೇಷ ಶಾಲೆಯಲ್ಲಿ ಗೋಲ್ಡನ್ ಸ್ಟಾರ್ ಆರ್ಮಿ ಮೈಸೂರು ಸಂಘಟನೆ ವತಿಯಿಂದ ಅರುಣೋದಯ ವಿಶೇಷ ಶಾಲೆಗೆ ಆಹಾರದ ಕಿಟ್ ಹಾಗೂ ಸಿಹಿ ವಿತರಿಸಿ ಗೋಲ್ಡನ್ ಸ್ಟಾರ್ ಗಣೇಶ್ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.


ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಯುವ ನಿರ್ದೇಶಕ ಪ್ರಣವ್ ಸಿಂಹ, ಚಿತ್ರನಟರ ಅಭಿಮಾನಿಗಳು ದುಂದು ವೆಚ್ಚ ಮಾಡಿ ಜನ್ಮದಿನಾಚರಣೆ ಆಚರಿಸುವ ಬದಲು ಸಮಾಜಕ್ಕೆ ಯಾವುದಾದರೂ ಸೇವೆಯನ್ನೇ ಗುರಿ ಮಾಡಿಕೊಂಡು ಕೆಲಸ ಮಾಡಿದರೆ ನಿಜಕ್ಕೂ ಅದು ಆ ನಟರು ಮತ್ತು ಅವರ ಅಭಿಮಾನಿಗಳಿಗೆ ಹೆಸರು ತಂದು ಕೊಡುತ್ತದೆ. ಈ ಹಿಂದೆ ಕೋವಿಡ್ ಸಂದರ್ಭದಲ್ಲಿ ಗಣೇಶ್ ಹಾಗೂ ಅವರ ಧರ್ಮಪತ್ನಿ 1,000 ಬಡ ಜನರ ಕುಟುಂಬಕ್ಕೆ ನೆರವಾಗಿದ್ದರು. ಅವರು ಸಮಾಜ ಸೇವೆಯಲ್ಲೂ ತಾವು ಮುಂದು ಎಂದು ತೋರಿಸಿಕೊಟ್ಟಿದ್ದಾರೆ ಎಂದು ಹೇಳಿದರು. ಇದೇ ವೇಳೆ ಹರೀಶ್, ರವಿಚಂದ್ರ, ಸಚಿನ್ ನಾಯಕ್, ರಾಘವೇಂದ್ರ, ನವೀನ್, ಶಾಲೆಯ ಶಿಕ್ಷಕರು ಹಾಜರಿದ್ದರು.

ಕಾರಂಜಿ ಸ್ಪೋರ್ಟ್ಸ್ ಕ್ಲಬ್ ನೂತನ ಪದಾಧಿಕಾರಿಗಳು


ಮೈಸೂರು, ಜು. 2–ಮೈಸೂರಿನ ಕಾರಂಜಿ ಸ್ಪೋರ್ಟ್ಸ್ ಕ್ಲಬ್‌ಗೆ 2024–26ನೇ ಸಾಲಿಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಹೆಳವರಹುಂಡಿ ಸಿದ್ದಪ್ಪ, ಉಪಾಧ್ಯಕ್ಷರಾಗಿ ಎಂ. ಬಸವಣ್ಣ, ಎನ್.ಎನ್.ಮಹದೇವಸ್ವಾಮಿ, ಕಾರ್ಯದರ್ಶಿಯಾಗಿ ಎಂ.ಷಡಕ್ಷರಿ, ಸಹ ಕಾರ್ಯದರ್ಶಿಯಾಗಿ ಮಹದೇವಪ್ರಸಾದ್, ಖಜಾಂಚಿಯಾಗಿ ಸಿದ್ದೇಶ್‌ಬಾಬು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಹಾಗೆಯೇ ನಿರ್ದೇಶಕರಾಗಿ ಎಸ್.ನಾಗಯ್ಯ, ಎನ್. ರಮೇಶ್, ಸಿ.ಎಸ್.ಸ್ವಾಮಿ, ಪ್ರಭುಸ್ವಾಮಿ, ಕೆ.ಪಿ.ಕುಮಾರಸ್ವಾಮಿ, ಸಿ.ಲಿಂಗಪ್ಪ, ಸಿದ್ದಲಿಂಗಸ್ವಾಮಿ, ವೆಂಕಟೇಶ್, ಮುರಳೀಧರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಭಾವನಿಂದಲೇ ಭಾಮೈದನ ಹತ್ಯೆ ಪ್ರಕರಣ

ಮಗನ ಅಗಲಿಕೆಯಿಂದ ನೊಂದಿದ್ದ ತಾಯಿ ಆತ್ಮಹತ್ಯೆ



ಅಭಿಷೇಕ್



ರವಿಚಂದ್ರ

ಮೈಸೂರು,ಜು.2(ಆರ್‌ಕೆ)–ತನ್ನ ಅಳಿಯನಿಂದಲೇ ಕೊಲೆಯಾದ ಮಗನ ಅಗಲಿಕೆ ನೋವು ಸಹಿಸಲಾರದೆ ತಾಯಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮೈಸೂರು ತಾಲೂಕು, ಕೂರ್ಗಳ್ಳಿಯಲ್ಲಿ ಸಂಭವಿಸಿದೆ.

ಗ್ರಾಮದ ಸ್ವಾಮಿಗೌಡರ ಪತ್ನಿ ಭಾಗ್ಯ (45) ನೇಣಿಗೆ ಶರಣಾದರು. ಇತ್ತೀಚೆಗಷ್ಟೇ ಮೈಸೂರಿನ ರಾಮಕೃಷ್ಣನಗರದ ತಮ್ಮ ಮಗಳ ಮನೆಯಲ್ಲಿ ಇವರ ಅಳಿಯ ರವಿಚಂದ್ರ, ಮಗ ಅಭಿಷೇಕ್‌ನನ್ನು ಹತ್ಯೆ ಮಾಡಿದ್ದ.

ಮಗನ ಹತ್ಯೆಯಿಂದಾಗಿ ತೀವ್ರವಾಗಿ ನೊಂದಿದ್ದ ಭಾಗ್ಯ ಅವರು ಮಾನಸಿಕವಾಗಿ ಜರ್ಝರಿತರಾಗಿದ್ದರು. ಅತ್ತ ಅಳಿಯ ಜೈಲು ಸೇರಿದ. ಇತ್ತ ಮಗ ಕೊಲೆಯಾದ್ದರಿಂದ ಮುಂದೆ ಜೀವನದ ದುಸ್ಥಿತಿ ನೆನೆದು ಸೋಮವಾರ ಮನೆಯಲ್ಲೇ ಸೀರೆಯಿಂದ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ವಿಜಯನಗರ ಠಾಣೆ ಪೊಲೀಸರು ಮಹಜರು ನಡೆಸಿ ಮೃತದೇಹವನ್ನು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರಕ್ಕೆ ಸ್ಥಳಾಂತರಿಸಿ ಇಂದು ಬೆಳಗ್ಗೆ ಮರಣೋತ್ತರ ಪರೀಕ್ಷೆ ನಂತರ ವಾರಸುದಾರರಿಗೆ ಒಪ್ಪಿಸಿದರು.

ವರದಕ್ಷಿಣೆಗಾಗಿ ಒತ್ತಾಯಿಸಿ ಪತ್ನಿ ವಿದ್ಯಾಳಿಗೆ ಕಿರುಕುಳ ನೀಡುತ್ತಿದ್ದರಿಂದ ಸಹೋದರಿಯನ್ನು ಕರೆತರಲೆಂದು ಅಭಿಷೇಕ್ ಮೈಸೂರಿನ ರಾಮಕೃಷ್ಣನಗರ 'ಐ' ಬ್ಲಾಕ್ ಮನೆಗೆ ತೆರಳಿದ್ದಾಗ ಜೂನ್ 8ರಂದು ರವಿಚಂದ್ರ ಚಾಕುವಿನಿಂದ ಇರಿದು ಭಾಮೈದುನನ್ನು ಕೊಲೆ ಮಾಡಿದ್ದ. ಆ ವೇಳೆ ರವಿಚಂದ್ರನ ಸಹೋದರ ಕುಮಾರ್, ತಾಯಿ ಶಾರದಾ, ಸಂಬಂಧಿ ಪದ್ಮಾ ಅವರ ಮಗ ಕಾರ್ತಿಕ್ ಸಹ ಮಾರಕಾಸ್ತ್ರಗಳಿಂದ ಅಭಿಷೇಕ್ ಮೇಲೆ ಹಲ್ಲೆ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದು.

ಕೆಎಂಎಫ್ ನಿತ್ಯ ಕೋಟಿ ಲೀಟರ್ ಹಾಲು ಸಂಗ್ರಹ

- ಸಿಎಂ ಸಿದ್ದರಾಮಯ್ಯ ಗೋ ಮಾತೆಗೆ ಪೂಜೆ ಸಲ್ಲಿಸಿ, ಸಂಭ್ರಮಾಚರಣೆ
- ರೈತರಿಗೆ ಅನುಕೂಲ ಕಲ್ಪಿಸಲು ಹಾಲಿನ ಪ್ರಮಾಣ ಹೆಚ್ಚಿಸಿ, ಅದಕ್ಕೆ 2 ರೂ. ಅಧಿಕ ಬೆಲೆ ನಿಗದಿ

ಬೆಂಗಳೂರು, ಜು.2(ಕೆಎಂಶಿ) – ಕೆಎಂಎಫ್ ಪ್ರತಿದಿನ ಒಂದು ಕೋಟಿ ಲೀಟರ್ ಹಾಲು ಸಂಗ್ರಹ ಮಾಡುತ್ತಿದ್ದು, ಇತಿಹಾಸದಲ್ಲಿಯೇ ಇದು ಮೈಲಿಗಲ್ಲು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಕೆಎಂಎಫ್‌ನಿಂದ 1 ಕೋಟಿ ಲೀಟರ್ ಹಾಲಿನ ಸಂಗ್ರಹದ ಸಂಭ್ರಮಾಚರಣೆ ಅಂಗವಾಗಿ ಗೋ ಮಾತೆಗೆ ಪೂಜೆ ಸಲ್ಲಿಸಿದ ನಂತರ ಸುದ್ದಿಗಾರ ರೊಂದಿಗೆ ಮಾತನಾಡಿದ ಅವರು, ಕರ್ನಾಟಕದಲ್ಲಿ ಹಾಲಿನ ಉತ್ಪಾದನೆ ಕಳೆದ ವರ್ಷ ಜೂನ್ ಮಾಹೆಯಲ್ಲಿ ದಿನವೊಂದಕ್ಕೆ 90 ಲಕ್ಷ ಲೀಟರ್ ಇತ್ತು ಎಂದರು.

ಡೈರಿಗಳು ಹಾಗೂ ಹಾಲು ಒಕ್ಕೂಟಗಳು ಪ್ರತ್ಯೇಕವಾಗಿದ್ದವು. ಹಾಲಿನ ಸೊಸೈಟಿಗಳೂ ರೈತರ ಸಂಘಟನೆಗಳೇ ಆಗಿವೆ. ರಾಜ್ಯದಲ್ಲಿ ಸುಮಾರು 16,000 ಸೊಸೈಟಿಗಳಿದ್ದು, 15 ಹಾಲು ಒಕ್ಕೂಟಗಳಿವೆ. ಕೆಲವೆಡೆ ಎರಡು–ಮೂರು ಜಿಲ್ಲೆ ಸೇರಿ ಒಂದು ಒಕ್ಕೂಟ ಮಾಡಿಕೊಂಡಿದ್ದಾರೆ. ಒಂದು ಕೋಟಿ ಲೀಟರ್ ಹಾಲು ಉತ್ಪಾದನೆಯಾಗುತ್ತಿರುವುದರಿಂದ ಗ್ರಾಹಕರಿಗೆ ಅರ್ಧ ಲೀಟರ್ ಹಾಲಿನ ಪ್ಯಾಕೆಟ್‌ನಲ್ಲಿ 50 ಮಿಲಿ ಲೀಟರ್ ಹೆಚ್ಚುವರಿಯಾಗಿ ನೀಡಲಾಗುತ್ತಿದೆ, ಹೆಚ್ಚುವರಿ ಸಂಗ್ರಹಿತ ಹಾಲನ್ನು ಮಾರಾಟ ಮಾಡಬೇಕಿದೆ, ರೈತರು ಹಾಗೂ ಸೊಸೈಟಿಗಳಿಗೆ ಹಾಲು ಖರೀದಿಸುವುದಿಲ್ಲ ಎನ್ನಲಾಗುವುದಿಲ್ಲ. ರೈತರಿಗೆ ಸಹಾಯ ಮಾಡಲು ಗ್ರಾಹಕರಿಗೆ ನೀಡುವ ಹಾಲಿನ ಪ್ರಮಾಣ ಹೆಚ್ಚಿಸಲಾಗಿದೆ, ಇದಕ್ಕೆ 2 ರೂ. ಹೆಚ್ಚಿಸಲಾಗಿದೆ. ಹಾಲಿನ ದರ ಏರಿಕೆ ಮಾಡಿಲ್ಲ ಎಂದು ಸಿದ್ದರಾಮಯ್ಯ ಹೇಳಿದರು.



ಗೋ ಮಾತೆಗೆ ಪೂಜೆ ಸಲ್ಲಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ.

ವಿರೋಧ ಪಕ್ಷದವರು ಇದನ್ನು ಅರ್ಥ ಮಾಡಿಕೊಳ್ಳದೆ ಹಾಲಿನ ಬೆಲೆ ಜಾಸ್ತಿ ಮಾಡಲಾಗಿದೆ ಎಂಬುದಾಗಿ ಅಪಪ್ರಚಾರ ಮಾಡುತ್ತಿದ್ದಾರೆ. ರೈತರ ಬಗ್ಗೆ ಅವರಿಗೆ ಕಾಳಜಿ ಇಲ್ಲ ಎಂದರು.

ಹಾಲು ಉತ್ಪಾದನೆ ಹೆಚ್ಚಿದರೆ ಆದಾಯ ಹೆಚ್ಚುತ್ತದೆ, ಒಂದು ಕೋಟಿ ಲೀಟರ್ ಉತ್ಪಾದನೆಗೆ ಒಂದು ದಿನಕ್ಕೆ 5 ಕೋಟಿ ರೂ. ಪ್ರೋತ್ಸಾಹಧನ ಸರ್ಕಾರ ಕೊಡುತ್ತಿದೆ. ಇದು ಒಂದು ತಿಂಗಳಿಗೆ 150 ಕೋಟಿ ರೂ., ವರ್ಷಕ್ಕೆ 1,800 ಕೋಟಿ ರೂ. ರೈತರಿಗೆ ಸಹಾಯ ಮಾಡಲಾಗುತ್ತಿದೆ ಎಂದರು.

ಲೀಟರ್‌ಗೆ 2 ರೂ. ಇದ್ದ ಪ್ರೋತ್ಸಾಹಧನವನ್ನು 5 ರೂ.ಗೆ ಹೆಚ್ಚಳ ಮಾಡಿದವನು ನಾನು. ಒಂದು ವೇಳೆ ಹಾಲಿನ ಬೆಲೆ ಹೆಚ್ಚಾದರೂ ಕೊಳ್ಳುವವರಿಗೆ ಭಾರವಾಗುತ್ತದೆ. ರೈತರಿಗೆ ಭಾರವಾಗುವುದಿಲ್ಲ, ಸಹಾಯವಾಗುತ್ತದೆ. ನೆರೆಯ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದ ಹಾಲಿನ ಬೆಲೆ ಕಡಿಮೆ ಇದೆ, ಎಲ್ಲಾ ರಾಜ್ಯಗಳಿಗೆ ಹೋಲಿಸಿದರೆ ಗ್ರಾಹಕರಿಗೆ ಕಡಿಮೆ ದರದಲ್ಲಿ ಹಾಲು ಕೊಡುತ್ತಿರುವುದು ಕರ್ನಾಟಕ ಮಾತ್ರ ಎಂದರು.

ಡಿ.ಕೆ.ಶಿವಕುಮಾರ್‌ಗೆ ಮುಖ್ಯಮಂತ್ರಿ ಸ್ಥಾನ ವಿಚಾರ

ಶ್ರೀ ಚಂದ್ರಶೇಖರ ಸ್ವಾಮೀಜಿ ಎಲ್ಲೆ ಮೀರಿ ಮಾತನಾಡಬಾರದು

ಕಂದಾಯ ಸಚಿವ ಕೃಷ್ಣಭೈರೇಗೌಡ ಸಲಹೆ

ಮೈಸೂರು, ಜು.2(ಬಿಎಲ್‌ಯು)– ಡಿ.ಕೆ.ಶಿವಕುಮಾರ್ ಅವರಿಗೆ ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನ ಬಿಟ್ಟುಕೊಡುವಂತೆ ಹೇಳಿಕೆ ನೀಡಿರುವ ಶ್ರೀ ಚಂದ್ರಶೇಖರ ಸ್ವಾಮೀಜಿ ಎಲ್ಲೆ ಮೀರಿ ಮಾತನಾಡಬಾರದು ಎಂದು ಕಂದಾಯ ಸಚಿವ ಕೃಷ್ಣ ಭೈರೇಗೌಡ ಸಲಹೆ ನೀಡಿದ್ದಾರೆ.

ಮೈಸೂರಿನ ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ಪತ್ರಕರ್ತರ ಜೊತೆ ಮಾತನಾಡಿದ ಅವರು, ಸರ್ಕಾರಿ ಕಾರ್ಯಕ್ರಮದಲ್ಲಿ ರಾಜಕಾರಣದ ಬಗ್ಗೆ ಮಾತನಾಡಿದ ಶ್ರೀ ಚಂದ್ರಶೇಖರ ಸ್ವಾಮೀಜಿ ಹೇಳಿಕೆಗೆ ಆಕ್ರೋಶ ವ್ಯಕ್ತಪಡಿಸಿದರು.

ಬೇಕಿದ್ದರೆ ಸ್ವಾಮೀಜಿ ಮಠದಲ್ಲಿ ಪತ್ರಿಕಾಗೋಷ್ಠಿ ಕರೆದು ಈ ವಿಚಾರ ಪ್ರಸ್ತಾಪಿಸಲಿ ಅಥವಾ ಭಕ್ತರನ್ನು ಕರೆದು ಮಾತನಾಡಲಿ. ಅದು ಬಿಟ್ಟು ಸರ್ಕಾರಿ ಕಾರ್ಯಕ್ರಮದಲ್ಲಿ ರಾಜಕಾರಣದ ಬಗ್ಗೆ ಮಾತನಾಡಿರುವುದು ಸರಿಯಲ್ಲ ಎಂದು ಕಿಡಿಕಾರಿದರು.

ಸ್ವಾಮೀಜಿ ಎಲ್ಲಿ, ಯಾವ ವಿಚಾರ ಮಾತನಾಡಬೇಕು ಎಂಬುವುದನ್ನು ಮೊದಲು ಅರ್ಥ ಮಾಡಿಕೊಳ್ಳಲಿ.



ಸಮಯ, ಸಂದರ್ಭ ನೋಡಿಕೊಂಡು ಮಾತನಾಡುವುದನ್ನು ಬಿಟ್ಟು ಸರ್ಕಾರಿ ಕಾರ್ಯಕ್ರಮದಲ್ಲಿ ರಾಜಕಾರಣದ ಬಗ್ಗೆ ಮಾತನಾಡಿರುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು. ಸ್ವಾಮೀಜಿ ಹೇಳಿಕೆಯಿಂದ ವ್ಯಕ್ತವಾಗುತ್ತಿರುವ ಪ್ರತಿಕ್ರಿಯೆಗಳನ್ನು ನೋಡಿದಾಗ ಯಾವುದು ಸರಿ, ಯಾವುದು ತಪ್ಪು ಎಂಬ ಜಿಜ್ಞಾಸೆ ಎದುರಾಗಿದೆ. ಜೊತೆಗೆ ಯಾರಿಗೆ, ಯಾವ ವಿಚಾರ, ಎಲ್ಲಿ ಮಾತನಾಡಬೇಕೆಂದು ಸ್ವಾಮೀಜಿಗೆ ಹೇಳುವ ಪರಿಸ್ಥಿತಿ ಬಂದಿದೆಯಲ್ಲಾ ಎಂದು ಬೇಸರವಾಗುತ್ತಿದೆ ಎಂದು ಹೇಳಿದರು.

ಮೂವರು ಉಪಮುಖ್ಯಮಂತ್ರಿಗಳನ್ನು ನೇಮಕ ಮಾಡಬೇಕೆಂಬ ಸಚಿವ ರಾಜಣ್ಣ ಹೇಳಿಕೆಗೂ ಪ್ರತಿಕ್ರಿಯೆ ನೀಡಿದ ಕೃಷ್ಣ ಭೈರೇಗೌಡ, ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಬಗ್ಗೆ ಹೈಕಮಾಂಡ್ ಬಳಿ ಈ ವಿಚಾರ ಪ್ರಸ್ತಾಪಿಸಬೇಕು. ಅದು ಬಿಟ್ಟು ಮಾಧ್ಯಮದವರ ಮುಂದೆ ಹೇಳಿಕೆ ನೀಡಿದರೆ ನೀವು ಅವರನ್ನು ಉಪಮುಖ್ಯಮಂತ್ರಿ ಮಾಡಲು ಸಾಧ್ಯವೆ? ಎಂದು ಪ್ರಶ್ನಿಸಿದರು.

ಮಂತ್ರಿಗಳು ಹೇಳಿಕೆ ನೀಡುವಾಗ ಅದು ಸರ್ಕಾರ ಹಾಗೂ ಸಾರ್ವಜನಿಕರಿಗೆ ಸಂಬಂಧಿಸಿದ ವಿಚಾರಗಳಾಗಬೇಕು. ಇದರಿಂದ ಜನರು ಹಾಗೂ ಸರ್ಕಾರಕ್ಕೆ ಅನುಕೂಲವಾಗುತ್ತದೆ. ಅದು ಬಿಟ್ಟು ಪಕ್ಷದ ಒಳಗೆ ಪ್ರಸ್ತಾಪಿಸುವ ವಿಚಾರವನ್ನು ಸಾರ್ವಜನಿಕವಾಗಿ ಮಾತನಾಡುತ್ತಿರುವುದು ಸರಿಯಲ್ಲ ಎಂದು ಅಭಿಪ್ರಾಯಪಟ್ಟರು. ಮಂತ್ರಿಗಳೇ ಬಂದು ಸಾರ್ವಜನಿಕವಾಗಿ ಇಂತಹ ಹೇಳಿಕೆ ನೀಡಿದರೆ, ಜನರ ಸಮಸ್ಯೆ ಪರಿಹಾರ ಮಾಡುವವರು ಯಾರು? ತಮ್ಮ ಸಮಸ್ಯೆ ಪರಿಹಾರ ಮಾಡಿಕೊಳ್ಳದವರು ನಮ್ಮ ಸಮಸ್ಯೆ ಪರಿಹಾರ ಮಾಡುತ್ತಾರೆಯೇ ಎಂಬ ಅನುಮಾನ ಜನರನ್ನು ಕಾಡುವುದಿಲ್ಲವೆ ಎಂದು ಪ್ರಶ್ನಿಸಿದರು.

ಸಿದ್ದರಾಮಯ್ಯರನ್ನೇ ಪೂರ್ಣಾವಧಿಗೆ ಮುಖ್ಯಮಂತ್ರಿಯಾಗಿ ಮುಂದುವರೆಸಲು ಅಹಿಂದ ಮುಖಂಡರ ಆಗ್ರಹ

ಮೈಸೂರು,ಜು.2(ಎಂಟಿವೈ)– ಅನೇಕ ಜನಪರ ಯೋಜನೆಗಳ ಅನುಷ್ಠಾನದೊಂದಿಗೆ ಉತ್ತಮ ಆಡಳಿತ ನೀಡುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನೇ ಪೂರ್ಣಾವಧಿಗೆ ಮುಖ್ಯಮಂತ್ರಿಯಾಗಿ ಮುಂದುರೆಸಲು ಅವಕಾಶ ಮಾಡಿಕೊಡಬೇಕು ಎಂದು ಕರ್ನಾಟಕ ರಾಜ್ಯ ಅಹಿಂದ ಸಂಘಟನಾ ವೇದಿಕೆ ರಾಜ್ಯಾಧ್ಯಕ್ಷ ಎ.ಆರ್.ಸ್ವಾಮಿ ಒತ್ತಾಯಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ದಿನದಿಂದಲೇ ಸಿದ್ದರಾಮಯ್ಯ ಅವರು ಎಲ್ಲಾ ವರ್ಗದ ಬಡವರ ಹಿತ ಕಾಯುವ ಯೋಜನೆಗಳನ್ನೇ ಜಾರಿಗೊಳಿಸುವ ಮೂಲಕ ಲಕ್ಷಾಂತರ ಕುಟುಂಬಗಳಿಗೆ ನೆರವಾಗಿದ್ದಾರೆ, ಐದು ಗ್ಯಾರಂಟಿ ಯೋಜನೆಗಳು ಬಡ ಹಾಗೂ ಮಧ್ಯಮ ವರ್ಗದ ಜನರ ಬದುಕನ್ನು ಹಸನಾಗಿಸಿವೆ. ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಸಿದ್ದರಾಮಯ್ಯ ಅವರು ಶಕ್ತಿ ಮೀರಿ ಶ್ರಮಿಸುತ್ತಿದ್ದಾರೆ. ಈ ನಡುವೆ ನಾಯಕತ್ವ ಬದಲಾವಣೆ ಕುರಿತಂತೆ ಕೆಲವರು ಹೇಳಿಕೆ ನೀಡಿ ಗೊಂದಲವುಂಟು ಮಾಡುತ್ತಿರುವುದು ಖಂಡನೀಯ ಎಂದರು.



ಕಾಂಗ್ರೆಸ್ ಪಕ್ಷ ಸಿದ್ದರಾಮಯ್ಯ ಅವರನ್ನೇ ಪೂರ್ಣಾವಧಿಗೆ ಮುಖ್ಯಮಂತ್ರಿಯಾಗಿ ಆಡಳಿತ ನಡೆಸುವುದಕ್ಕೆ ಅವಕಾಶ ನೀಡಬೇಕು. ಐದು ಗ್ಯಾರಂಟಿ ಯೋಜನೆಗಳು ಮಾತ್ರವಲ್ಲದೆ, ಇಂದಿರಾ ಕ್ಯಾಂಟೀನ್ ಮೂಲಕ ಹಸಿದವರಿಗೆ ಅನ್ನ ನೀಡುವ ಮಹತ್ತರ ಕಾರ್ಯನಿರ್ವಹಿಸಿದ್ದಾರೆ. 2ನೇ ಅವಧಿಯಲ್ಲೂ ಈಗಾಗಲೇ ಯಾವುದೇ ಭ್ರಷ್ಟಾಚಾರ, ಕಳಂಕ ರಹಿತ ಆಡಳಿತ ನೀಡುತ್ತಿದ್ದಾರೆ. ರಾಜ್ಯ ಕಂಡ ಅತ್ಯುತ್ತಮ ಜನನಾಯಕರಾದ ಸಿದ್ದರಾಮಯ್ಯ ಅವರಿಂದ ಅಧಿಕಾರ ಕಸಿದುಕೊಂಡರೆ ಕಾಂಗ್ರೆಸ್ ಶಕ್ತಿಹೀನವಾಗುತ್ತದೆ. ಮುಂಬರುವ ದಿನಗಳಲ್ಲಿ ಕಾಂಗ್ರೆಸ್ ಇನ್ನಷ್ಟು ಸಂಘಟನೆಗೊಳ್ಳಬೇಕಾದರೆ ಸಿದ್ದರಾಮಯ್ಯ ಅವರನ್ನೇ ಸಿಎಂ ಸ್ಥಾನದಲ್ಲಿ ಮುಂದುವರೆಸಬೇಕು. ಇಲ್ಲದಿದ್ದರೆ ರಾಜ್ಯದಾದ್ಯಂತ ಉಗ್ರ ಹೋರಾಟ ಮಾಡುವುದಾಗಿ ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ಅಹಿಂದ ಸಂಘಟನಾ ವೇದಿಕೆ ಗೌರವಾಧ್ಯಕ್ಷ ಆರ್.ಶ್ರೀನಿವಾಸ್, ಜಿಲ್ಲಾ ಘಟಕದ ಅಧ್ಯಕ್ಷೆ ಶಶಿಕಲಾ, ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ಜಿ.ತಾರಾ ಇದ್ದರು.



ಶ್ರೀಗಳಿಂದ ಆಶೀರ್ವಾದ

ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರಿಗೆ ಮಾಜಿ ಸ್ಪೀಕರ್ ಕೆ.ಆರ್.ಪೇಟೆ ಕೃಷ್ಣ ಅವರ ನಿವಾಸದಲ್ಲಿ ಪಾದಪೂಜೆ ನೆರವೇರಿಸಲಾಯಿತು. ಈ ವೇಳೆ ಎಸ್.ಎಂ.ಕೃಷ್ಣ ಅಭಿಮಾನಿಗಳ ಬಳಗದ ಅಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ, ವಾಣಿಜ್ಯೋದ್ಯಮಿ ಬಾಪೂಜಿ ಕೃಷ್ಣ ಅವರ ಅಳಿಯ ಶ್ರೀಧರ್ ಇನ್ನಿತರರು ಸ್ವಾಮೀಜಿಗಳಿಂದ ಆಶೀರ್ವಾದ ಪಡೆದರು.

ಗಿಡ ನೆಡುವ ಕಾರ್ಯಕ್ಕೆ ಚಾಲನೆ



ಮನ್ ಕಿ ಬಾತ್‌ನ 111ನೇ ಸಂಚಿಕೆಯಲ್ಲಿ ಪ್ರಧಾನಿ ಮೋದಿ ಅವರು ಎಲ್ಲರೂ ತಮ್ಮ ತಾಯಿಯ ಹೆಸರಲ್ಲಿ ಗಿಡ ನೆಡಿ ಎನ್ನುವ ಸಂದೇಶ ನೀಡಿದ ಹಿನ್ನೆಲೆಯಲ್ಲಿ ಮಾಜಿ ಕಾರ್ಪೋರೇಟರ್ ಎಸ್‌ಬಿಎಂ ಮಂಜು ಹಾಗೂ ರಘುಲಾಲ್ ರಾಘವನ್ ಅವರ ಸಹಕಾರದೊಂದಿಗೆ ಗಿಡ ನೆಡುವ ಕಾರ್ಯಕ್ಕೆ ಚಾಲನೆ ನೀಡಲಾಯಿತು. ಈ ವೇಳೆ ಎಸ್‌ಬಿಎಂ ಮಂಜು ಸ್ನೇಹ ಬಳಗದ ಅಧ್ಯಕ್ಷ ಮಹಾದೇವ್, ರಾಮಕೃಷ್ಣ, ಮಾದಣ್ಣ, ಜೋಶ್ ವರ್ಗಿಸ್ ಬಾಬು, ಕಮಲ್, ಮೋಹನ್, ಸುರೇಶ್, ಪೌರಕಾರ್ಮಿಕರಿದ್ದರು.

ಸಮಾಜ ಸೇವಕ ಎಸ್.ಶ್ರೀಕಾಂತ್‌ಗೆ ಅಭಿನಂದನೆ



ಜಯಪುರ ಹೋಬಳಿಯ ಗುಮಚನಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಪಿಠೋಪಕರಣಗಳನ್ನು ಕೊಡುಗೆ ನೀಡಿದ ಸಮಾಜ ಸೇವಕ ಎಸ್. ಶ್ರೀಕಾಂತ್ ಅವರನ್ನು ಶಾಲೆಯ ಶಿಕ್ಷಕರು ಅಭಿನಂದಿಸಿದರು. ಈ ವೇಳೆ ಗ್ರಾಮ ಪಂಚಾಯಿತಿ ಸದಸ್ಯೆ ನವೀನಮ್ಮ ಚಿಕ್ಕಣ್ಣ, ಮುಖ್ಯ ಶಿಕ್ಷಕ ಜಯಮಲ್ಲರಾಜೇ ಅರಸ್, ಶಾಲಾ ಶಿಕ್ಷಣ ಮಂಡಳಿ ಸದಸ್ಯರು ಮತ್ತು ಶಿಕ್ಷಕರು ಉಪಸ್ಥಿತರಿದ್ದರು.

ರಾಷ್ಟ್ರೀಯ ವೈದ್ಯರ ದಿನ ಆಚರಣೆ



ಮೈಸೂರಿನ ಶ್ರೀರಾಂಪುರದಲ್ಲಿರುವ ಮಹಾವೀರ ವಿದ್ಯಾಮಂದಿರ (ಜೈನ್ ಸೊಸೈಟಿ)ಯಲ್ಲಿ ರಾಷ್ಟ್ರೀಯ ವೈದ್ಯರ ದಿನ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಅಧ್ಯಕ್ಷ ಡಾ.ಬಾಹುಬಲಿ ಜಿ ನಾಗಾವಿ, ಪ್ರಾಂಶುಪಾಲರಾದ ಶ್ರೀಮತಿ ಅನಿತಾ, ಖ್ಯಾತ ಪ್ರಸೂತಿ ತಜ್ಞರಾದ ಡಾ.ಎ.ಸೋನಿಯಾ ಮಂದಪ್ಪ ಉಪಸ್ಥಿತರಿದ್ದರು.

ಜು.6, ಅಂತರಾಷ್ಟ್ರೀಯ ಮಾದಕ ವಸ್ತುಗಳ ಸೇವನೆ ಕಳ್ಳ ಸಾಗಾಣಿಕೆ ವಿರೋಧಿ ದಿನಾಚರಣೆ

ಮೈಸೂರು, ಜು.2–ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದಡಿ ಜು.6ರಂದು ಬೆಳಿಗ್ಗೆ 10 ಗಂಟೆಗೆ 'ಅಂತರಾಷ್ಟ್ರೀಯ ಮಾದಕ ವಸ್ತುಗಳ ಸೇವನೆ ಮತ್ತು ಕಳ್ಳ ಸಾಗಾಣಿಕೆ ವಿರೋಧಿ ದಿನಾಚರಣೆ'ಯನ್ನು ಎನ್.ಆರ್ ಮೊಹಲ್ಲಾದಲ್ಲಿರುವ ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮಾಧಿಕಾರಿಗಳು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಶುಸಂಗೋಪನಾ ಇಲಾಖೆಯಿಂದ ಲಿಂಗ ನಿರ್ಧಾರಿತ ವೀರ್ಯ ನಳಿಕೆ ಕಾರ್ಯಕ್ರಮ

ಉತ್ತಮ ಫಲಶ್ರುತಿ; ಶೇ.90ರಷ್ಟು ಹೆಣ್ಣು ಕರುಗಳೇ ಜನನ

ಮೈಸೂರು,ಜು.2(ಎಂಟಿವೈ)– ಹೈನುಗಾರಿಕೆಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಪಶುಸಂಗೋಪನಾ ಇಲಾಖೆ ಕೈಗೊಂಡಿರುವ ಲಿಂಗ ನಿರ್ಧಾರಿತ ವೀರ್ಯ ನಳಿಕೆ ನೀಡುವ ಕಾರ್ಯಕ್ರಮ ಶೇ.90ರಷ್ಟು ಯಶಸ್ವಿಯಾಗಿದ್ದು, ಹಸುಗಳಿಗೆ ಹೆಣ್ಣು ಕರುಗಳೇ ಜನಿಸುತ್ತಿವೆ ಎಂದು ಪಶು ಸಂಗೋಪನಾ ಇಲಾಖೆ ಸಹಾಯಕ ನಿರ್ದೇಶಕ ಡಾ.ಮ.ಪು.ಪೂರ್ಣಾನಂದ ತಿಳಿಸಿದ್ದಾರೆ.

ಮೈಸೂರಿನ ನಜರ್‌ಬಾದ್‌ನ ಮಿನಿ ವಿಧಾನಸೌಧದಲ್ಲಿರುವ ತಾಪಂ ಸಭಾಂಗಣದಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಪಶುಸಂಗೋಪನಾ ಇಲಾಖೆ ವತಿಯಿಂದ ಜಿಲ್ಲೆಯಲ್ಲಿ ಕೈಗೊಂಡಿರುವ ಕ್ರಮ ಕುರಿತಂತೆ ಮಾಹಿತಿ ನೀಡಿದ ಅವರು, ಮೈಸೂರು ಜಿಲ್ಲೆಯಲ್ಲಿ ಜಾರಿಗೆ ತಂದಿರುವ ಈ ಯೋಜನೆಗೆ ಈಗಾಗಲೇ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಹಸುಗಳಿಗೆ ಲಿಂಗ ನಿರ್ಧಾರಿತ ವೀರ್ಯ ನಳಿಕೆ ಇಡುವುದಕ್ಕೆ ಹಸುಗಳ ಮಾಲೀಕರಿಂದ 250 ರೂ. ಪಡೆಯಲಾಗುತ್ತದೆ. ಇದಕ್ಕೆ ಸರ್ಕಾರ 400 ರೂ. ಸಬ್ಸಿಡಿ ನೀಡುತ್ತಿದೆ. ಈ ಲಿಂಗ ನಿರ್ಧಾರಿತ ವೀರ್ಯದಿಂದ ಶೇ.90ರಷ್ಟು ಹೆಣ್ಣು ಕರುಗಳು ಜನಿಸುತ್ತಿವೆ. ಶೇ.10ರಷ್ಟು ಮಾತ್ರ ವಿಫಲವಾಗುವ ಸಾಧ್ಯತೆ ಇದ್ದು, ವಿಫಲವಾದರೆ ಆ ಹಸುವಿಗೆ ಮತ್ತೊಮ್ಮೆ ವೀರ್ಯ ನಳಿಕೆ ನೀಡಲಾಗುತ್ತದೆ. ಎರಡನೇ ಬಾರಿ ನೀಡುವ ನಳಿಕೆಗೂ ಮಾಲೀಕರು 250 ರೂ. ಪಾವತಿಸಬೇಕಾಗಿದೆ. ಆದರೆ ಎರಡನೇ ಬಾರಿ ನೀಡಿದ ನಳಿಕೆಯಿಂದಲೂ ಹೆಣ್ಣು ಕರು ಜನನವಾಗದೇ ಇದ್ದರೆ ಫಲಾನುಭವಿಗೆ 500 ರೂ. ಹಿಂದಿರುಗಿಸಲಾಗುತ್ತದೆ ಎಂದರು.



ಮೈಸೂರು ತಾ.ಪಂ ಸಭಾಂಗಣದಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಆಡಳಿತಾಧಿಕಾರಿ ಸವಿತಾ ಮಾಹಿತಿ ಪಡೆಯುತ್ತಿರುವುದು. ಚಿತ್ರದಲ್ಲಿ ತಾಪಂ ಇಒ ಎಂ.ಎಸ್.ಗಿರಿಧರ್, ತಾಲೂಕು ಯೋಜನಾಧಿಕಾರಿ ಸುರೇಶ್ ಅವರನ್ನು ಕಾಣಬಹುದು.

ಬಜೆಟ್‌ಗೆ ಒಪ್ಪಿಗೆ: ಮೈಸೂರು ತಾಲೂಕು ಪಂಚಾಯತ್ ವತಿಯಿಂದ 2024–25ನೇ ಸಾಲಿನಲ್ಲಿ ತಾಲೂಕು ವ್ಯಾಪ್ತಿಯಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ವಿವಿಧ ಕಾರ್ಯಕ್ರಮಗಳು ಸೇರಿದಂತೆ 291.33 ಕೋಟಿ ಬಜೆಟ್‌ಗೆ ಅನುಮೋದನೆ ದೊರೆಯಿತು. ತಾ.ಪಂ ಸದಸ್ಯರಿಲ್ಲದೆ ನಡೆದ ಸಾಮಾನ್ಯ ಸಭೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಸಂಪ್ರದಾಯದಂತೆ ತಾ.ಪಂ ವತಿಯಿಂದ ನಡೆಯಬೇಕಾದ ಕಾರ್ಯಕ್ರಮಗಳನ್ನು ನಡೆಸಲು ಅಧಿಕಾರಿಗಳೇ ಸಿದ್ಧತೆ ಮಾಡಿಕೊಂಡಿದ್ದು, ಸಾಮಾನ್ಯ ಸಭೆಯಲ್ಲಿ ಬಜೆಟ್‌ಗೆ ಸಮ್ಮತಿ ಸಿಕ್ಕಿತು. ಬಜೆಟ್‌ನಲ್ಲಿ ಶಿಕ್ಷಣ, ಆರೋಗ್ಯ, ಆಯುಷ್, ಕುಡಿಯುವ ನೀರು ಪೂರೈಕೆ ಮತ್ತು ನೈರ್ಮಲ್ಯ, ಪ.ಜಾತಿ, ಪ.ಪಂಗಡ ಕಲ್ಯಾಣ, ತೋಟಗಾರಿಕೆ, ಪಶುಸಂಗೋಪನೆ, ಗ್ರಾಮೀಣಾಭಿವೃದ್ಧಿ ಸೇರಿದಂತೆ ಸರ್ವತೋಮುಖ ಬೆಳವಣಿಗೆಗೆ ಪೂರಕವಾದ ಕಾರ್ಯಕ್ರಮಗಳ ಮಾಹಿತಿಯುಳ್ಳ ಬಜೆಟ್ ಕುರಿತಂತೆ ತಾ.ಪಂ. ಸಹಾಯಕ ಲೆಕ್ಕಾಧಿಕಾರಿ ಪ್ರೇಮಾ ಪ್ರಸ್ತಾಪಿಸಿದರು.

ಗೊಬ್ಬರ, ಬೀಜ ಸರಬರಾಜು: ತಾಲೂಕಿನಲ್ಲಿ ಕೃಷಿ ಚಟುವಟಿಕೆ ಆರಂಭವಾಗಿದ್ದು, ತಾಲೂಕಿನಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಿದೆ. ಈ ಹಿನ್ನೆಲೆಯಲ್ಲಿ ರೈತರು ತಮ್ಮ ಜಮೀನಿನಲ್ಲಿ ಅಲಸಂದೆ, ಹೆಸರು, ಉದ್ದು ಮುಂತಾದ ಎಣ್ಣೆಕಾಳುಗಳನ್ನು ಬಿತ್ತನೆ ಮಾಡಿದ್ದಾರೆ. ಈಗಾಗಲೇ 10,413 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಮಾಡಲಾಗಿದೆ. ರೈತರಿಗೆ ರಿಯಾಯಿತಿ ದರದಲ್ಲಿ ಗೊಬ್ಬರ ನೀಡಲಾಗಿದೆ. ಬಿತ್ತನೆ ಬೀಜದ ಕೊರತೆ ಇಲ್ಲ. ಕೀಟ ಬಾಧೆಗೆ ಅಗತ್ಯವಾದ ಔಷಧಿಯೂ ನೀಡಲಾಗಿದೆ ಎಂದು ಕೃಷಿ ಅಧಿಕಾರಿಗಳು ವಿವರಿಸಿದರು. ಸಭೆಯಲ್ಲಿ ಜಿಪಂ ಉಪ ಕಾರ್ಯದರ್ಶಿ ಹಾಗೂ ಆಡಳಿತಾಧಿಕಾರಿ ಸವಿತಾ ಅಧ್ಯಕ್ಷತೆ ವಹಿಸಿದ್ದರು. ತಾಪಂ ಇಒ ಎಂ.ಎಸ್.ಗಿರಿಧರ್, ತಾಲೂಕು ಯೋಜನಾಧಿಕಾರಿ ಸುರೇಶ್ ಇದ್ದರು.

ನಾಟಿ ಕೋಳಿ ಮರಿ ವಿತರಿಸುವ ಯೋಜನೆಗೆ ಸಿದ್ಧತೆ

"ಮೈಸೂರು ಜಿಲ್ಲೆಯಲ್ಲಿ ರೈತರಿಗೆ ನಾಟಿ ಕೋಳಿ ಮರಿ ವಿತರಿಸುವ ಯೋಜನೆಯನ್ನು ಜಾರಿಗೊಳಿಸಲು ಸಿದ್ಧತೆ ಮಾಡಿಕೊಳ್ಳಲಾಗಿದ್ದು, ಜು.10ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವರುಣ ಕ್ಷೇತ್ರದ ಬಿಳಿಗೆರೆ ಗ್ರಾಮದಲ್ಲಿ ಸಾಂಕೇತಿಕವಾಗಿ ನಾಟಿ ಕೋಳಿ ಮರಿ ವಿತರಿಸಿ ಯೋಜನೆಗೆ ಚಾಲನೆ ನೀಡುವ ಸಾಧ್ಯತೆ ಇದೆ. ಇದಕ್ಕಾಗಿ ಈಗಾಗಲೇ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತಿದೆ. ವರುಣ ಕ್ಷೇತ್ರ ವ್ಯಾಪ್ತಿಯ ಮೈಸೂರು, ನಂಜನಗೂಡು ಮತ್ತು ಟಿ.ನರಸೀಪುರ ತಾಲೂಕಿನ ಗ್ರಾಮಗಳಲ್ಲಿ 2 ಸಾವಿರ ಫಲಾನುಭವಿಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆ ನಡೆದಿದೆ. ಇದರಲ್ಲಿ ಮೈಸೂರು ತಾಲೂಕಿನಿಂದ 550 ಮಂದಿ ಫಲಾನುಭವಿಗಳಿದ್ದಾರೆ. ಈ ಯೋಜನೆಯಲ್ಲಿ ಒಬ್ಬರು ಫಲಾನುಭವಿಗೆ 5 ವಾರದ 20 ಕೋಳಿ ಮರಿಗಳನ್ನು ವಿತರಿಸಲಾಗುತ್ತದೆ. ಈ ಯೋಜನೆಗೆ ಕುಕ್ಕಟ ಮಹಾಮಂಡಳ ನೆರವು ನೀಡುತ್ತಿದೆ. **–ಡಾ.ಮ.ಪು.ಪೂರ್ಣಾನಂದ**

ಮಂಡ್ಯ ಜಿಲ್ಲೆಯಲ್ಲಿ 60, ಪಾಂಡವಪುರದಲ್ಲಿ 20 ಡೆಂಗ್ಯೂ ಪ್ರಕರಣ ಪತ್ತೆ



ರೋಗ ನಿಯಂತ್ರಣಕ್ಕೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಸೂಚನೆ

ಪಾಂಡವಪುರ, ಜು.2- ಮಂಡ್ಯ ಜಿಲ್ಲೆಯಲ್ಲಿ 60 ಹಾಗೂ ಪಾಂಡವಪುರ ದಲ್ಲಿ 20 ಡೆಂಗ್ಯೂ ಪ್ರಕರಣಗಳು ಪತ್ತೆಯಾಗಿದ್ದು, ನಿಯಂತ್ರಣಕ್ಕೆ ಅಧಿಕಾರಿಗಳು ಮುಂದಾಗಿದ್ದಾರೆ.

ಈ ಹಿನ್ನೆಲೆಯಲ್ಲಿ ಸಭೆ ನಡೆಸಿದ ಜಿಲ್ಲಾ ರೋಗವಾಹಕ ಆಶ್ರಿತ ರೋಗ ನಿಯಂತ್ರಣಾಧಿಕಾರಿ ಡಾ.ಕಾಂತರಾಜು ಡೆಂಗ್ಯೂ ಪ್ರಕರಣಗಳು ಜಿಲ್ಲೆಯಲ್ಲಿ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಎಲ್ಲಾ ಇಲಾಖೆಗಳ ಅಧಿಕಾರಿಗಳು ಕಟ್ಟುನಿಟ್ಟಿನಿಂದ ಕೆಲಸ ಮಾಡಿ ಡೆಂಗ್ಯೂ ಪ್ರಕರಣಗಳನ್ನು ನಿಯಂತ್ರಿಸಬೇಕು ಎಂದು ಸೂಚಿಸಿದರು.



ಪಾಂಡವಪುರ ಪಟ್ಟಣದ ತಾಪಂ ಸಭಾಂಗಣದಲ್ಲಿ ಆರೋಗ್ಯದ ಇಲಾಖೆ ವತಿಯಿಂದ 'ಕೀಟಜನ್ಯ ರೋಗಗಳ ನಿಯಂತ್ರಣ ಕುರಿತು ಅಂತರ ಇಲಾಖೆ ಅಧಿಕಾರಿಗಳ ಸಮನ್ವಯ ಸಮಿತಿ ಸಭೆ' ನಡೆಯಿತು.

ಪಟ್ಟಣ ತಾಪಂ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಪಂ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ರೋಗವಾಹಕ ಆಶ್ರಿತ ರೋಗ ನಿಯಂತ್ರಣಾಧಿಕಾರಿ, ತಾಲೂಕು ಆರೋಗ್ಯ ಇಲಾಖೆ ಹಾಗೂ ತಾಲೂಕು ಪಂಚಾಯಿತಿ ಸಹಯೋಗದಲ್ಲಿ ನಡೆದ 'ಕೀಟಜನ್ಯ ರೋಗಗಳ ನಿಯಂತ್ರಣ ಕುರಿತು ಅಂತರ ಇಲಾಖೆ ಅಧಿಕಾರಿಗಳ ಸಮನ್ವಯ ಸಮಿತಿ ಸಭೆ'ಯಲ್ಲಿ ಭಾಗವಹಿಸಿ ಮಾತನಾಡಿದರು.

ರಾಜ್ಯದಲ್ಲಿ ಡೆಂಗ್ಯೂ ಪ್ರಕರಣಗಳು ದಿನೇ ದಿನೆ ಹೆಚ್ಚಾಗಿ ಸಾವು-ನೋವುಗಳು ಸಂಭವಿಸುತ್ತಿವೆ. ಜಿಲ್ಲೆಯಲ್ಲಿ ಸುಮಾರು 60 ಹಾಗೂ ಪಾಂಡವಪುರದಲ್ಲಿ 20 ಡೆಂಗ್ಯೂ ಪ್ರಕರಣಗಳು ವರದಿಯಾಗಿವೆ. ಇದರಿಂದ ಸಾವುಗಳು ಸಂಭವಿಸುವ ಸಾಧ್ಯತೆಗಳು ಇರುವುದರಿಂದ ಡೆಂಗ್ಯೂ ನಿಯಂತ್ರಣಕ್ಕೆ ಎಲ್ಲಾ ಅಧಿಕಾರಿಗಳು ಮುಂದಾಗಬೇಕು. ಡೆಂಗ್ಯೂ ಪ್ರಕರಣಗಳು ಬೆಳಕಿಗೆ ಬರುತ್ತಿದ್ದಂತೆಯೇ ಆರಂಭದಲ್ಲಿಯೇ ಸೂಕ್ತ ಚಿಕಿತ್ಸೆ ಪಡೆದುಕೊಳ್ಳಬೇಕು. ಅಧಿಕಾರಿಗಳು ಪಟ್ಟಣ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಕಟ್ಟುನಿಟ್ಟಿನಿಂದ ಕೆಲಸ ಮಾಡುವ ಮೂಲಕ ಡೆಂಗ್ಯೂ ಹರಡದಂತೆ ಎಚ್ಚರ ವಹಿಸಬೇಕು ಎಂದು ಸಲಹೆ ನೀಡಿದರು.

ಡೆಂಗ್ಯೂ ಹರಡುವ ಸೊಳ್ಳೆಗಳು ಹೆಚ್ಚಾಗಿ ನೀರಿನಲ್ಲಿ ಉತ್ಪತ್ತಿಯಾಗುವುದರಿಂದ ಮನೆಗಳು, ತೊಟ್ಟಿಗಳಲ್ಲಿ ಸಂಗ್ರಹಿಸಿರುವ ನೀರನ್ನು ಎರಡು ಮೂರು ದಿನಕ್ಕೊಮ್ಮೆ ಸ್ವಚ್ಛಗೊಳಿಸಬೇಕು. ಪಾಚಿ ಕಟ್ಟುವ ಸ್ಥಳದಲ್ಲಿ ಡೆಂಗ್ಯೂ ಸೊಳ್ಳೆ ಒಂದು ವರ್ಷದವರೆಗೂ ವಾಸಿಸುತ್ತದೆ, ಹಾಗಾಗಿ ಪಾಚಿ ಕಟ್ಟಿದ ತೊಟ್ಟಿಗಳನ್ನು ಸ್ವಚ್ಛಗೊಳಿಸಿ, ಮನೆಯಂಗಳ ವನ್ನು ಸ್ವಚ್ಛವಾಗಿಟ್ಟುಕೊಳ್ಳಿ. ತೀವ್ರಜ್ವರ, ತಲೆ, ಕಣ್ಣು, ನಿಶ್ಯಕ್ತಿ, ವಾಂತಿ, ಅತಿಯಾದ ಮೈಕೈ ನೋವು ಕಂಡ ತಕ್ಷಣ ಸೂಕ್ತ ಚಿಕಿತ್ಸೆ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಶಾಲೆಗಳಲ್ಲಿ ಮಕ್ಕಳಿಗೆ ಡೆಂಗ್ಯೂ, ಸ್ವಚ್ಛತೆ, ನೀರಿನ ಮಹತ್ವ, ಸ್ವಯಂರಕ್ಷಣೆ, ಸೊಳ್ಳೆಗಳಿಂದ ರಕ್ಷಣೆಯ ಬಗ್ಗೆ ಅರಿವು ಮೂಡಿಸಿ, ಅಂಗನವಾಡಿ, ಹಾಸ್ಟೆಲ್‌ಗಳ ಕಿಟಕಿಗಳಿಗೆ ಮೆಶ್ ಹಾಕಿಸಿ, ಹಾಸ್ಟೆಲ್‌ಗಳಲ್ಲಿ ಪ್ರಕರಣಗಳು ಹೆಚ್ಚುವ ಸಾಧ್ಯತೆಗಳಿವೆ. ಹಾಗಾಗಿ ಸ್ವಚ್ಛತೆ ಕಾಪಾಡಬೇಕು, ನಗರ ಪ್ರದೇಶದಲ್ಲಿ ಖಾಲಿ ನಿವೇಶನ, ನೀರು ಸಂಗ್ರಹ ಗೊಂಡಿರುವ ಸ್ಥಳಗಳನ್ನು ಸ್ವಚ್ಛಗೊಳಿಸಿ ಡೆಂಗ್ಯೂ ಹರಡದಂತೆ ಕ್ರಮವಹಿಸಬೇಕು ಎಂದರು.

ತಾಪಂ ಇಒ ಲೋಕೇಶ್‌ಮೂರ್ತಿ ಮಾತನಾಡಿ, ರಾಜ್ಯದಲ್ಲಿ 6000 ಡೆಂಗ್ಯೂ ಪ್ರಕರಣಗಳು ವರದಿಯಾಗಿ, 7 ಸಾವು ಸಂಭವಿಸಿವೆ ಗ್ರಾಮ, ಪುರಸಭೆ ವ್ಯಾಪ್ತಿಯಲ್ಲಿ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮವಹಿಸಬೇಕು. ಕಸವಿಲೇವಾರಿ ಮಾಡುವ ವಾಹನಗಳಲ್ಲಿ ಡೆಂಗ್ಯೂ ಬಗ್ಗೆ ಅರಿವು ಮೂಡಿಸುವ ಮೂಲಕ ಡೆಂಗ್ಯೂ ನಿಯಂತ್ರಣಕ್ಕೆ ಸಹಕಾರ ನೀಡಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಸಾರ್ವಜನಿಕ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ.ಸಿ.ಎ. ಅರವಿಂದ್, ಐಪಿಎಚ್‌ಒ ಚಂದ್ರಶೇಖರ, ಎಇಇ ಮಹದೇವಸ್ವಾಮಿ, ಸುರೇಂದ್ರ, ಪಟ್ಟಸ್ವಾಮಿ, ಸಿ.ಪಿ. ವಿಜಯ್ ಕುಮಾರ್ ಸೇರಿದಂತೆ ಆರೋಗ್ಯ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು ಇದ್ದರು.

ಹೆಜ್ಜಾಲ-ಚಾಮರಾಜನಗರ ರೈಲ್ವೆ ಕಾಮಗಾರಿ ಶೀಘ್ರದಲ್ಲೇ ಆರಂಭ

ರೈಲ್ವೆ ಸಚಿವರೊಂದಿಗೆ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಮಾತುಕತೆ



ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ಡಾ.ಕೆ.ಅನ್ನದಾನಿ ಮಾತನಾಡಿದರು.

ಮದ್ದೂರು, ಜು.2- ಈ ಹಿಂದೆ ಪ್ರಧಾನಿಯಾಗಿದ್ದ ಹೆಚ್.ಡಿ. ದೇವೇಗೌಡರ ಆಸಕ್ತಿಯಿಂದ ಚಾಲನೆ ಸಿಕ್ಕಿದ್ದ ಹೆಜ್ಜಾಲ- ಸತ್ಯಮಂಗಲ ರೈಲ್ವೆ ಯೋಜನೆ ಪುನಾರಂಭಕ್ಕೆ ಮಂಡ್ಯ ಸಂಸದರೂ ಆದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ತೀವ್ರ ಆಸಕ್ತಿ ತೋರಿದ್ದಾರೆ. ಈಗಾಗಲೇ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರನ್ನು ಭೇಟಿಯಾಗಿ, ಯೋಜನೆ ಬಗ್ಗೆ ಮಾತುಕತೆ ನಡೆಸಿದ್ದು, ಈ ಬಾರಿಯ ಬಜೆಟ್‌ನಲ್ಲಿ ಈ ಯೋಜನೆಗೆ ಅನುಮತಿ ಸಿಗಲಿದ್ದು, ಶೀಘ್ರವೇ ಕಾಮಗಾರಿ ಆರಂಭವಾಗಲಿದೆ ಎಂದು ಮಾಜಿ ಶಾಸಕ ಡಾ.ಕೆ.ಅನ್ನದಾನಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಧಾನಿ ದೇವೇಗೌಡರು ಹಾಗೂ ಅಂದು ಕನಕಪುರ ಸಂಸದರಾಗಿದ್ದ ಹೆಚ್.ಡಿ. ಕುಮಾರಸ್ವಾಮಿ ಅವರ ಆಸಕ್ತಿಯಿಂದ ಕನಕಪುರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಬರುತ್ತಿದ್ದ ಮಳವಳ್ಳಿ ತಾಲೂಕಿಗೂ ಅನುಕೂಲವಾಗಲಿ ಎಂಬ ನಿಟ್ಟಿನಲ್ಲಿ ಯೋಜನೆ ಶುರು ಮಾಡಿದ್ದರು. ನಂತರದ ದಿನಗಳಲ್ಲಿ ಯೋಜನೆ ಕಾರ್ಯಗತವಾಗಲಿಲ್ಲ. ಇದೀಗ ಕುಮಾರಸ್ವಾಮಿ ಈ ಬಗ್ಗೆ ಆಸಕ್ತಿ ವಹಿಸಿದ್ದಾರೆ ಎಂದರು.

ಈ ರೈಲ್ವೆ ಯೋಜನೆಯು ಬೆಂಗಳೂರಿನ ಕೆಂಗೇರಿ, ಹೆಜ್ಜಾಲ, ಹಾರೋಹಳ್ಳಿ, ಕನಕಪುರ, ಸಾತನೂರು, ಹಲಗೂರು, ಮಳವಳ್ಳಿ, ಸಿರಿವಳ್ಳಿ, ಕೊಳ್ಳೇಗಾಲ, ಯಳಂದೂರು, ಚಾಮರಾಜನಗರ ಮಾರ್ಗವಾಗಿ ರೈಲ್ವೆ ಸಂಪರ್ಕ ಇರಲಿದ್ದು, ಇದಕ್ಕಾಗಿ 1732 ಹೆಕ್ಟೇರ್ ಪ್ರದೇಶ ಅಕ್ವೇರ್ ಆಗಲಿದೆ. 1382.78 ಕೋಟಿ ಹಣ ವ್ಯಯವಾಗಲಿದೆ. ಪ್ರಸ್ತುತ ಕುಮಾರಸ್ವಾಮಿ ಅವರು ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವರಾಗಿದ್ದಾರೆ. ಈಗಾಗಲೇ ರೈಲ್ವೆ ಮಾರ್ಗಕ್ಕೆ ಭೂಸ್ವಾಧೀನ ಮಾಡಲಾಗಿದೆ. ಅದಕಾರಣ ಕೇಂದ್ರ ಸಚಿವರಾದ ವಿ. ಸೋಮಣ್ಣ ಎಚ್.ಡಿ.ಕುಮಾರಸ್ವಾಮಿ ಅವರು ಕೂಡಲೇ ಈ ರೈಲು ಮಾರ್ಗಕ್ಕೆ ಕಾಯಕಲ್ಪ ಕಲ್ಪಿಸುವಂತೆ ಮನವಿ ಮಾಡಿದರು.

ರೈಲ್ವೆ ಯೋಜನೆಯಲ್ಲಿ ಕರ್ನಾಟಕ ರಾಜ್ಯದ ಪಾತ್ರವೂ ಇದ್ದು ತನ್ನ ಪಾಲಿನ ಶೇಕಡ 50ರಷ್ಟು ಹಣವನ್ನು ನೀಡಬೇಕು. ಕನಕಪುರ ಮಾರ್ಗವಾಗಿ ರೈಲು ಹಳಿ ಬರುವ ಕಾರಣ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸಹ ಕಾಳಜಿ ವಹಿಸಬೇಕು ಎಂದರು.

ಮಳವಳ್ಳಿ ತಾಲೂಕಿನಲ್ಲಿ ವಿದ್ಯುತ್, ನೀರು ಹಾಗೂ ಭೂಮಿಯ ಕೊರತೆ ಇಲ್ಲ. ಹಾಗಾಗಿ ತಾಲೂಕಿನಲ್ಲಿ ಕೈಗಾರಿಕೆ ಸ್ಥಾಪಿಸಬೇಕು. ರಾಜ್ಯ ಸರ್ಕಾರ ಎಸ್‌ಸಿಪಿ, ಟಿಎಸ್‌ಪಿ ಹಣವನ್ನು ಬೇರೆಡೆಗೆ ವರ್ಗಾವಣೆ ಮಾಡಲಿದೆ. ಆದೇ ರೀತಿ ವಾಲ್ಮೀಕಿ ನಿಗಮದ ಹಣವನ್ನು ಮತ್ತೊಂದು ಇಲಾಖೆಗೆ ವರ್ಗಾಯಿಸಿದ್ದು ಆ ಮೂಲಕ ದ್ರೋಹ ಮಾಡಿದೆ ಎಂದು ಆರೋಪಿಸಿದರು. ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರು ಸಂವಿಧಾನವನ್ನು ಎಲ್ಲೆಲ್ಲೂ ಹಿಡಿದುಕೊಳ್ಳುತ್ತಿದ್ದಾರೆ. ಆದರೆ ಇಂದಿರಾ ಗಾಂಧಿ ಅವರು ಸಂವಿಧಾನಕ್ಕೆ ಬೆಲೆ ಕೊಡದೆ ತುರ್ತು ಪರಿಸ್ಥಿತಿ ಹೇರಿದ್ದರು. ಹಾಗಾಗಿ ಇವರಿಗೆ ಸಂವಿಧಾನದ ಬಗ್ಗೆ ಮಾತನಾಡಲು ನಾಚಿಕೆಯಾಗಬೇಕು ಎಂದು ವಾಗ್ದಾಳಿ ನಡೆಸಿದರು.

ಸುದ್ದಿಗೋಷ್ಠಿಯಲ್ಲಿ ಜೆಡಿಎಸ್ ಎಸ್‌ಸಿ ಘಟಕದ ಜಿಲ್ಲಾಧ್ಯಕ್ಷ ಸಾತನೂರು ಜಯರಾಮ್, ಹಿಂದುಳಿದ ವರ್ಗಗಳ ಘಟಕದ ರಾಜ್ಯಾಧ್ಯಕ್ಷ ಜಯರಾಮ್, ಜೆಡಿಎಸ್ ಜಿಲ್ಲಾ ಘಟಕದ ಯುವ ಅಧ್ಯಕ್ಷ ಕಂಸಾಗರ ರವಿ, ಪುರಸಭೆ ಸದಸ್ಯ ನಂದಕುಮಾರ್, ಮುಖಂಡರಾದ ಕಾಂತರಾಜು, ಪುಟ್ಟಬುದ್ಧಿ, ಶ್ರೀಧರ್, ಪುಟ್ಟರಾಮು ಉಪಸ್ಥಿತರಿದ್ದರು.

ಜು.9, ಬಹಿರಂಗ ಹರಾಜು

ಮಂಡ್ಯ, ಜು.2- ಮಂಡ್ಯ ವಿ.ಸಿ. ಫಾರಂ ಕೃಷಿ ಕ್ಷೇತ್ರ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ವ್ಯಾಪ್ತಿಯಲ್ಲಿ ಬರುವ 150 ತೆಂಗಿನ ಮರಗಳ ಫಸಲನ್ನು ಒಂದು ವರ್ಷದ ಅವಧಿಗೆ ಮಾತ್ರ ಸೀಮಿತಗೊಳಿಸಿ ಜುಲೈ 9 ರಂದು ಬೆಳಿಗ್ಗೆ 11.30 ಗಂಟೆಗೆ ಜಿಲ್ಲಾ ಕೃಷಿ ತರಬೆತಿ ಕೇಂದ್ರದ ಆವರಣದಲ್ಲಿ ಬಹಿರಂಗ ಮರು ಹರಾಜು ಮಾಡಲಾಗುವುದು. ಆಸಕ್ತಿ ಉಳ್ಳವರು ಹರಾಜಿನಲ್ಲಿ ಭಾಗವಹಿಸಿ ಬಿಡ್ ಮಾಡಬಹುದು ಎಂದು ಮಂಡ್ಯ ವಿ.ಸಿ.ಫಾರಂ ಜಿಲ್ಲಾ ಕೃಷಿ ತರಬೇತಿ ಕೇಂದ್ರ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ನಿವೃತ್ತ ಸಿವಿಲ್ ನ್ಯಾಯಾಧೀಶರಿಂದ ಅರ್ಜಿ ಆಹ್ವಾನ

ಮಂಡ್ಯ, ಜು.2- ಡೇ-ನಲ್ಮ್ ಯೋಜನೆಯ SUSV ಕಾರ್ಯಕ್ರಮದಡಿ ಬೀದಿಬದಿ ವ್ಯಾಪಾರಿಗಳ ಜೀವನೋಪಾಯ ಸಂರಕ್ಷಣೆ ಮತ್ತು ನಿಯಂತ್ರಣ ನಿಯಮ 2019ರಂತೆ ಕುಂದುಕೊರತೆ ನಿವಾರಣಾ ಸಮಿತಿಗೆ ನಿವೃತ್ತ ಸಿವಿಲ್ ನ್ಯಾಯಾಧೀಶರನ್ನು ಅಧ್ಯಕ್ಷರಾಗಿ ನೇಮಿಸಬೇಕಿದ್ದು 65 ವರ್ಷದೊಳಗಿನ ನಿವೃತ್ತ ಸಿವಿಲ್ ನ್ಯಾಯಾಧೀಶರನ್ನು ಅರೆಕಾಲಿಕ ಆಧಾರದಲ್ಲಿ ನೇಮಕ ಮಾಡಿಕೊಳ್ಳಲಾಗುತ್ತಿದೆ. (ನೇಮಕಾತಿಯು ಸರ್ಕಾರದ ನಿಯಮಗಳಿಗೆ ಒಳಪಟ್ಟಿರುತ್ತದೆ). ಆಸಕ್ತ ನಿವೃತ್ತ ಸಿವಿಲ್ ನ್ಯಾಯಾಧೀಶರು ತಮ್ಮ ದಾಖಲೆಗಳೊಂದಿಗೆ ಮಂಡ್ಯ ನಗರಸಭೆಗೆ ಸಂಪರ್ಕಿಸುವಂತೆ ಮಂಡ್ಯ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆಆರ್‌ಎಸ್‌ನಲ್ಲಿ ಟ್ರಯಲ್ ಬ್ಲಾಸ್ಟ್ ವಿರೋಧಿಸಿ ರೈತರ ಪ್ರತಿಭಟನೆ

ಸರ್ಕಾರ, ಉಸ್ತುವಾರಿ ಸಚಿವ, ಅಧಿಕಾರಿಗಳ ವಿರುದ್ಧ ಆಕ್ರೋಶ



ಶ್ರೀರಂಗಪಟ್ಟಣ, ಜು.2- ರೈತರ ವಿರೋಧದ ನಡುವೆಯೂ ಕೆಆರ್‌ಎಸ್‌ನ 20 ಕಿ.ಮೀ. ವ್ಯಾಪ್ತಿಯಲ್ಲಿ ಜಿಲ್ಲಾಡಳಿತ ಮತ್ತು ಕಾವೇರಿ ನೀರಾವರಿ ನಿಗಮ ಪ್ರಾಯೋಗಿಕ ಸ್ಫೋಟ (ಟ್ರಯಲ್ ಬ್ಲಾಸ್ಟ್) ನಡೆಸಲು ಮುಂದಾಗಿರುವುದನ್ನು ವಿರೋಧಿಸಿ ರಾಜ್ಯ ರೈತ ಸಂಘದ ಕಾರ್ಯಕರ್ತರು ಶ್ರೀರಂಗಪಟ್ಟಣ ತಾಲೂಕು ಕೆಆರ್‌ಎಸ್‌ನ ಕಾವೇರಿ ನೀರಾವರಿ ನಿಗಮದ ಇಂಜಿನಿಯರ್ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ನೇತೃತ್ವದಲ್ಲಿ ಮಂಡ್ಯ, ಮೈಸೂರು ಜಿಲ್ಲೆಯಿಂದ ಆಗಮಿಸಿದ್ದ ರೈತರು, ವಿವಿಧ ಕನ್ನಡ ಪರ, ಪ್ರಗತಿಪರ ಸಂಘಟನೆಗಳ ಮುಖಂಡರು ರಾಜ್ಯ ಸರ್ಕಾರ, ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ, ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಟ್ರಯಲ್ ಬ್ಲಾಸ್ಟ್ ತಜ್ಞರ ತಂಡ ಆಗಮಿಸದಂತೆ ಗೋ ಬ್ಯಾಕ್ ಘೋಷಣೆ ಕೂಗಿದ ರೈತ ಸಂಘದ ಕಾರ್ಯಕರ್ತರು, ಕೆಆರ್‌ಎಸ್ ಅಣೆಕಟ್ಟೆ ಹಿತದೃಷ್ಟಿಯಿಂದ ಯಾವುದೇ ಕಾರಣಕ್ಕೂ ಟ್ರಯಲ್ ಬ್ಲಾಸ್ಟ್ ಮಾಡಬಾರದು. ರಾಜಧಾನಿ ಬೆಂಗಳೂರು ಸೇರಿದಂತೆ ಅನೇಕ ನಗರಗಳ ಜನರ ಕುಡಿಯುವ ನೀರು ಹಾಗೂ ಕೃಷಿಗೆ ನೀರು ಹರಿಸಲಾಗುತ್ತಿದೆ. ಈ ಭಾಗದ ರೈತರ ಬಾಳಿಗೆ ಬೆಳಕಾಗಿರುವ ಅಣೆಕಟ್ಟೆ ಬಳಿ ಪ್ರಾಯೋಗಿಕ ಸ್ಫೋಟ ನಡೆಸುವುದು ಸರಿಯಲ್ಲ. ಇದರಿಂದ ಈಗಲ್ಲದಿದ್ದರೂ ಮುಂದಿನ ದಿನಗಳಲ್ಲಿ ಅಪಾಯ ಸಂಭವಿಸುವ ಸಾಧ್ಯತೆಯಿದೆ ಎಂದರು.

ವೈಜ್ಞಾನಿಕ ಕಾರಣಕ್ಕಾಗಿ ಪ್ರಾಯೋಗಿಕವಾಗಿ ಸ್ಫೋಟ ನಡೆಸುವುದಾಗಿ ಅಧಿಕಾರಿಗಳು ಹೇಳುತ್ತಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ರಿಟ್ ಅರ್ಜಿಯ ವಿಚಾರಣೆ ನಡೆಸಿದ ಉಚ್ಚ ನ್ಯಾಯಾಲಯ ಕೂಡ ಗಣಿಗಾರಿಕೆಗಿಂತ ಜಲಾಶಯದ ಸುರಕ್ಷತೆ ಮುಖ್ಯ ಎಂದು ಹೇಳಿದೆ. ಆದ್ದರಿಂದ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಸಾರ್ವಜನಿಕರ ಅಭಿಪ್ರಾಯವನ್ನು ಪಡೆಯಬೇಕು. ಪ್ರಾಯೋಗಿಕ ಸ್ಫೋಟಕ್ಕೆ ಯಾವುದೇ ಕಾರಣಕ್ಕೂ ಅವಕಾಶ ನೀಡುವುದಿಲ್ಲ ಎಂದು ಹೇಳಿದರು.

ಪ್ರತಿಭಟನೆಯಲ್ಲಿ ರೈತ ಸಂಘದ ಜಿಲ್ಲಾಧ್ಯಕ್ಷ ಎ.ಎಲ್.ಕೆಂಪೂಗೌಡ, ಸರ್ವೋದಯ ಕರ್ನಾಟಕ ಪಕ್ಷದ ಕಾರ್ಯದರ್ಶಿ ಪ್ರಸನ್ನ ಎನ್.ಗೌಡ, ಕೆ.ಆರ್.ರವೀಂದ್ರ, ಹಲ್ಕೆರೆ ಮಹದೇವು, ಮೈಸೂರು ಜಿಲ್ಲಾಧ್ಯಕ್ಷ ಹೊಸೂರು ಕುಮಾರ್, ನಾಗರಾಜು, ಬೋರಾಪುರ ಶಂಕರೇಗೌಡ, ಮರಿಚನ್ನೇಗೌಡ, ಎಂ.ವಿ. ರಾಜೇಗೌಡ, ಲತಾ ಶಂಕರ್ ಇತರರು ಭಾಗವಹಿಸಿದ್ದರು.

ಒಂದನೇ ಪುಟದಿಂದ

ಕ್ರಯ ನೋಂದಣಿ ರದ್ದು

ಸಂಸ್ಥೆಗಳು ಭೂ ಪರಿವರ್ತನೆ ಆಗದೇ ಬಡಾವಣೆಗಳ ಅಭಿವೃದ್ಧಿಗೆ ಯಾವುದೇ ಕಾರಣಕ್ಕೂ ಮಂಜೂರಾತಿ ನೀಡಬಾರದು. ಒಂದು ವೇಳೆ ಭೂ ಪರಿವರ್ತನೆ ಆಗದ ಬಡಾವಣೆಗಳಿಗೆ ಮಂಜೂರಾತಿ ನೀಡಿದರೆ ಜನರು ಸಂಕಷ್ಟಕ್ಕೆ ಒಳಗಾಗುತ್ತಾರೆ ಎಂದರು. ಈ ಹಿನ್ನೆಲೆಯಲ್ಲಿ ಇನ್ನು ಮುಂದೆ ಭೂ ಪರಿವರ್ತನೆ ಆಗದೆ ಅಭಿವೃದ್ಧಿಗೊಂಡ ಬಡಾವಣೆಗಳ ನಿವೇಶನಗಳನ್ನು ಆರ್‌ಟಿಸಿ ಆಧಾರದ ಮೇಲೆ ಕ್ರಯ ನೋಂದಣಿ ಮಾಡುವುದನ್ನು ರದ್ದು ಮಾಡಲಾಗುವುದು. ಇದರಿಂದ ಅಮಾಯಕ ಜನರು ಕೂಡ ಮೋಸದಿಂದ ಪಾರಾಗುತ್ತಾರೆ ಎಂದು ಹೇಳಿದರು.

ಭೂ ಪರಿವರ್ತನೆ ಆಗದ ಭೂಮಿ ಕೃಷಿ ಭೂಮಿಯಾಗಿಯೇ ಉಳಿಯುತ್ತದೆ. ಆರ್‌ಟಿಸಿ ಆಧಾರದ ಮೇಲೆ ನಿವೇಶನ ಕ್ರಯ ನೋಂದಣಿ ರದ್ದು ಮಾಡಿದರೆ ಅನಧಿಕೃತ ಬಡಾವಣೆ ನಿರ್ಮಾಣಕ್ಕೂ ತಡೆ ನೀಡಿದಂತಾಗುತ್ತದೆ ಎಂದು ತಿಳಿಸಿದರು.

ಈಗಾಗಲೇ ಬಹಳಷ್ಟು ಅವ್ಯವಸ್ಥೆಗಳಾಗಿವೆ. ಆದರೆ ಮುಂದೆಯಾದರೂ ಇಂತಹ ಅಕ್ರಮಗಳು ನಡೆಯದಂತೆ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಕೃಷ್ಣಭೈರೇಗೌಡರು ಸ್ಪಷ್ಟಪಡಿಸಿದರು. ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕಟಾರಿಯಾ, ವಿಪತ್ತು ನಿರ್ವಹಣೆಯ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್, ಕೆಪಿಎಲ್‌ಸಿ ಆಯುಕ್ತ ವಸಂತ್ ಕುಮಾರ್, ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಮಂಡ್ಯ ಜಿಲ್ಲಾಧಿಕಾರಿ ಕುಮಾರ್, ಹಾಸನ ಜಿಲ್ಲಾಧಿಕಾರಿ ಸತ್ಯಭಾಮ ಸೇರಿದಂತೆ ಇತರೆ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ಟಾಸ್ಕ್‌ಫೋರ್ಸ್ ರಚನೆ

ಮುನ್ನ ಅಣಕು ಕಾರ್ಯಾಚರಣೆ ನಡೆಸುವಂತೆ ಸೂಚನೆ ನೀಡಲಾಗಿದೆ. ಅತಿವೃಷ್ಟಿಯ ಸಮಯದಲ್ಲಿ ಟಾಸ್ಕ್‌ಫೋರ್ಸ್ ಅಧಿ ಕಾರಿಗಳು ಗ್ರಾಮ ಪಂಚಾಯಿತಿಯಲ್ಲೇ ಮೊಕ್ಕಾಂ ಹೂಡಬೇಕು ಎಂದು ತಾಕೀತು ಮಾಡಲಾಗಿದೆ ಎಂದು ಹೇಳಿದರು. ಅತಿವೃಷ್ಟಿ ವೇಳೆ ಮನೆಗಳು ಕುಸಿಯುವ ಹಂತದಲ್ಲಿದ್ದರೆ ಆ ಕುಟುಂಬಸ್ಥರನ್ನು ಖಾಲಿ ಮಾಡಿಸಿ, ಅವರ ವಾಸ್ತವ್ಯಕ್ಕೆ ಪರ್ಯಾಯ ವ್ಯವಸ್ಥೆ ಮಾಡಬೇಕು. ಜೊತೆಗೆ ಆರೈಕೆ ಕೇಂದ್ರಗಳನ್ನು ಸ್ಥಾಪಿಸಬೇಕು ಎಂದು ಹೇಳಿದರು. ಕೊಡಗು, ಬೆಂಗಳೂರು, ಮಂಗಳೂರು ಸೇರಿದಂತೆ ನಾಲ್ಕು ಜಿಲ್ಲೆಗಳಲ್ಲಿ ರಾಷ್ಟ್ರೀಯ ವಿಪತ್ತು ನಿರ್ವಹಣಾ ತುಕಡಿಗಳನ್ನು ನಿಯೋಜನೆ ಮಾಡಲಾಗಿದ್ದು, ಈಗಾಗಲೇ ಕಾರ್ಯ ನಿರ್ವಹಿಸುತ್ತಿವೆ. ಇನ್ನು ಮೈಸೂರು, ಬೆಂಗಳೂರು, ಬೆಳಗಾವಿ ಸೇರಿದಂತೆ ಇತರೆಡೆ ರಾಜ್ಯ ವಿಪತ್ತು ನಿರ್ವಹಣಾ ತುಕಡಿಗಳನ್ನು ಕೂಡ ನಿಯೋಜನೆ ಮಾಡಲಾಗುವುದು ಎಂದು ಕೃಷ್ಣ ಬೈರೇಗೌಡರು ಮಾಹಿತಿ ನೀಡಿದರು.

ಭೂಮಿ ಒತ್ತುವರಿ ತೆರವು

ಆದರೆ 205 ಮಿಲಿ ಮೀಟರ್ ಮಳೆಯಾಗಿದೆ ಎಂದು ಅಂಕಿ ಅಂಶಗಳ ವಿವರ ನೀಡಿದರು. ಈ ಬಾರಿ ಮಳೆಯಿಂದ 20 ಜನರು ಸಾವನ್ನಪ್ಪಿದ್ದಾರೆ. ಈ ಹಿನ್ನೆಲೆಯಲ್ಲಿ ಇಂತಹ ಅವಘಡಗಳು ಸಂಭವಿಸದಂತೆ ಮುನ್ನೆಚ್ಚರಿಕಾ ಕ್ರಮ ವಹಿಸಲು ಅಧಿಕಾರಿಗಳಿಗೆ ಸೂಚನೆ ನೀಡು ತ್ತೇನೆ ಎಂದು ಕೃಷ್ಣ ಭೈರೇಗೌಡ ತಿಳಿಸಿದರು. ಅತಿವೃಷ್ಟಿಯಿಂದ ಏನಾದರೂ ಅವಘಡಗಳು ಸಂಭವಿಸಿದರೆ ಪರಿಹಾರ ನೀಡಲು 780 ಕೋಟಿ ಮೀಸಲಿಡಲಾಗಿದೆ. ಹಾಗಾಗಿ ಹಣದ ಕೊರತೆ ಇಲ್ಲ. ಸದ್ಯಕ್ಕೆ ಪರಿಹಾರ ಕಾರ್ಯಕ್ರಮಕ್ಕೆ ಕೇಂದ್ರ ಸರ್ಕಾರದ ಅನುದಾನ ಕೇಳುವ ಅಗತ್ಯವಿಲ್ಲ. ಮುಂದೆ ತುಂಬಾ ತೊಂದರೆ ಎದುರಾದರೆ ಕೇಂದ್ರಕ್ಕೆ ಮನವಿ ಸಲ್ಲಿಸಲಾಗುವುದು ಎಂದು ಸ್ಪಷ್ಟಪಡಿಸಿದರು. ರಾಜ್ಯದಲ್ಲಿ 767 ಸರ್ವೆಯರ್ ಗಳನ್ನು ನೇಮಕಾತಿ ಮಾಡಿಕೊಳ್ಳಲು ಈಗಾಗಲೇ ಅಧಿಸೂಚನೆ ಹೊರಡಿಸಲಾಗಿದೆ. ಇದಲ್ಲದೆ ಹೆಚ್ಚುವರಿಯಾಗಿ 300 ಸರ್ವೆಯರ್‌ಗಳನ್ನು ನೇಮಕ ಮಾಡಿಕೊಳ್ಳಲಾಗುವುದು. ಇದಲ್ಲದೆ 43 ಎಡಿಎಲ್‌ಆರ್ ಅಧಿಕಾರಿಗಳನ್ನು ಕೂಡ ನೇಮಕ ಮಾಡಿಕೊಳ್ಳಲಾಗುವುದು. ಸರ್ವೆ ಇಲಾಖೆಯನ್ನು ಆಧುನಿಕರಣಗೊಳಿಸಲು 23 ಕೋಟಿ ವೆಚ್ಚದ ಉಪಕರಣಗಳನ್ನು ನೀಡಲಾಗಿದೆ ಎಂದು ಕೃಷ್ಣ ಬೈರೇಗೌಡರು ತಿಳಿಸಿದರು.

ಸಮಸ್ಯೆ ಪರಿಹಾರವಾಗದೆ ಜನರು ಚಕ್ರವ್ಯೂಹಕ್ಕೆ ಸಿಲುಕಿದ್ದಾರೆ



ಮೈಸೂರು: ಕಂದಾಯ ಇಲಾಖೆಯಲ್ಲಿ ನಿರೀಕ್ಷೆಯಂತೆ ಕೆಲಸ ಕಾರ್ಯಗಳು ನಡೆಯುತ್ತಿಲ್ಲವಾದ ಕಾರಣ ನಾವು ಮುಜುಗರ ಅನುಭವಿಸಬೇಕಾದ ಪರಿಸ್ಥಿತಿ ಬಂದಿದೆ. ಇದು ಇಲಾಖೆಗೆ ಕಪ್ಪು ಚುಕ್ಕೆಯಾಗಿದೆ ಎಂದು ಕಂದಾಯ ಸಚಿವ ಕೃಷ್ಣ ಭೈರೇಗೌಡ ಹೇಳಿದರು. ಬೇರೆ ಇಲಾಖೆಗಳ ಕೆಲಸ ಮಾಡಿ ಕಂದಾಯ ಇಲಾಖೆಯ ಕೆಲಸಗಳನ್ನೆ ಮರೆತಿದ್ದೀರಾ. ನಿರೀಕ್ಷೆಯಂತೆ ಕೆಲಸ ಮಾಡದ ಕಾರಣ ಬಹಳಷ್ಟು ವ್ಯಾಜ್ಯಗಳು ನ್ಯಾಯಾಲಯದಲ್ಲಿವೆ. ತೀರಾ ಇದರಿಂದ ಇಲಾಖಾ ಕಾರ್ಯದರ್ಶಿಗಳು ನ್ಯಾಯಾಲಯದ ಕಟಕಟೆಯಲ್ಲಿ ನಿಲ್ಲಬೇಕಾದ ಪರಿಸ್ಥಿತಿ ಬಂದಿದೆ. ಒಂದೊಂದು ಬಾರಿ ನ್ಯಾಯಾಂಗ ನಿಂದನೆ ಕೂಡ ಎದುರಿಸಬೇಕಾಗಿದೆ ಎಂದು ಹೇಳಿದರು.

ಕಂದಾಯ ಇಲಾಖೆಯಲ್ಲಿ ಕೆಲಸ ಆಗದ ಕಾರಣ ಜನರು ಹಳ್ಳಿಯಿಂದ ರಾಜಧಾನಿ ಬೆಂಗಳೂರಿಗೆ ಅಲೆಯುವ ಪರಿಸ್ಥಿತಿ ಬಂದಿದೆ. ಇದರಿಂದ ಜನರು ಸಮಸ್ಯೆ ಸುಳಿಯಲ್ಲಿ ಸಿಲುಕಿದ್ದಾರೆ. ಸಮಸ್ಯೆ ಪರಿಹಾರವಾಗದೆ ಚಕ್ರವ್ಯೂಹದಲ್ಲಿ ಸಿಲುಕಿ ನರಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಯಾವುದೇ ನೆಪ ಹೇಳದೆ ಜನರ ಸಮಸ್ಯೆ ಪರಿಹಾರ ಮಾಡಬೇಕು ಎಂದು ಕೃಷ್ಣಭೈರೇಗೌಡರು ತಾಕೀತು ಮಾಡಿದರು.

ನಾವು ಮಾಡುವ ಕೆಲಸ ಸರಿಯಾದ ಸಮಯಕ್ಕೆ ಆಗಿದ್ದರೆ ಪ್ರಾಯಶಃ ಇಂತಹ ಪರಿಸ್ಥಿತಿ ಬರುತ್ತಿರಲಿಲ್ಲ. ಹಿಂದೆ ಆದ ವೈಫಲ್ಯತೆಗಳನ್ನು ಈಗ ಸರಿ ಮಾಡಬೇಕಾಗಿದೆ. ಹೊಸತೇನು ಮಾಡದೆ, ಇರುವುದನ್ನು ರಿಪೇರಿ ಮಾಡಬೇಕಾಗಿದೆ ಎಂದರು.

ಒಡಿಸ್ಸಾದಲ್ಲಿ ವಿಪತ್ತು ನಿರ್ವಹಣಾ ಕಾರ್ಯವನ್ನು ಪರಿಣಾಮಕಾರಿಯಾಗಿ ಕೈಗೊಂಡಿರುವ ಪರಿಣಾಮ ಶೇಕಡ 99 ರಷ್ಟು ಸಾವು ನೋವು ತಪ್ಪಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದನ್ನು ಅಳವಡಿಸಿಕೊಳ್ಳಲಾಗಿದೆ ಎಂದು ಹೇಳಿದರು. ಮೈಸೂರು ಸುತ್ತಮುತ್ತಲಿನ ಕಾವೇರಿ ಜಲಾನಯನ ಪ್ರದೇಶದಲ್ಲೂ ಇದನ್ನು ಅಳವಡಿಸಿಕೊಳ್ಳಬೇಕು. ಈ ಮೂಲಕ ಅತಿವೃಷ್ಟಿ ವೇಳೆ ಯಾವುದೇ ಅವಘಡಗಳು ಸಂಭವಿಸದಂತೆ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಬೇಕು ಎಂದು ಕೃಷ್ಣಭೈರೇಗೌಡ ಸೂಚಿಸಿದರು.

ವಿಪತ್ತು ನಿರ್ವಹಣೆಗೆ ಮೀಸಲಾದ ಹಣವನ್ನು ಅದೇ ಕಾರ್ಯಕ್ಕೆ ಬಳಸಬೇಕು. ಆದರೆ ಅನ್ಯ ಕಾಮಗಾರಿಗಳಿಗೆ ಇದನ್ನು ಬಳಸಿ ಮಜಾ ಮಾಡಲು ಬಿಡುವುದಿಲ್ಲ. ಉದಾಹರಣೆಗೆ ಕೊಡಗು ಜಿಲ್ಲೆಯಲ್ಲಿ 2019 ರಿಂದ ಈ ತನಕ ರಸ್ತೆ ಗುಂಡಿ ಕೂಡ ಮುಚ್ಚಿಲ್ಲ. ಇರುವ ಹಣ ಇದಕ್ಕೆ ಬಳಕೆ ಮಾಡಿಕೊಳ್ಳದೆ, ಬೇರೆ ಕೆಲಸಕ್ಕೆ ವಿನಿಯೋಗ ಮಾಡಿದ್ದೇಕೆ ಎಂದು ಪ್ರಶ್ನಿಸಿದರು.

ಇದನ್ನು ಪ್ರಶ್ನಿಸುತ್ತಿರುವ ನನಗೆ ಸಾಮಾನ್ಯ ಜ್ಞಾನ ಇಲ್ಲ ಎಂದು ಅಂದುಕೊಳ್ಳಿ. ಆದರೆ ತುರ್ತು ಕಾರ್ಯಕ್ಕೆ ಮೀಸಲಿಟ್ಟ ಹಣವನ್ನು ಯಾವ ಉದ್ದೇಶದಿಂದ ಬೇರೆ ಕಾಮಗಾರಿಗೆ ಬಳಸಿಕೊಂಡಿದ್ದೀರಾ ಎಂದು ನನಗೆ ಅರ್ಥ ಮಾಡಿಸಿ ಎಂದು ಕೃಷ್ಣಭೈರೇಗೌಡರು ಅಧಿಕಾರಿಗಳನ್ನು ತೀವ್ರ ತರಾಟೆಗೆ ತೆಗೆದುಕೊಂಡರು.

ಬಗರ್‌ಹುಕುಂ ಸಾಗುವಳಿ ಅರ್ಜಿ 8 ತಿಂಗಳಲ್ಲಿ ವಿಲೇವಾರಿ

ಮೈಸೂರು ಸೇರಿದಂತೆ ರಾಜ್ಯದ ಇತರೆಡೆ ಸಲ್ಲಿಕೆಯಾಗಿರುವ ಬಗರ್‌ಹುಕುಂ ಸಾಗುವಳಿ ಚೀಟಿ ಸಕ್ರಮಕ್ಕೆ ಅರ್ಜಿ ಸಲ್ಲಿಕೆಯಾಗಿದ್ದು, ಇನ್ನು 8 ತಿಂಗಳಲ್ಲಿ ಇದನ್ನು ಪೂರ್ಣ ಪ್ರಮಾಣದಲ್ಲಿ ವಿಲೇವಾರಿ ಮಾಡಲಾಗುವುದು ಎಂದು ಕಂದಾಯ ಸಚಿವ ಕೃಷ್ಣಭೈರೇಗೌಡ ಭರವಸೆ ನೀಡಿದರು.

ರಾಜ್ಯದ 163 ತಾಲೂಕುಗಳಲ್ಲಿ ಬಗರ್‌ಹುಕುಂ ಸಕ್ರಮೀಕರಣ ಸಮಿತಿಗಳಿವೆ. ಶಾಸಕರು ಅಧ್ಯಕ್ಷರಾಗಿರುವ ಈ ಸಮಿತಿ ಜುಲೈ ತಿಂಗಳಲ್ಲಿ ಕಾರ್ಯಾರಂಭವಾಗಿದೆ. 4.38 ಎಕರೆಗಿಂತ ಕಡಿಮೆ ಭೂಮಿ ಇರುವವರಿಗೆ ಮಾತ್ರ ಆಸ್ತಿ ಸಕ್ರಮೀಕರಣ ಮಾಡಿಕೊಡುವ ಅವಕಾಶವಿದೆ ಎಂದರು. ಖಾಲಿ ಜಾಗ ತೋರಿಸಿ ಸಾಗುವಳಿ ಮಾಡುತ್ತಿದ್ದೇನೆ ಎಂದು ನಕಲಿ ದಾಖಲಾತಿ ನೀಡುವ ಹಿನ್ನೆಲೆಯಲ್ಲಿ ಅರ್ಜಿ ಸಲ್ಲಿಸಿದ ರೈತ ಸಾಗುವಳಿ ಮಾಡುತ್ತಿದ್ದಾನೆಯೇ ಇಲ್ಲವೇ ಎಂಬ ಬಗ್ಗೆ ಹತ್ತು ವರ್ಷದ ಸ್ಯಾಟಲೈಟ್ ಇಮೇಜ್ ಸಂಗ್ರಹಿಸಲಾಗುವುದು. ತರುವಾಯ ಸರ್ವೆ ಮಾಡಿಸಲಾಗುವುದು ಎಂದು ತಿಳಿಸಿದರು.

ನಂತರ ಎಲ್ಲಾ ದಾಖಲಾತಿ ಸರಿಯಾಗಿದೆ ಎಂದು ದೃಢಪಟ್ಟು ಸಮಿತಿ ಅನುಮೋದನೆ ನೀಡಿದ ನಂತರ ಸಾಗುವಳಿ ಮಾಡುತ್ತಿದ್ದ ರೈತನಿಗೆ ತಹಸೀಲ್ದಾರ್ ಕ್ರಯ ನೋಂದಣಿ ಮಾಡಿಕೊಡುತ್ತಾರೆ. ಈ ದಾಖಲಾತಿಗಳನ್ನು ಡಿಜಿಟಲೀಕರಣ ಮಾಡಲಾಗುವುದು ಎಂದು ಹೇಳಿದರು.

ಯಾರೂ ಕಥೆ, ನೆಪ ಹೇಳದೆ ತ್ವರಿತವಾಗಿ ಕೆಲಸ ಮಾಡಿ

ಮೈಸೂರು, ಜು.2(ಬಿಎಲ್‌ಯು)-ನಮಗೆ ಯಾರೂ ಕಥೆ ಹೇಳಬೇಡಿ, ಕೆಲಸ ಆಗಬೇಕಷ್ಟೆ. ಯಾವುದೇ ನೆಪ ಹೇಳದೆ ಇಲಾಖೆಯ ಕೆಲಸ ಕಾರ್ಯಗಳನ್ನು ಚುರುಕಿನಿಂದ ಮಾಡಬೇಕು ಎಂದು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕಟಾರಿಯಾ ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ. ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿ, ತಹಶೀಲ್ದಾರ್ ಕೋರ್ಟ್‌ಗಳಲ್ಲಿ ವ್ಯಾಜ್ಯಗಳನ್ನು ಶೀಘ್ರ ಇತ್ಯರ್ಥ ಮಾಡಬೇಕು. ಜಿಲ್ಲಾಧಿಕಾರಿಗಳು ತಿಂಗಳಿಗೊಮ್ಮೆ ಈ ಸಂಬಂಧ ಸಭೆಗಳನ್ನು ನಡೆಸಿ, ವ್ಯಾಜ್ಯ ಪರಿಹಾರ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಸಲಹೆ ನೀಡಿದರು.

ಜೊತೆಗೆ ಯಾವ ಕಾಯ್ದೆಯಡಿ ತೀರ್ಪು ನೀಡಲಾಗಿದೆ ಎಂಬ ಬಗ್ಗೆ ಸ್ಪಷ್ಟವಾಗಿ ನಮೂದಿಸಬೇಕು. ವಿಲೇವಾರಿ ಮಾಡಿರುವ ಪ್ರಕರಣಗಳನ್ನು ಕಂದಾಯ ಇಲಾಖೆಯ ಸಾಫ್ಟ್‌ವೇರ್‌ಗೆ ಅಪ್ಲೋಡ್ ಮಾಡಬೇಕು ಎಂದು ತಿಳಿಸಿದರು. ಇದೇ ವೇಳೆ ಮಾತನಾಡಿದ ವಿಪತ್ತು ನಿರ್ವಹಣೆಯ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್, ಜುಲೈ ಮತ್ತು ಆಗಸ್ಟ್ ನಲ್ಲಿ ಹೆಚ್ಚು ಮಳೆಯಾಗುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಕೊಡಗು ಮತ್ತು ಚಿಕ್ಕಮಗಳೂರಿನಲ್ಲಿ ಗುಡ್ಡ ಕುಸಿತ, ಭೂ ಕುಸಿತದಂತಹ ಘಟನೆಗಳು ಸಂಭವಿಸಬಹುದು. ಆದ ಕಾರಣ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು. ನಿರಾಶ್ರಿತ ಕೇಂದ್ರ ಮತ್ತು ಗಂಜಿ ಕೇಂದ್ರ ತೆರೆಯಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ಜು.8ರಿಂದ ಜಿಪಂ ಎದುರು ಅನಿರ್ದಿಷ್ಟಾವಧಿ ಧರಣಿ

ಮದ್ದೂರು, ಜು.2- ಬೂದನೂರು ಗ್ರಾಮ ಪಂಚಾಯಿತಿನಲ್ಲಿ ಗ್ರಾಮಸಭಾ ಸದಸ್ಯರ ಹಕ್ಕುಗಳಿಗೆ ಚ್ಯುತಿಯಾಗುತ್ತಿರುವುದನ್ನು ಖಂಡಿಸಿ ಜುಲೈ 8ರಿಂದ ಜಿಲ್ಲಾ ಪಂಚಾಯಿತಿ ಕಚೇರಿ ಎದುರು ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗುವುದು ಎಂದು ಬೂದನೂರು ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಬಿ.ಕೆ.ಸತೀಶ್ ತಿಳಿಸಿದರು.

ಅಧಿಕಾರ ವಿಕೇಂದ್ರಿಕರಣದ ಹಿನ್ನೆಲೆಯಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು 1997ರಲ್ಲಿ ಜಾರಿಗೆ ತರಲಾಯಿತು. ಆದರೆ ಇದನ್ನು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂದು ಸುದ್ದಿಗೋಷ್ಠಿಯಲ್ಲಿ ಅವರು ಆರೋಪಿಸಿದರು. ಬೂದನೂರು ಗ್ರಾಮ ಪಂಚಾಯಿತಿ ಆಡಳಿತದಲ್ಲಿ ಹಲವಾರು ಲೋಪ ದೋಷಗಳು ಹಾಗೂ ಅಕ್ರಮಗಳು ನಡೆದಿದೆ. ಈ ಬಗ್ಗೆ ಕಳೆದ ಜೂನ್ 10 ರಂದು ಪ್ರತಿಭಟನೆ ನಡೆಸಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಮನವಿ ಪತ್ರ ಸಲ್ಲಿಸಿದ್ದು, ಆದರೆ ಇದುವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ದೂರಿದರು.

ಬೂದನೂರು ಗ್ರಾಮ ಪಂಚಾಯಿತಿ ಅಧ್ಯಕ್ಷರ ಆಸ್ತಿ ಬಗ್ಗೆ ಸುಳ್ಳು ಮಾಹಿತಿ ನೀಡಲಾಗಿದೆ. ಖಾಸಗಿಯವರ ಕುಡಿಯುವ ನೀರಿನ ಘಟಕದ ವಿದ್ಯುತ್ ಬಿಲ್ಲನ್ನು ಗ್ರಾಮ ಪಂಚಾಯಿತಿ ವತಿಯಿಂದಲೇ ನೀಡಲಾಗಿದ್ದು, ಈ ವಿಚಾರದಲ್ಲಿ ಅಕ್ರಮ ನಡೆಸಲಾಗಿದ್ದು ಈ ಬಗ್ಗೆ ತನಿಖೆ ನಡೆಸುವಂತೆ ಒತ್ತಾಯಿಸಲಾಗಿತ್ತು ಆದರೂ ಸಂಬಂಧಪಟ್ಟವರು ಯಾವುದೇ ಕ್ರಮ ಕೈಗೊಳ್ಳದ ಹಿನ್ನೆಲೆಯಲ್ಲಿ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹವನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಸವಿತಾ, ಪದ್ಮ ಉಪಸ್ಥಿತರಿದ್ದರು.

ಮಡುವಿನಕೋಡಿ ಗ್ರಾಪಂ ಉಪಾಧ್ಯಕ್ಷರ ಆಯ್ಕೆ



ಕೆ.ಆರ್.ಪೇಟೆ ತಾಲೂಕಿನ ಬೂಕನಕೆರೆ ಹೋಬಳಿಯ ಮಡುವಿನಕೋಡಿ ಗ್ರಾಪಂ ನೂತನ ಉಪಾಧ್ಯಕ್ಷರಾಗಿ ಎಂ.ಕೆ.ರತಿ ಮಹಾದೇವ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಕೆ.ಆರ್.ಪೇಟೆ, ಜು.2- ತಾಲೂಕಿನ ಬೂಕನಕೆರೆ ಹೋಬಳಿಯ ಮಡುವಿನ ಕೋಡಿ ಗ್ರಾಮ ಪಂಚಾಯಿತಿಯ ನೂತನ ಉಪಾಧ್ಯಕ್ಷರಾಗಿ ಎಂ.ಕೆ.ರತಿ ಮಹಾದೇವ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಗ್ರಾಮ ಪಂಚಾಯಿತಿ ಹಿಂದಿನ ಅಧ್ಯಕ್ಷರಾಗಿದ್ದ ಗೌರಮ್ಮ ಚಂದ್ರಶೇಖರ್ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಎಂ.ಕೆ.ರತಿ ಮಹಾದೇವ್ ಹೊರತುಪಡಿಸಿ ಬೇರೆ ಯಾವುದೇ ಸದಸ್ಯರು ನಾಮಪತ್ರ ಸಲ್ಲಿಸದೇ ಇರುವ ಕಾರಣ ಅವಿರೋಧ ಆಯ್ಕೆ ನಡೆಯಿತು.

ಈ ಸಂದರ್ಭದಲ್ಲಿ ಮಡುವಿನಕೋಡಿ ಗ್ರಾ.ಪಂ ಅಧ್ಯಕ್ಷೆ ಪಿ.ಎಲ್.ಪ್ರೀತಿ ಭೈರನಾಯಕ್, ಸದಸ್ಯರಾದ ಗೌರಮ್ಮ, ಎಮ್.ಎನ್. ಮಂಜುನಾಥ್, ನಾಗರಾಜು, ಶಿಭಾ ಫಿರ್ದೋಸ್, ಡಿ.ಪಿ.ಬಸವರಾಜಪ್ಪ, ಚಂದ್ರಹಾಸ್, ಎಚ್.ಎಸ್. ಶಿವಕುಮಾರ್, ಐ.ಜೆ.ಪುಷ್ಪಲತಾ, ಮುಖಂಡರಾದ ದೀಪು, ಮನು, ಸುದರ್ಶನ್, ಪಿಡಿಓ ಅಭಿನಯ ಸೇರಿದಂತೆ ಹಲವು ಗ್ರಾಮಸ್ಥರು ಉಪಸ್ಥಿತರಿದ್ದರು.

ಜು.5, ನೇರ ಸಂದರ್ಶನ

ಮಂಡ್ಯ, ಜು.2- ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಹಾಗೂ ಮೆ॥ ಆಕ್ಸಿಸ್ ಬ್ಯಾಂಕ್, ಮೆ॥ ಇಎಸ್‌ಎಸ್‌ವಿಇಇ ರಿಕ್ರೂಟೆಕ್, ಮೆ॥ ಪೀಪಲ್ ಸೆಕ್ಯೂರಂ ಹೆಚ್.ಆರ್ ಪ್ರೈ. ಲಿ., ಮೆ॥ ನಿವಬುಪ ಹೆಲ್ತ್ ಇನ್ಸೂರೆನ್ಸ್ ಕಂಪನಿ ಲಿ., ಮತ್ತು ಮೆ॥ ಸ್ಪೆಕ್ಟ್ರಂ ಟೂಲ್ಸ್ ಸಂಸ್ಥೆಗಳ ಸಹಯೋಗದಲ್ಲಿ ನೇರ ಸಂದರ್ಶನ ನಡೆಯಲಿದೆ.


ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ (ಯಾವುದೇ ಟ್ರೇಡ್), ಡಿಪ್ಲಮೋ (ಯಾವುದೇ ಟ್ರೇಡ್), ಬಿಇ (ಮೆಕ್ಯಾನಿಕಲ್) ಹಾಗೂ ಯಾವುದೇ ಪದವಿ ಉತ್ತೀರ್ಣರಾದ 18 ರಿಂದ 32 ವರ್ಷದೊಳಗಿನ ಅಭ್ಯರ್ಥಿಗಳು ಜು.5 ರಂದು ಬೆಳಗ್ಗೆ 10 ಗಂಟೆಗೆ ಮಂಡ್ಯ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಗೆ ತಮ್ಮ ರೆಸ್ಯೂಮೆ/ ಬಯೋಡೇಟಾಗಳೊಂದಿಗೆ ನೇರ ಸಂದರ್ಶನಕ್ಕೆ ಹಾಜರಾಗತಕ್ಕದ್ದು.

ಹೆಚ್ಚಿನ ಮಾಹಿತಿಗಾಗಿ ದೂ.ಸಂ: 08232-295124/9164642684 ಮತ್ತು 8970646629 ಅನ್ನು ಸಂಪರ್ಕಿಸಬಹುದು ಎಂದು ಮಂಡ್ಯ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯ ಉದ್ಯೋಗಾಧಿಕಾರಿ ಅವರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ಜು.6, ಉದರ ದರ್ಶಕ ಶಸ್ತ್ರ ಚಿಕಿತ್ಸಾ ಶಿಬಿರ

ಮಂಡ್ಯ, ಜು.2- ಜಿಪಂ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಜು.6ರಿಂದ 26ರವರೆಗೆ ಉದರದರ್ಶಕ ಶಸ್ತ್ರ ಚಿಕಿತ್ಸಾ ಶಿಬಿರ ಆಯೋಜಿಸಲಾಗಿದೆ. ಜು.6 ಕಿರುಗಾವಲು, 9 ರಂದು ಅರಕೆರೆ ಆರೋಗ್ಯ ಕೇಂದ್ರ, 10ರಂದು ಕೆ.ಆರ್.ಪೇಟೆ ತಾಲೂಕು ಆಸ್ಪತ್ರೆ, 11 ರಂದು ಕೀಲಾರ ಆರೋಗ್ಯ ಕೇಂದ್ರ, 12ರಂದು ಪಾಂಡವಪುರ ಆರೋಗ್ಯ ಕೇಂದ್ರ, 16ರಂದು ಶಿವಳ್ಳಿ, 18 ರಂದು ಚಿನಕುರಳಿ, 19 ರಂದು ಬಸರಾಳು, 20 ರಂದು ಮಂಡ್ಯ ಮಿಮ್ಸ್, 23 ರಂದು ಮದ್ದೂರು ತಾಲೂಕು ಆಸ್ಪತ್ರೆ, 24ರಂದು ಬಿಂಡಿಗನವಿಲೆ ಹಾಗೂ ಮಧ್ಯಾಹ್ನ 1 ಗಂಟೆಗೆ ನಾಗಮಂಗಲ ಸಾರ್ವಜನಿಕ ಆಸ್ಪತ್ರೆ, 25ರಂದು ಕೆ.ಎಂ.ದೊಡ್ಡಿ, 26 ರಂದು ಕೆರಗೋಡು ಆರೋಗ್ಯ ಕೇಂದ್ರಗಳಲ್ಲಿ ಬೆಳಗ್ಗೆ 10 ಗಂಟೆಗೆ ಶಿಬಿರ ನಡೆಯಲಿದೆ.

ಸುಬ್ಬಲಕ್ಷ್ಮೀ ನಿಧನ



ಕಿಕ್ಕೇರಿ, ಜು.2- ಪಟ್ಟಣದ ಹೊಸಬೀದಿ ನಿವಾಸಿ, ಹಿರಿಯ ನಾಗರಿಕರಾದ ಸುಬ್ಬಲಕ್ಷ್ಮೀ (92) ವಯೋ ಸಹಜ ಖಾಯಿಲೆಯಿಂದ ಸೋಮವಾರ ನಿಧನರಾದರು.

ಮೃತರು ಚಿತ್ರಕಲಾ ಶಿಕ್ಷಕ ಕೆ.ಟಿ. ಪರಮೇಶ್, ಗಣೇಶ ಮೂರ್ತಿ ತಯಾರಕ ಕೆ.ಟಿ. ಪ್ರಕಾಶ್ ಸೇರಿದಂತೆ ಮೂವರು ಪುತ್ರರು, ಇಬ್ಬರು ಪುತ್ರಿ ಮತ್ತು ಅಪಾರ ಬಂಧುಬಳಗ ವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಹಿಂದೂ ರುದ್ರಭೂಮಿಯಲ್ಲಿ ಮಂಗಳವಾರ ಜರುಗಿತು.

ದಿನೇಶ್



ಕೆ.ಆರ್.ಪೇಟೆ, ಜು.2- ತಾಲೂಕಿನ ಕಸಬಾ ಹೋಬಳಿಯ ಬೊಮ್ಮನಾಯಕನಹಳ್ಳಿ ಗ್ರಾಮದ ಪ್ರಗತಿಪರ ರೈತ ಕೃಷ್ಣೇಗೌಡರ ಮಗ ದಿನೇಶ್ (35) ಅವರು ಅನಾರೋಗ್ಯದಿಂದ ನಿಧನ ಹೊಂದಿದ್ದಾರೆ. ಮೃತರು ಪತ್ನಿ ಅಂಜಲಿ, ಪುತ್ರಿ ಯಶಿಕಾ, ತಂದೆ ಕೃಷ್ಣೇಗೌಡ, ತಾಯಿ ಗೌರಮ್ಮ ಸೇರಿ ದಂತೆ ಅಪಾರ ಬಂಧು- ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಸ್ವಗ್ರಾಮದಲ್ಲಿ ಮಂಗಳವಾರ ಸಂಜೆ ನಡೆಯಿತು.

ದೇಶ - ವಿದೇಶ

ವಾಡಿಕೆಗಿಂತ 6 ದಿನಗಳ ಮೊದಲೇ ದೇಶವನ್ನು ವ್ಯಾಪಿಸಿದ ಮುಂಗಾರು

ನವದೆಹಲಿ, ಜು.2– ವಾಡಿಕೆಗಿಂತ ಆರು ದಿನಗಳ ಮೊದಲೇ ನೈರುತ್ಯ ಮುಂಗಾರು ಇಡೀ ದೇಶವನ್ನು ವ್ಯಾಪಿಸಿದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ. ಮಂಗಳವಾರ ಕೊನೆಯದಾಗಿ ರಾಜಸ್ಥಾನ, ಹರಿಯಾಣ, ಪಂಜಾಬ್ ರಾಜ್ಯಗಳನ್ನು ಪ್ರವೇಶ ಮಾಡಿದೆ. ಈ ಮೂಲಕ ಜುಲೈ 2ರಂದು ಮುಂಗಾರು ಇಡೀ ದೇಶವನ್ನು ಆವರಿಸಿದಂತಾಗಿದೆ. ಸಾಮಾನ್ಯವಾಗಿ ಜುಲೈ 8ರಂದು ಮುಂಗಾರು ದೇಶವನ್ನು ವ್ಯಾಪಿಸುತ್ತಿತ್ತು ಎಂದು ಇಲಾಖೆ ಹೇಳಿದೆ.



ಮೇ 30ರಂದು ಮುಂಗಾರು ಕೇರಳವನ್ನು ಪ್ರವೇಶಿಸಿತ್ತು. ಮಹಾರಾಷ್ಟ್ರದವರೆಗೆ ತಲುಪಿದ ಬಳಿಕ ವೇಗ ಕಳೆದುಕೊಂಡಿತ್ತು. ಪರಿಣಾಮ ವಾಯವ್ಯ ಭಾರತದಲ್ಲಿ ತಾಪಮಾನ ಏರಿಕೆಯಾಗಿತ್ತು ಕ್ರಮೇಣ ವೇಗ ಪಡೆದ ಮುಂಗಾರು ವಾಡಿಕೆಗಿಂತ ಆರು ದಿನಗಳ ಮೊದಲೇ ದೇಶವನ್ನು ವ್ಯಾಪಿಸಿದೆ.

ಜುಲೈನಲ್ಲಿ ವಾಡಿಕೆಗಿಂತ ಹೆಚ್ಚಿನ ಮಳೆಯಾಗುವ ನಿರೀಕ್ಷೆಯಿದ್ದು, ಭಾರೀಮಳೆಯಿಂದಾಗಿ ಪಶ್ಚಿಮ ಹಿಮಾಲಯದ ರಾಜ್ಯಗಳ ಮತ್ತು ದೇಶದ ಮಧ್ಯ ಭಾಗಗಳಲ್ಲಿರುವ ನದಿಗಳಲ್ಲಿ ನೀರಿನ ಮಟ್ಟ ಹೆಚ್ಚಳವಾಗಿ ಪ್ರವಾಹಕ್ಕೆ ಕಾರಣವಾಗಬಹುದು ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಮದುವೆಯಾಗಲು ನಿರಾಕರಿಸಿದ್ದಕ್ಕೆ ಮರ್ಮಾಂಗ ಕತ್ತರಿಸಿದ ಮಹಿಳೆ

ಪಟ್ನಾ,ಜು.2–ತನ್ನನ್ನು ಮದುವೆಯಾಗಲು ನಿರಾಕರಿಸಿದ್ದಕ್ಕಾಗಿ ಕೋಪಗೊಂಡ ಮಹಿಳೆಯೊಬ್ಬರು ಪರಿಚಯಸ್ಥ ವ್ಯಕ್ತಿಯ ಮರ್ಮಾಂಗ ಕತ್ತರಿಸಿರುವ ಘಟನೆ ಬಿಹಾರದ ಸರನ್ ಜಿಲ್ಲೆಯಲ್ಲಿ ನಡೆದಿದೆ.



ಘಟನೆ ನಡೆದ ಕೂಡಲೇ ಮಹಿಳೆಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಗಾಯ ಗೊಂಡಿದ್ದ ವ್ಯಕ್ತಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿರುವುದಾಗಿ ಸುದ್ದಿಸಂಸ್ಥೆ ಎಎನ್ಐ ವರದಿ ಮಾಡಿದೆ. 26 ವರ್ಷದ ಮಹಿಳೆಯು 30 ವರ್ಷದ ವ್ಯಕ್ತಿಯೊಂದಿಗೆ 2 ವರ್ಷಗಳಿಂದ ಸಂಬಂಧ ಹೊಂದಿದ್ದರು. ಮದುವೆ ಮಾಡಿಕೊಳ್ಳುವುದಾಗಿ ಹೇಳಿ ಆತ ನನ್ನನ್ನು ಲೈಂಗಿಕವಾಗಿ ಬಳಸಿ ಕೊಂಡಿದ್ದಾನೆ. ಮದುವೆಯಾಗಲು ನಿರಾಕರಿಸಿದ್ದರಿಂದ ಆತನ ಮರ್ಮಾಂಗ ಕತ್ತರಿಸಿದ್ದೇನೆ ಎಂದು ಮಹಿಳೆ ತಪ್ಪೊಪ್ಪಿಕೊಂಡಿರುವುದಾಗಿ ವರದಿಯಾಗಿದೆ. ಜು.1ರಂದು ಛಾಪ್ರಾದ ನ್ಯಾಯಾಲಯದಲ್ಲಿ ವಿವಾಹ ನೋಂದಣಿ ಮಾಡಿಕೊಳ್ಳಲು ಇವರಿಬ್ಬರು ನಿರ್ಧರಿಸಿದ್ದರು. ಆದರೆ, ವ್ಯಕ್ತಿ ನ್ಯಾಯಾಲಯಕ್ಕೆ ಬಂದಿರಲಿಲ್ಲ ಎಂದು ತಿಳಿದುಬಂದಿದೆ.

ಪ್ರವಾಹದಲ್ಲಿ ಕೊಚ್ಚಿ ಹೋದ ಮರಿ ಆನೆ ರಕ್ಷಣೆ

ಗುವ್ಹಾಟಿ: ಅಸ್ಸಾಂ ಸೇರಿದಂತೆ ಈಶಾನ್ಯ ಭಾರತದಲ್ಲಿ ಭಾರಿ ಮಳೆ ಯಾಗುತ್ತಿದೆ. ಹಲೆವೆಡೆ ಪ್ರವಾಹ ಸೃಷ್ಟಿಯಾಗಿದೆ. ಬ್ರಹ್ಮಪುತ್ರ ನದಿ ತುಂಬಿ ಹರಿಯುತ್ತಿದೆ. ಅಸ್ಸಾಂ 19 ಜಿಲ್ಲೆಯ 6 ಲಕ್ಷಕ್ಕೂ ಹೆಚ್ಚು ಮಂದಿ ಪ್ರವಾಹದಿಂದ ತತ್ತರಿಸಿದ್ದಾರೆ. ಈ ಪ್ರವಾಹದಲ್ಲಿ ಆನೆ ಮರಿಯೊಂದು ಕೊಚ್ಚಿ ಹೋಗಿದೆ.



ಆದರೆ ಅರಣ್ಯ ಸಿಬ್ಬಂದಿಗಳ ಪ್ರಯತ್ನದಿಂದ ಈ ಆನೆ ಮರಿಯನ್ನು ರಕ್ಷಿಸಲಾಗಿದೆ. ಈ ಕುರಿತ ವಿಡಿಯೋವನ್ನು ಅಸ್ಸಾಂ ಮುಖ್ಯ ಮಂತ್ರಿ ಹಿಮಂತ ಬಿಸ್ವಾ ಶರ್ಮಾ ಹಂಚಿಕೊಂಡಿದ್ದಾರೆ. ಇದೇ ವೇಳೆ ತಂಡಕ್ಕೆ ಅಭಿನಂದನೆ ಸಲ್ಲಿಸಿದ್ದಾರೆ.

ಮಳೆಗಾಲ ಕಾಡಿನ ದೊಡ್ಡ ಪ್ರಾಣಿಗಳಿಗೂ ಸಂಕಷ್ಟ ತಂದಿದೆ. ಇತ್ತೀಚೆಗೆ ಚಿರಾಂಗ್ ಪ್ರದೇಶದಲ್ಲಿ ಮರಿ ಆನೆಯೊಂದು ಏಯ್ ನದಿನ ಪ್ರವಾಹ ನೀರಿನಲ್ಲಿ ಕೊಚ್ಚಿ ಹೋಗಿದೆ. ಹೆಣ್ಣು ಮರಿ ಆನೆಯನ್ನು ಅರಣ್ಯ ಸಿಬ್ಬಂದಿ ರಕ್ಷಿಸಿ, ಆರೈಕೆ ಮಾಡುತ್ತಿದ್ದಾರೆ. ಈ ಮರಿ ಆನೆಯನ್ನು ಅದರ ತಾಯಿ ಜೊತೆ ಮರಳಿ ಸೇರಿಸುವ ಪ್ರಯತ್ನ ನಡೆಸಲಾಗುತ್ತಿದೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಟ್ವೀಟ್ ಮಾಡಿದ್ದಾರೆ.

ವೇತನವೇ ಬೇಡ ಎಂದ ಪವನ್ ಕಲ್ಯಾಣ್; ಮತ್ತೊಮ್ಮೆ ಗಮನ ಸೆಳೆದ ಆಂಧ್ರ ಡಿಸಿಎಂ

ಪೀತಾಪುರ್, ಜು.2– ಆಂಧ್ರಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಈ ಬಾರಿ ಅಭೂತಪೂರ್ವ ಗೆಲುವಿನ ಮೂಲಕ ದೇಶಾದ್ಯಂತ ಸುದ್ದಿಯಾಗಿದ್ದ ಪವನ್ ಕಲ್ಯಾಣ್ ಇದೀಗ ಮತ್ತೆ ಸುದ್ದಿ ಯಲ್ಲಿದ್ದಾರೆ. ರಾಜ್ಯದಲ್ಲಿ ಆರ್ಥಿಕ ಸಂಕಷ್ಟ ಎದುರಾಗಿರುವ ಹಿನ್ನೆಲೆ ಉಪ ಮುಖ್ಯಮಂತ್ರಿ ಹಾಗೂ ನಟ ಪವನ್ ಕಲ್ಯಾಣ್ ವೇತನ ಪಡೆಯಲು ನಿರಾಕರಿಸಿದ್ದಾರೆ.



ಕಾಕಿನಾಡ ಜಿಲ್ಲೆಯ ಗೋಲಾಪ್ರೋಲ್ಲು ಗ್ರಾಮದಲ್ಲಿ ಪವನ್ ಕಲ್ಯಾಣ್ ಮಾತನಾಡುತ್ತ, ಇಲಾಖೆಯಲ್ಲಿ ಹಣವಿಲ್ಲ. ಇದಕ್ಕಾಗಿಯೇ ಕಳೆದ ತಿಂಗಳ ವೇತನಕ್ಕೆ ಸಂಬಂಧಿಸಿದ ಕಡತಕ್ಕೆ ಕೆಲ ದಿನ ಸಹಿ ಹಾಕುವುದನ್ನು ತಡೆದರು. ಸಂಬಳದ ಅಗತ್ಯವಿಲ್ಲ ಎಂದು ಅಧಿಕಾರಿಗಳಿಗೆ ಸೂಚಿಸಿದ ಅವರು, ಹಿಂದಿನ ಸರ್ಕಾರದ ಪಂಚಾಯಿತಿ ಹಣ ಎಲ್ಲಿದೆ ಎಂಬುದು ಸ್ಪಷ್ಟವಾಗಿಲ್ಲ ಎಂದು ಟೀಕಿಸಿದರು. ಇಲಾಖೆಯ ಹಣದ ಕೊರತೆಯ ನಡುವೆಯೂ ಅಂದಿನ ಮುಖ್ಯಮಂತ್ರಿ ರುಷಿಕೊಂಡನಲ್ಲಿ ಅರಮನೆ ನಿರ್ಮಿಸಿದ್ದರು ಎಂದು ಆರೋಪಿಸಿದರು. ಪಂಚಾಯತ್ ರಾಜ್ ಇಲಾಖೆಯಲ್ಲಿ ತಮ್ಮ ಕಡೆಯಿಂದ ಯಾವುದೇ ಭ್ರಷ್ಟಾಚಾರ ನಡೆಯುವುದಿಲ್ಲ ಎಂದು ಪವನ್ ಕಲ್ಯಾಣ್ ಸಾರ್ವಜನಿಕರಿಗೆ ಭರವಸೆ ನೀಡಿದರು.

8,300 ಕೋಟಿ ರೂ. ವಂಚನೆ; ಭಾರತೀಯ ಮೂಲದ ಅಮೆರಿಕದ ಉದ್ಯಮಿಗೆ ಜೈಲು

ವಾಷಿಂಗ್ಟನ್, ಜು.2–ಭಾರತೀಯ ಮೂಲದ ಅಮೆರಿಕದ ಉದ್ಯಮಿ, ಔಟ್ ಕಮ್ ಹೆಲ್ತ್ ಸಂಸ್ಥೆಯ ಸಹ ಸಂಸ್ಥಾಪಕ ರಿಶಿ ಶಾ ಅವರಿಗೆ ವಂಚನೆ ಪ್ರಕರಣದಲ್ಲಿ ಏಳೂವರೆ ವರ್ಷ ಶಿಕ್ಷೆಯಾಗಿದೆ. ಬರೋಬ್ಬರಿ 8,300 ಕೋಟಿ ರೂ. ವಂಚನೆ ಪ್ರಕರಣದಲ್ಲಿ ರಿಶಿ ಶಾ ಅವರನ್ನು ಅಮೆರಿಕ ಜಿಲ್ಲಾ ಕೋರ್ಟ್ ದೋಷಿ ಎಂದು ಘೋಷಿಸಿದ್ದು, ಇದೀಗ ಶಿಕ್ಷೆ ಪ್ರಮಾಣ ಪ್ರಕಟಿಸಿದೆ. ಗೋಲ್ಡ್ ಸ್ಯಾಕ್ಸ್ ಗ್ರೂಪ್, ಗೂಗಲ್ ಪೇರೆಂಟ್ ಆಲ್ಫಬೆಟ್ ಮತ್ತು ಇಲಿನಾಯ್ಸ್ ಗವರ್ನರ್ ಜೆಬಿ ಪ್ರಿಟ್ಜ್ಕರ್ ಅವರ ಸಾಹಸೋದ್ಯಮ ಬಂಡವಾಳ ಸಂಸ್ಥೆಗೆ ತಮ್ಮ ಸ್ಕೀಂ ಮೂಲಕ ಶಾ ಕೋಟ್ಯಂತರ ರೂ. ವಂಚನೆ ಮಾಡಿರುವುದು ಸಾಬೀತಾಗಿದ್ದು, ಅಮೆರಿಕ ಜಿಲ್ಲಾ ನ್ಯಾಯಾಧೀಶ ಥಾಮಸ್ ಡರ್ಕಿನ್ ಏಳೂವರೆ ವರ್ಷ ಕಠಿಣ ಸಜೆ ವಿಧಿಸಿದೆ. ಹೂಡಿಕೆದಾರರಿಗೆ ಸುಳ್ಳು ಹೇಳಿ ವಂಚನೆ, ಸುಳ್ಳು ಜಾಹೀರಾತು ಪ್ರಕಟಿಸಿ ವಂಚನೆ ಹೀಗೆ ಗಂಭೀರ ಆರೋಪಗಳನ್ನು ಎದುರಿಸುತ್ತಿರುವ ಶಾಗೆ 15 ವರ್ಷಗಳ ಶಿಕ್ಷೆ ವಿಧಿಸಬೇಕೆಂದು ಕೋರ್ಟ್‌ಗೆ ಸಂತ್ರಸ್ತರು ಮನವಿ ಮಾಡಿದ್ದರು.



ತಿಂಗಳಲ್ಲಿ ಐದು ಬಾರಿ ಹಾವು ಕಡಿತ; ಪವಾಡ ರೀತಿಯಲ್ಲಿ ವ್ಯಕ್ತಿ ಬಚಾವ್!

ಉತ್ತರಪ್ರದೇಶ: ವ್ಯಕ್ತಿಯೊಬ್ಬನಿಗೆ ಒಂದು ತಿಂಗಳಲ್ಲಿ ಐದು ಬಾರಿ ಹಾವು ಕಚ್ಚಿದ್ದು ಪವಾಡವೆನ್ನುವಂತೆ ಆತ ಅಪಾಯದಿಂದ ಪಾರಾಗಿರುವ ಘಟನೆ ಉತ್ತರಪ್ರದೇಶದಲ್ಲಿ ನಡೆದಿದೆ. ಫತ್ಹೇಪುರ ನಿವಾಸಿ ವಿಕಾಸ್ ದುಬೆ ಎಂಬವರಿಗೆ 45 ದಿನದಲ್ಲಿ 5 ಬಾರಿ ಹಾವು ಕಚ್ಚಿದೆ. ಹಾವು ಕಚ್ಚಿದ ಬಳಿಕ ಶೀಘ್ರದಲ್ಲಿಯೇ ಚಿಕಿತ್ಸೆ ಪಡೆದುಕೊಂಡ ಪರಿಣಾಮ ವಿಕಾಸ್ ದುಬೆ ಜೀವ ಉಳಿದಿದೆ. ಇನ್ನು ಈ ರೀತಿಯಾಗಿ ಒಬ್ಬನೇ ವ್ಯಕ್ತಿ ಪದೇ ಪದೆ ಹಾವು ಕಡಿತಕ್ಕೆ ಒಳಗಾಗುತ್ತಿರುವ ಸಂಗತಿ ಕೇಳಿ ವೈದ್ಯರು ಮಾತ್ರವಲ್ಲದೇ ಸ್ಥಳೀಯರು ಶಾಕ್ ಆಗಿದ್ದಾರೆ. ಮನೆಯಲ್ಲಿ ಮಲಗಿದ್ದಾಗ ವಿಕಾಸ್ ದುಬೆ ಅವರಿಗೆ ಒಂದು ತಿಂಗಳಲ್ಲಿ 5 ಬಾರಿ ಹಾವು ಕಚ್ಚಿತ್ತು. ತಕ್ಷಣ ಕುಟುಂಬಸ್ಥರು ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದರು. ಚಿಕಿತ್ಸೆ ಪಡೆದು ಗುಣಮುಖರಾದ ಬಳಿಕ ವಿಕಾಸ್ ದುಬೆ ಮನೆಗೆ ಹಿಂದಿರುಗಿದ್ದಾರೆ.

ಹಿಂದೂಗಳು ಹಿಂಸಾಚಾರ, ದ್ವೇಷ ನಿರತರಾಗಿದ್ದಾರೆ

ಲೋಕಸಭೆಯಲ್ಲಿ ವಿಪಕ್ಷ ನಾಯಕ ರಾಹುಲ್ ಗಾಂಧಿ ಭಾಷಣಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಆಕ್ಷೇಪ

ರಾಹುಲ್ ಗಾಂಧಿ ನಡವಳಿಕೆ ಸಂಸತ್ತಿನ ನಡವಳಿಕೆಗೆ ಧಕ್ಕೆ ತರುವಂತಿದೆ

ಬೆಂಗಳೂರು, ಜು.2(ಕೆಎಂಶಿ) – ಹಿಂದೂಗಳು ಹಗಲಿರುಳು ಹಿಂಸಾಚಾರ ಮತ್ತು ದ್ವೇಷದಲ್ಲಿ ನಿರತರಾಗಿದ್ದಾರೆ ಎನ್ನುವ ಮೂಲಕ ಹಿಂದೂಗಳ ತೇಜೋವಧೆ ಮಾಡಿರುವ ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಹಿಂದೂಗಳ ಕ್ಷಮೆ ಕೇಳಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ಇಂದಿಲ್ಲಿ ಆಗ್ರಹಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರುವಲ್ಲಿ ಸಂಪೂರ್ಣವಾಗಿ ವಿಫಲವಾಗಿರುವ ರಾಹುಲ್ ಗಾಂಧಿ ಸಂಸತ್ತಿನಲ್ಲಿ ವಿರೋಧ ಪಕ್ಷದ ನಾಯಕನಾಗಿ ಮಾಡಿದ ಚೊಚ್ಚಲ ಭಾಷಣ ಸುಳ್ಳು, ನಿರಾಶೆ, ಆಧಾರ ರಹಿತ ಆರೋಪಗಳಿಂದ ಕೂಡಿದೆ ಎಂದರು.

ಸದನದಲ್ಲಿ ರಾಹುಲ್ ಗಾಂಧಿ ನಡವಳಿಕೆ ಸಂಸತ್ತಿನ ನಿಯಮಗಳಿಗೆ ಧಕ್ಕೆ ತರುವಂತಿದೆ. ಲೋಕಸಭಾ ಚುನಾವಣೆ ಸಂದರ್ಭದಲ್ಲೂ ಸುಳ್ಳನ್ನೇ ಹತ್ತಾರು ಬಾರಿ ಹೇಳಿಕೊಂಡು ದೇಶಾದ್ಯಂತ ಪ್ರವಾಸ ಮಾಡಿದ್ದರು. ವಿರೋಧಪಕ್ಷದ ನಾಯಕನಾಗಿ ಹಳೇ ಚಾಳಿಯನ್ನೇ ಮುಂದುವರೆಸಿದ್ದಾರೆ.

ತಮ್ಮ ಸ್ಥಾನದ ಘನತೆ ಎತ್ತಿ ಹಿಡಿಯುವ ಬದಲಾಗಿ ಆ ಸ್ಥಾನಕ್ಕೆ ಧಕ್ಕೆ ತರುವ ಕೆಲಸ ಮಾಡಿದ್ದಾರೆ, ದೇಶದ ಅಸಂಖ್ಯಾತ ಹಿಂದೂಗಳಿಗೆ ಅವಮಾನ ಮಾಡಿದ್ದಾರೆ. ಅಷ್ಟೇ ಅಲ್ಲದೆ, ಅಗ್ನಿವೀರ್, ರೈತರ ಬಗ್ಗೆ, ಅಯೋಧ್ಯೆ ವಿಚಾರ ಮಾತ್ರವಲ್ಲದೆ, ಮೈಕ್ರೋಫೋನ್ ವಿಚಾರಗಳಲ್ಲಿ ಸುಳ್ಳು ಹೇಳಿಕೆ ನೀಡಿದ್ದಲ್ಲದೆ, ಹಿಂದೂಗಳ ತೇಜೋವಧೆ ಮಾಡಿದ್ದು ಅಕ್ಷಮ್ಯ ಅಪರಾಧ.



ಬೆಂಗಳೂರಿನ ಬಿಜೆಪಿ ಕಚೇರಿಯಲ್ಲಿ ಮಂಗಳವಾರ ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಲೋಕಸಭಾ ಚುನಾವಣೆಯಲ್ಲಿ 99 ಸ್ಥಾನಗಳನ್ನು ಗೆದ್ದಿರುವ ಕಾಂಗ್ರೆಸ್ ಕೇಂದ್ರದಲ್ಲಿ ಅಧಿಕಾರದಲ್ಲಿಲ್ಲ, 100ರ ಗಡಿ ದಾಟಲು ಆಗದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಮನಸ್ಸಿಗೆ ಬಂದಂತೆ ಮಾತನಾಡಲು ಸದನ ಬಳಕೆ ಮಾಡಿದ್ದು ಖಂಡನೀಯ. ಹಿಂದೂಗಳ ತೇಜೋವಧೆ ಮಾಡಲು ಸದನ ಬಳಸಿದ ರಾಹುಲ್ ಗಾಂಧಿ, 1984ರ ಸಿಖ್ ಸಮುದಾಯದವರ ಹತ್ಯಾಕಾಂಡಕ್ಕೆ ಕಾರಣಕರ್ತರು ಕಾಂಗ್ರೆಸ್ ಮುಖಂಡರಲ್ಲವೇ ಎಂಬ ಪ್ರಶ್ನೆಗೆ ಉತ್ತರಿಸಬೇಕು.

ದೇಶದ ಮೇಲೆ ತುರ್ತು ಪರಿಸ್ಥಿತಿ ಹೇರಿ ಮುಗ್ಧ ಜನರ ಮೇಲೆ ದಬ್ಬಾಳಿಕೆ ಮಾಡಿದ್ದು ಕಾಂಗ್ರೆಸ್ ಪಕ್ಷ ಎಂಬುದನ್ನೂ ಗಮನದಲ್ಲಿಟ್ಟುಕೊಂಡು ಉತ್ತರ ಕೊಡಲಿ. ದೇಶದ ಉದ್ಧಾರ ಮಾಡುವುದಾಗಿ ಜನರ ಮುಂದೆ ಅನೇಕ ವಿಚಾರಗಳನ್ನು ಇಟ್ಟಿದ್ದ ಕಾಂಗ್ರೆಸ್ ಹಿಂದೂಗಳ ತೇಜೋವಧೆ ಮಾಡುವುದನ್ನು ಕ್ಷಮಿಸಲು ಸಾಧ್ಯವಿಲ್ಲ ಎಂದರು.

2010ರಲ್ಲಿ ಅಂದಿನ ಗೃಹ ಸಚಿವ ಚಿದಂಬರಂ ಸಹ ಹಿಂದೂಗಳು ಭಯೋತ್ಪಾದಕರು ಎಂಬ ಉದ್ಧಟತನದ ಹೇಳಿಕೆ ನೀಡಿದ್ದರು, ಸ್ವತಃ ರಾಹುಲ್ ಗಾಂಧಿ 2021ರಲ್ಲಿ ಹಿಂದೂತ್ವ ಬೆಂಬಲಿಸುವವರನ್ನು ದೇಶದಿಂದ ಹೊಡೆದೋಡಿಸಿ ಎಂದಿದ್ದರು. ಕರ್ನಾಟಕದಲ್ಲೂ ಇದೇ ಮಾದರಿಯಲ್ಲಿ ಹಿಂದೂಗಳ ತೇಜೋವಧೆ ಮಾಡಿದ್ದರು. ಸಚಿವ ಸತೀಶ್ ಜಾರಕಿಹೊಳಿ ಹಿಂದೂ ಪದವನ್ನು ಅವಹೇಳನಕಾರಿಯಾಗಿ ಬಳಸಿದ್ದರು, ಜಾರ್ಜ್ ಪೊನ್ನಯ್ಯ ಭಾರತದ ಭೂಮಿ ಮುಟ್ಟುವುದನ್ನು ತಪ್ಪಿಸಲು ಶೂಗಳನ್ನು ಧರಿಸುವುದಾಗಿ ಉದ್ಧಟತನದ ಮಾತನಾಡಿದ್ದರು.

ಅಗ್ನಿವೀರರು ಹುತಾತ್ಮರಾದರೆ ಕೇಂದ್ರವು ಪರಿಹಾರ ಕೊಡುವುದಿಲ್ಲ ಎಂದು ಸುಳ್ಳು ಹೇಳಿದ್ದಾರೆ. ಅಗ್ನಿವೀರರು ಯುದ್ಧದಲ್ಲಿ ಪ್ರಾಣ ಕಳೆದುಕೊಂಡಾಗ ಒಂದು ಕೋಟಿ ರೂ. ಪರಿಹಾರ ಕೊಡುವುದಾಗಿ ರಾಜನಾಥ್ ಸಿಂಗ್ ಘೋಷಿಸಿದ್ದಾರೆ.

ಅಯೋಧ್ಯೆಯಲ್ಲಿ ಭವ್ಯ ರಾಮಮಂದಿರ ನಿರ್ಮಾಣ ಸಂದರ್ಭದಲ್ಲಿ ಆಸ್ತಿ–ಪಾಸ್ತಿ ಕಳೆದುಕೊಂಡ ಜನರಿಗೆ ಪರಿಹಾರ ಕೊಟ್ಟಿಲ್ಲ ಎಂಬ ಸುಳ್ಳು ಮಾಹಿತಿ ನೀಡಿದ್ದಾರೆ. ಸತ್ಯ ಸಂಗತಿಯೆಂದರೆ, ಉತ್ತರ ಪ್ರದೇಶದಲ್ಲಿನ ಬಿಜೆಪಿ ಸರ್ಕಾರ 4,215 ಅಂಗಡಿ ಮಾಲೀಕರಿಗೆ 1,253 ಕೋಟಿ ರೂ.ವರೆಗೆ ಪರಿಹಾರ ಮೊತ್ತ ನೀಡಿದೆ ಎಂದರು.

ಪ್ರಧಾನಿ ಮೋದಿ ಸರ್ಕಾರ ದೇಶದ ರೈತರನ್ನು ಭಯೋತ್ಪಾದಕರ ಪಟ್ಟಿಗೆ ಸೇರಿಸಿದೆ ಎಂದು ಆರೋಪಿಸಿದಾಗ, ಆಡಳಿತ ಪಕ್ಷ, ಈ ಆರೋಪಕ್ಕೆ ಪುರಾವೆ ಕೇಳಿದಾಗ ರಾಹುಲ್ ಗಾಂಧಿ ಬಾಯಿ ಮುಚ್ಚಿಕೊಂಡು ಕೂತಿದ್ದರು.

ಸ್ಪೀಕರ್ ಹುದ್ದೆಗೂ ಅವಮಾನ ಮಾಡಿದ್ದಾರೆ. ರಾಹುಲ್ ಗಾಂಧಿಯವರ ಬೇಜವಾಬ್ದಾರಿ ನಡವಳಿಕೆ ಅಕ್ಷಮ್ಯ ಅಪರಾಧ. ತಕ್ಷಣ ಅವರು ದೇಶದ ಜನರ ಕ್ಷಮೆ ಕೇಳಬೇಕು. ಪ್ರಬುದ್ಧತೆಯಿಂದ ನಡೆದುಕೊಳ್ಳುವಂತೆ ಹಿರಿಯ ಕಾಂಗ್ರೆಸ್ಸಿಗರು ಮಾರ್ಗದರ್ಶನ ಮಾಡಬೇಕು ಎಂದು ಸಲಹೆ ನೀಡಿದರು.

ವಾಲ್ಮೀಕಿ ನಿಗಮ ಹಗರಣ: ಮಾಜಿ ಸಚಿವ ನಾಗೇಂದ್ರ ಆಪ್ತ ಸಹಾಯಕನಿಂದ ನಕಲಿ ಸಂಸ್ಥೆಗಳ ಖಾತೆಗೆ 94.73 ಕೋಟಿ ರೂ. ವರ್ಗಾವಣೆ

ಬೆಂಗಳೂರು, ಜು.2– ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತದಲ್ಲಿ ನಡೆದಿದೆ ಎನ್ನಲಾದ ಬಹುಕೋಟಿ ಹಗರಣದ ಕುರಿತು ಅಪರಾಧ ತನಿಖಾ ಇಲಾಖೆ (CID) ನಡೆಸುತ್ತಿರುವ ತನಿಖೆಯಲ್ಲಿ ಆರೋಪಿ ನೇಕುಂಟಿ ನಾಗರಾಜ್ (46 ವರ್ಷ) ಎಂಬಾತ ಇಲಾಖೆಯ ಮಾಜಿ ಸಚಿವ ಬಿ.ನಾಗೇಂದ್ರ ಅವರ ಆಪ್ತನಾಗಿದ್ದ ಎಂದು ತಿಳಿದುಬಂದಿದೆ.

ಪ್ರಕರಣದಲ್ಲಿ ಆರೋಪಿ ನಂ.10 ಎಂದು ಹೆಸರಿಸಲಾದ ನಾಗರಾಜ್ ನಿಗಮದಿಂದ 94.73 ಕೋಟಿ ರೂಪಾಯಿಗಳನ್ನು ಅಕ್ರಮವಾಗಿ ಬಹು ನಕಲಿ ಕಂಪನಿಗಳ ವಿವಿಧ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಿದ್ದರು ಎಂಬ ಆರೋಪವಿದೆ.

ನಾಗರಾಜ್ ಅವರನ್ನು ಜೂನ್ 4ರಂದು ಸಿಐಡಿ ಬಂಧಿಸಿ, ಜೂನ್ 18ರಂದು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು. ಅವರು ನಿಗಮದ ವ್ಯವಹಾರಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು ಮತ್ತು ವಿವಿಧ ಬ್ಯಾಂಕ್ ಖಾತೆಗಳಿಗೆ ಹಣ ವರ್ಗಾವಣೆಯಾದ ಹಣದ ಬದಲಾಗಿ ಕೆಲವು ಆಭರಣ ಅಂಗಡಿಗಳಿಂದ ಚಿನ್ನವನ್ನು ಸಂಗ್ರಹಿಸಿದ್ದರು.

ನಿಗಮದ ಲೆಕ್ಕಾಧಿಕಾರಿ ಚಂದ್ರಶೇಖರ್ ಆತ್ಮಹತ್ಯೆ ಮಾಡಿಕೊಂಡಾಗ ಬೆಳಕಿಗೆ ಬಂದ ಹಗರಣಕ್ಕೆ ಸಂಬಂಧಿಸಿದಂತೆ ಬಂಧಿತರಾಗಿರುವ ಸತ್ಯನಾರಾಯಣ್ ಅವರೊಂದಿಗೆ ಕೈಜೋಡಿಸಿದ್ದಾರೆ ಎಂಬ ಆರೋಪವಿದೆ.



ಬಿ.ನಾಗೇಂದ್ರ

ನಾಗರಾಜ್ ಅವರ ಜಾಮೀನು ಅರ್ಜಿಗೆ ಆಕ್ಷೇಪಣೆ ಸಲ್ಲಿಸಿದ ಸಿಐಡಿ, ನಾಗರಾಜ್‌ರಿಂದ ಚಿನ್ನಾಭರಣಗಳನ್ನು ಯಾರು ಪಡೆದುಕೊಂಡಿದ್ದಾರೆ ಎಂಬುದನ್ನು ಖಚಿತಪಡಿಸಿಕೊಳ್ಳಲು ತನಿಖೆ ನಡೆಯುತ್ತಿದೆ ಎಂದು ಹೇಳಿದೆ. ಅವರು ಕಾರ್ಪೊರೇಷನ್ ಖಾತೆಯಿಂದ ಡ್ರಾ ಮಾಡಿದ ಹಣ ಮತ್ತು ಚಿನ್ನವನ್ನು ಇನ್ನೂ ಗುರುತಿಸಲಾಗದ ಅಪರಿಚಿತ ವ್ಯಕ್ತಿಗಳ ಖಾತೆಗಳಿಗೆ ಜಮಾ ಮಾಡಿದ್ದಾರೆ ಎಂದು ಹೇಳಲಾಗಿದೆ.

ನಿಗಮದ ವ್ಯವಸ್ಥಾಪಕ ನಿರ್ದೇಶಕ ಪದ್ಮನಾಭ್ ಮತ್ತು ಖಾತೆ ಅಧಿಕಾರಿ ಪರಶುರಾಮ್ ಅವರ ಮೇಲೆ ಸಚಿವರ ಮೂಲಕ ಒತ್ತಡ ಹೇರಿ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ವಸಂತ ನಗರ ಶಾಖೆಯಲ್ಲಿರುವ ನಿಗಮದ ಬ್ಯಾಂಕ್ ಖಾತೆಯಿಂದ ಎಂಜಿ ರಸ್ತೆ ಶಾಖೆಗೆ ಹಣ ಹೇಗೆ ವರ್ಗಾವಣೆಯಾಗಿದೆ ಎಂದು ಸಿಐಡಿ ತನಿಖೆ ನಡೆಸುತ್ತಿದೆ ಎಂದು ಹೇಳಿದರು.

ಸೀಲುಗಳು, ನಕಲಿ ಸಹಿ ಮತ್ತು ಲೆಟರ್‌ಹೆಡ್‌ಗಳನ್ನು ಪಡೆಯಲು ಮಧ್ಯಸ್ಥಿಕೆ ಮಹಿಸಿದವರು ಯಾರು ಎಂದು ತನಿಖೆ ನಡೆಸುತ್ತಿದೆ ಎಂದು ಸಿಐಡಿ ತಿಳಿಸಿದೆ.

ರಾಜಕೀಯ ಸೇರಿದ್ದ ನಾಗರಾಜ್: ನಾಗರಾಜ್ 2013ರ ಚುನಾವಣೆಯಲ್ಲಿ ಕೊಪ್ಪಳದಿಂದ ಸ್ಪರ್ಧಿಸಿದ್ದರು, ನಾಗರಾಜ್ ಅವರು ನೇರವಾಗಿ ನಿಗಮದಿಂದ ವ್ಯವಹಾರಗಳಲ್ಲಿ ಮಧ್ಯಪ್ರವೇಶಿಸಿ ಸಚಿವರ ಆಪ್ತ ಮತ್ತು ಸಂಬಂಧಿ ಎಂದು ಹೇಳಿಕೊಂಡು ವಿವಿಧ ಖಾತೆಗಳಿಗೆ ಹಣ ವರ್ಗಾವಣೆ ಮಾಡುವುದರಲ್ಲಿ ಯಾವುದೇ ಪಾತ್ರವಿಲ್ಲದಿದ್ದರೂ ಹಣ ವರ್ಗಾವಣೆ ಮಾಡಿಸಿಕೊಂಡಿರುವುದು ತನಿಖೆಯಿಂದ ಬೆಳಕಿಗೆ ಬಂದಿದೆ. ಸದ್ಯ ಬಿಜೆಪಿ ಕಾರ್ಯಕರ್ತ ಎಂದು ಹೇಳಿಕೊಳ್ಳುತ್ತಿರುವ ನಾಗರಾಜ್ 2013ರಲ್ಲಿ ಕೊಪ್ಪಳ ವಿಧಾನಸಭಾ ಕ್ಷೇತ್ರದಿಂದ ಬಿಎಸ್‌ಆರ್ ಪಕ್ಷದಿಂದ ಸ್ಪರ್ಧಿಸಿ ಸೋತಿದ್ದರು.

ಪ್ರೊ.ಬಸವರಾಜು ಅವರಿಗೆ ಅಭಿನಂದನೆ



ಮೈಸೂರಿನ ಡಿ.ಬನುಮಯ್ಯ ವಾಣಿಜ್ಯ ಮತ್ತು ಕಲಾ ಕಾಲೇಜಿನ ನೂತನ ಪ್ರಾಂಶುಪಾಲರಾಗಿ ನೇಮಕಗೊಂಡ ಪ್ರಾಧ್ಯಾಪಕ ಪ್ರೊ.ಬಸವರಾಜು ಅವರನ್ನು ಡಿ.ಬನುಮಯ್ಯ ವಿದ್ಯಾಸಂಸ್ಥೆ ಅಧ್ಯಕ್ಷ ಡಾ.ವಿ.ಬಿ.ಜಯದೇವ, ಅಭಿನಂದಿಸಿದರು. ಈ ವೇಳೆ ಆಡಳಿತಾಧಿಕಾರಿ ಡಾ.ಎನ್.ತಿಮ್ಮಯ್ಯ, ನಿರ್ಗಮಿತ ಪ್ರಾಂಶುಪಾಲ ಕೆ.ಮೂರ್ತಿ, ಸಹಾಯಕರಾದ ಪ್ರೊ.ಬಿ.ವಿ.ವೆಂಕಟೇಶ್ ಮತ್ತು ಹೆಚ್.ಆರ್.ಸುರೇಶ್ ಇದ್ದಾರೆ.

ವಿವಿಧ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು, ಜು.2– ಮೈಸೂರಿನ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ಹಾಗೂ ಹುಬ್ಬಳ್ಳಿಯ ಡಾ.ಗಂಗೂಬಾಯಿ ಹಾನಗಲ್ ಕೇಂದ್ರಕ್ಕೆ 2024–25ನೇ ಶೈಕ್ಷಣಿಕ ಸಾಲಿನಿಂದ ನಡೆಸುವ ಸ್ನಾತಕ, ಸ್ನಾತಕೋತ್ತರ, ಡಿ.ಲಿಟ್, ಡಿಪ್ಲೊಮಾ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಲ್ಲಿ ಬರುವ ಎಲ್ಲಾ ಸ್ನಾತಕೋತ್ತರ/ಡಿಪ್ಲೊಮಾ/ಸರ್ಟಿಫಿಕೇಟ್/ಡಿ.ಲಿಟ್ ಕಾರ್ಯಕ್ರಮಗಳಿಗೆ ಪ್ರವೇಶಾತಿಯನ್ನು ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಾಹಕ ವ್ಯವಸ್ಥೆಯ ಪೋರ್ಟಲ್ ಮೂಲಕ ಮಾಡಲಾಗುವುದು. UUCMS ಸಂಬಂಧಿಸಿದ ಎಲ್ಲ ಮಾಹಿತಿಯನ್ನು https://uucms.Karnataka.gov.in ನಲ್ಲಿ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ https://www.musicuniversity.ac.in ವೆಬ್‌ಸೈಟ್ ಹಾಗೂ ದೂ.ಸಂ:0821–2402114 ಅಥವಾ 9480150826 ಅನ್ನು ಸಂಪರ್ಕಿಸಬಹುದು.

‘ಅಗ್ನಿವೀರ್’ ವಾಯುಪ್ರವೇಶಕ್ಕೆ ಅರ್ಜಿ ಆಹ್ವಾನ


ಮೈಸೂರು, ಜು.2– ಭಾರತೀಯ ವಾಯುದಳದಲ್ಲಿ ‘ಅಗ್ನಿಪತ್’ ಯೋಜನೆಯಡಿ ‘ಅಗ್ನಿವೀರ್’ ವಾಯು ಪ್ರವೇಶಕ್ಕೆ ಭಾರತೀಯ ಅರ್ಹ ಅವಿವಾಹಿತ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಆಯ್ಕೆ ಪರೀಕ್ಷೆಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಮೈಸೂರು ಜಿಲ್ಲೆಯ 03–07–2004 ರಿಂದ 03–01–2008ರ ಒಳಗೆ ಜನಿಸಿದ ಅರ್ಹ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ವಿಜ್ಞಾನದ ವಿಷಯದಲ್ಲಿ ವಿದ್ಯಾರ್ಹತೆ ಪಿಯುಸಿ ತೇರ್ಗಡೆ ಹೊಂದಿರಬೇಕು. ಪಿಯುಸಿಯಲ್ಲಿ ಗಣಿತ, ಭೌತಶಾಸ್ತ್ರ, ಇಂಗ್ಲೀಷ್ ವಿಷಯಗಳಲ್ಲಿ ಕನಿಷ್ಠ ಶೇ.50 ಅಂಕ ಪಡೆದಿರಬೇಕು. ಇಂಗ್ಲೀಷ್‌ನಲ್ಲಿ ಕನಿಷ್ಠ ಶೇ.50 ಅಂಕಗಳೊಂದಿಗೆ ತೇರ್ಗಡೆ ಅಥವಾ 3 ವರ್ಷದ ಡಿಪ್ಲೊಮಾದಲ್ಲಿ ತೇರ್ಗಡೆ ಹೊಂದಿರಬೇಕು. ಅದರಲ್ಲಿ ಕನಿಷ್ಠ ಶೇ.50 ಅಂಕಗಳೊಂದಿಗೆ ತೇರ್ಗಡೆ ಮತ್ತು ಇಂಗ್ಲಿಷ್‌ನಲ್ಲಿ ಕನಿಷ್ಠ ಶೇ.50 ಅಂಕಗಳೊಂದಿಗೆ ತೇರ್ಗಡೆ ಹೊಂದಿರಬೇಕು ಅಥವಾ ಎರಡು ವರ್ಷಗಳ ವೃತ್ತಿಪರ ಶಿಕ್ಷಣದಲ್ಲಿ ಗಣಿತ, ಭೌತಶಾಸ್ತ್ರ, ವಿಷಯಗಳಲ್ಲಿ ಕನಿಷ್ಠ ಶೇ.50 ಅಂಕ ಪಡೆದಿರಬೇಕು. ಇಂಗ್ಲೀಷ್‌ನಲ್ಲಿ ಕನಿಷ್ಠ ಶೇ.50 ಅಂಕಗಳೊಂದಿಗೆ ತೇರ್ಗಡೆ ಹೊಂದಿರಬೇಕು. ವಿಜ್ಞಾನೇತರ ವಿಷಯದಲ್ಲಿ ಪಿಯುಸಿಯ ಯಾವುದೇ ವಿಷಯದಲ್ಲಿ ಕನಿಷ್ಠ ಶೇ.50 ಅಂಕ ಪಡೆದಿರಬೇಕು. ಇಂಗ್ಲೀಷ್‌ನಲ್ಲಿ ಕನಿಷ್ಠ ಶೇ.50 ಅಂಕಗಳೊಂದಿಗೆ ತೇರ್ಗಡೆ ಹೊಂದಿರಬೇಕು. ಪುರುಷ ಅಭ್ಯರ್ಥಿಗಳಿಗೆ ಎತ್ತರ 152.5 ಸೆಂಮೀ ತೂಕ ಎತ್ತರಕ್ಕೆ ಅನುಗುಣವಾಗಿರತಕ್ಕದ್ದು. ಎದೆಯ ಸುತ್ತಳತೆ 77ಸೆ.ಮೀ ಇರಬೇಕು. ಮಹಿಳಾ ಅಭ್ಯರ್ಥಿಗಳಿಗೆ ಎತ್ತರ 152 ಸೆಂಮೀ ತೂಕ ಎತ್ತರಕ್ಕೆ ಅನುಗುಣವಾಗಿರತಕ್ಕದ್ದು.



ಅರ್ಜಿ ಶುಲ್ಕ 250 ರೂ.ಗಳಾಗಿದ್ದು ಆನ್‌ಲೈನ್‌ನಲ್ಲಿ https://agnipathvayu.cdac.in ಮೂಲಕ ದಿನಾಂಕ 08–07–2024ರಿಂದ 28–07–2024 ಅರ್ಜಿ ಸಲ್ಲಿಸಬಹುದು. ಅ.18ರಂದು ಆನ್‌ಲೈನ್ ಪರೀಕ್ಷೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಸಹಾಯಕ ನಿರ್ದೇಶಕರ ದೂ.ಸಂ: 0821–2489972 ಅನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಲಾಸುರುಚಿ ತಂಡದಿಂದ ಕಂಪನಿ ಶೈಲಿಯ ನಾಟಕ ‘ಶ್ರೀಮದ್ ರಾಮಾಯಣ’



ಮೈಸೂರು, ಜು.2–ಮೈಸೂರಿನ ಕಲಾಸುರುಚಿ ಸಂಸ್ಥೆಯು ಕಳೆದ 30 ವರ್ಷಗಳಿಂದ ನಾಟಕ, ಸಂಗೀತ ಮುಂತಾದ ಕ್ಷೇತ್ರಗಳಲ್ಲಿ ಸಕ್ರಿಯವಾಗಿದೆ. ಇದೀಗ ನಮ್ಮ ಹೊಸ ನಾಟಕ "ಶ್ರೀಮದ್ ರಾಮಾಯಣ" ಅನ್ನು ಕಂಪನಿ ಶೈಲಿಯಲ್ಲಿ ಪ್ರಯೋಗಿಸಲು ತಂಡ ಸಿದ್ಧವಾಗಿದೆ.

ನಾಡಿನ ಹೆಸರಾಂತ ರಂಗಸಂಗೀತ ವಿದ್ವಾನ್ ವೈ.ಎಂ.ಪುಟ್ಟಣ್ಣಯ್ಯನವರು ರಂಗಪಠ್ಯ ಮತ್ತು ನಿರ್ದೇಶನದ ಹೊಣೆಯನ್ನು ಹೊತ್ತಿದ್ದು, ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ಜುಲೈ 6 ಮತ್ತು 7, ಶನಿವಾರ, ಭಾನುವಾರ ಎರಡು ಪ್ರದರ್ಶನಗಳನ್ನು ಏರ್ಪಡಿಸಲಾಗಿದೆ.

ಪ್ರತಿ ದಿನ ಸಂಜೆ 6 ಗಂಟೆಗೆ ನಾಟಕ ಪ್ರಾರಂಭವಾಗಲಿದ್ದು, 15 ನಿಮಿಷಗಳ ಮಧ್ಯಂತರವಿರುತ್ತದೆ. ರಾಮಾಯಣ ಭಾರತೀಯರ ಅದ್ವಿತೀಯ ಕಾವ್ಯವಾಗಿದ್ದು, ನಮ್ಮ ಜೀವನದ ಭಾಗವೇ ಆಗಿರುತ್ತದೆ. ವಿದ್ವಾನ್ ಪುಟ್ಟಣ್ಣಯ್ಯನವರು ಕಂಪನಿ ಶೈಲಿಗೆ ಒಂದಿಷ್ಟೂ ಭಂಗ ಬರದಂತೆ ಶಾಸ್ತ್ರೀಯ ಸಂಗೀತದ ಚೌಕಟ್ಟಿನಲ್ಲಿ ಅನೇಕ ಹಾಡುಗಳನ್ನು ಅಭ್ಯಾಸ ಮಾಡಿಸಿದ್ದು, ಹೊಸ ರಂಗಪ್ರತಿಭೆಗಳು ಕಂಪನಿ ಶೈಲಿಯ ನಾಟಕವನ್ನು ಮೈಸೂರಿಗರ ಮುಂದೆ ಪ್ರದರ್ಶಿಸಲು ಉತ್ಸುಕರಾಗಿದ್ದಾರೆ.

ಮಕ್ಕಳಿಗೆ ಬಸವಣ್ಣರ ನೈಜ ಇತಿಹಾಸ ತಲುಪಿಸಲು ಕಾರಣರಾದ ಸಿಎಂ ಸಿದ್ದರಾಮಯ್ಯರ ಕಾರ್ಯಕ್ಕೆ ಶ್ಲಾಘನೆ

ಮೈಸೂರು,ಜು.2(ಎಂಟಿವೈ)–ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕ್ರಾಂತಿಕಾರಿ, ಸಮಾಜ ಸುಧಾರಕರಾದ ಬಸವಣ್ಣನವರ ನೈಜ ಇತಿಹಾಸವನ್ನು ಪಠ್ಯಕ್ರಮದ ಮೂಲಕ ಮಕ್ಕಳಿಗೆ ತಲುಪಿಸುವ ಕೆಲಸ ಮಾಡಿರುವುದು ಶ್ಲಾಘನೀಯ. ಅವರಿಗೆ ಐದು ವರ್ಷ ಅಧಿಕಾರ ನಡೆಸುವ ಶಕ್ತಿ ದೊರೆಯಲಿ ಎಂದು ಬಸವತತ್ವ ಪ್ರಚಾರಕಿ ಮಾತೆ ಬಸವಾಂಜಲಿದೇವಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ನಡೆದ ವಚನ ಸಂಗ್ರಾಹಕ ಫ.ಗು.ಹಳಕಟ್ಟಿ ಜನ್ಮದಿನೋತ್ಸವ, ವಚನ ಸಂರಕ್ಷಣಾ ದಿನಾಚರಣೆ, ಗುರುವಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ಲಿಂಗಾಯತ, ವೀರಶೈವ ಎಂಬ ಗೊಂದಲದ ವಾತಾವರಣದಲ್ಲೂ ಬಸವತತ್ವದ ನೈಜತೆಯನ್ನು ಪ್ರತಿಪಾದಿಸಿದ್ದಾರೆ.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ನಡೆದ ವಚನ ಸಂಗ್ರಾಹಕ ಫ.ಗು.ಹಳಕಟ್ಟಿ ಜನ್ಮದಿನೋತ್ಸವ ಕಾರ್ಯಕ್ರಮದಲ್ಲಿ ಬಸವತತ್ವ ಪ್ರಚಾರಕಿ ಮಾತೆ ಬಸವಾಂಜಲಿದೇವಿ ಮಾತನಾಡಿದರು.

ಬಸವಣ್ಣ ಅವರನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕ ಎಂದು ಬಿಂಬಿಸಿರುವುದು ಸಿದ್ದರಾಮಯ್ಯ ಅವರ ಬಹು ದೊಡ್ಡ ಕೊಡುಗೆ. ಸಮಾಜಕ್ಕೆ ಸತ್ಯ ತಿಳಿಸುವ ಹೆಜ್ಜೆ ಇದಾಗಿದೆ. ಕಲ್ಯಾಣದಲ್ಲಿ ಕ್ರಾಂತಿ ನಡೆದ ಬಳಿಕ ವಚನಗಳನ್ನು ಉಳಿಸುವಲ್ಲಿ ಶರಣರು ಸಾಕಷ್ಟು ಶ್ರಮವಹಿಸಿದ್ದಾರೆ. ನಾಶ ಮಾಡಲು ಬೆನ್ನತ್ತಿದ್ದ ಸನಾತನಿಗಳಿಂದ ರಕ್ಷಿಸಿದ್ದಾರೆ. ಫ.ಗು.ಹಳಕಟ್ಟಿ ಅವರು ಕೂಡ ತಮ್ಮೆಲ್ಲ ಸಂಪತ್ತನ್ನು ಕಳೆದುಕೊಂಡು, ವಚನವೆಂಬ ರತ್ನವನ್ನು ಸಮಾಜಕ್ಕೆ ನೀಡಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಪತ್ರಕರ್ತ ಬನ್ನೂರು ಕೆ.ರಾಜು ಮಾತನಾಡಿ, ವಚನ ಪಿತಾಮಹಾ ಫ.ಗು.ಹಳಕಟ್ಟಿ ಅವರ ಜನ್ಮದಿನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ವಚನ ಸಂರಕ್ಷಣಾ ದಿನವಾಗಿ ಆಚರಿಸುತ್ತಿದೆ. ಈ ಆಲೋಚನೆ ಉತ್ತಮವಾಗಿದ್ದು, ಜನರು ಇದಕ್ಕೆ ಸಕ್ರಿಯವಾಗಿ ಸ್ಪಂದಿಸಬೇಕು. ವಚನ ಸಾಹಿತ್ಯ ಕ್ಷೇತ್ರಕ್ಕೆ ಡಾ.ಫ.ಗು. ಹಳಕಟ್ಟಿ ಅವರು ನೀಡಿದ ಕೊಡುಗೆ ಅಪಾರ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಹೊಸಮಠದ ಮಠಾಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವಲಯ ಉಪಾಧ್ಯಕ್ಷ ಬಿ.ಆರ್.ನಟರಾಜ್ ಜೋಯಿಸ್, ಸುರೇಶ್ ಗೋಲ್ಡ್, ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ಅಧ್ಯಕ್ಷ ಬಸವರಾಜೇಂದ್ರ ಸ್ವಾಮಿ ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಬುಧವಾರ 3 ಜುಲೈ 2024

ಕೊಡಗಿನಲ್ಲಿ ವ್ಯಾಪಕಗೊಂಡ ಕಾಡಾನೆ ದಾಂಧಲೆ

● ಫಸಲು ನಾಶ ● ಶಾಲೆಗಳಿಗೆ ತೆರಳಲು ವಿದ್ಯಾರ್ಥಿಗಳಿಗೆ ಭಯ



ಅತ್ತೂರು ನಲ್ಲೂರು ಗ್ರಾಮದ ತೋಟದಲ್ಲಿ ಆನೆಗಳು ಬಾಳೆ ಗಿಡಗಳನ್ನು ನಾಶಪಡಿಸಿರುವುದು.



ನಾಪೋಕ್ಲು ಬಳಿಯ ನಾಲಡಿ ಗ್ರಾಮದಲ್ಲಿ ಕಾಡಾನೆ ದಾಳಿಗೆ ಆಟೋ ಜಖಂಗೊಂಡಿರುವುದು.

ಮಡಿಕೇರಿ, ಜು.2– ಜಿಲ್ಲೆಯಲ್ಲಿ ಕಾಡಾನೆಗಳ ಹಾವಳಿ ದಿನೇ ದಿನೆ ಹೆಚ್ಚಾಗುತ್ತಿದ್ದು, ಆಹಾರ ಅರಸಿ ತೋಟಕ್ಕೆ ಬಂದ ಆನೆಗಳ ಹಿಂಡು ಫಸಲು ಹಾಗೂ ಮನೆ ಆವರಣದಲ್ಲಿ ನಿಲ್ಲಿಸುವ ವಾಹನ, ಹೂ ಕುಂಡ ಸೇರಿದಂತೆ ಕೃಷಿ ಪರಿಕರಗಳನ್ನು ಧ್ವಂಸಗೊಳಿಸುತ್ತಿವೆ.

ಕಾಡಾನೆಗಳ ದಾಳಿಯಿಂದ ಬೆಳೆಗಾರರು ನಷ್ಟ ಅನುಭವಿಸುತ್ತಿದ್ದು, ಶಾಲಾ–ಕಾಲೇಜು ವಿದ್ಯಾರ್ಥಿಗಳು, ತೋಟಗಳ ಕಾರ್ಮಿಕರು ಹಾಗೂ ಸಾರ್ವಜನಿಕರು ಸಂಚರಿಸಲು ಹೆದರುತ್ತಿದ್ದಾರೆ.

ನಾಲಡಿಯಲ್ಲಿ ಆಟೋ ಜಖಂ: ನಾಪೋಕ್ಲು ಬಳಿಯ ಕಕ್ಕಬ್ಬೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನಾಲಡಿ ಗ್ರಾಮದಲ್ಲಿ ಸೋಮವಾರ ರಾತ್ರಿ ಮನೆ ಬಳಿ ನಿಲ್ಲಿಸಿದ್ದ ಆಟೋ ಮೇಲೆ ಕಾಡಾನೆ ದಾಳಿ ನಡೆಸಿ ಜಖಂಗೊಳಿಸಿದೆ.

ನಾಲಡಿ ವಾಟೆಕಾಡು ಗ್ರಾಮದ ನಿವಾಸಿ ದೇವಯ್ಯ ಅವರು ಮನೆ ಸಮೀಪದಲ್ಲಿ ಎಂದಿನಂತೆ ಆಟೋವನ್ನು ನಿಲ್ಲಿಸಿದ್ದರು. ಮಧ್ಯರಾತ್ರಿ ಗ್ರಾಮಕ್ಕೆ ಲಗ್ಗೆಯಿಟ್ಟ ಕಾಡಾನೆ ಮೊದಲು ಆಟೋ ಮೇಲೆ ದಾಳಿ ನಡೆಸಿದೆ. ಬಳಿಕ ಗ್ರಾಮದ ನಿವಾಸಿ ಕುಡಿಯರ ಅಮ್ಮವ್ವ, ದೇವಯ್ಯ, ಸರೋಜ ಅವರ ತೋಟಗಳಲ್ಲಿ ದಾಂಧಲೆ ನಡೆಸಿ ಅಡಿಕೆ, ತೆಂಗು, ಬಾಳೆ, ಕಾಫಿ ಗಿಡಗಳನ್ನು ತಿಂದು ತುಳಿದು ನಾಶಪಡಿಸಿದೆ. ಇದರಿಂದ ಅಪಾರ ನಷ್ಟ ಉಂಟಾಗಿದೆ.

ಈ ವ್ಯಾಪ್ತಿಯಲ್ಲಿ ನಿರಂತರ ಕಾಡಾನೆಗಳು ದಾಂಧಲೆ ನಡೆಸುತ್ತಿದ್ದು, ಕಾಡಾನೆ ಹಾವಳಿಯಿಂದ ಗ್ರಾಮಸ್ಥರು ಓಡಾಡಲು ಭಯಪಡುವ ಪರಿಸ್ಥಿತಿ ಉದ್ಭವವಾಗಿದೆ. ಅರಣ್ಯ ಇಲಾಖೆ ಕಾಡಾನೆಗಳ ಹಾವಳಿ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕು. ಸೂಕ್ತ ಪರಿಹಾರ ನೀಡಬೇಕು ಎಂದು ಆಟೋ ಚಾಲಕ ದೇವಯ್ಯ ಮನವಿ ಮಾಡಿದರು.

ಉಪವಲಯ ಅರಣ್ಯಾಧಿಕಾರಿ ಫಿರೋಜ್ ಖಾನ್ ಮತ್ತು ಸಿಬ್ಬಂದಿ ಸೋಮಣ್ಣ ಗೌಡ, ಕಾಳೇಗೌಡ, ಮಂಜುನಾಥ್, ಕಾವೇರಪ್ಪ, ರಾಹುಲ್, ಕಾರ್ತಿಕ್, ಮುತ್ತಪ್ಪ ಸ್ಥಳ ಪರಿಶೀಲಿಸಿದರು. ಶೀಘ್ರವಾಗಿ ಆನೆಗಳನ್ನು ಕಾಡಿಗಟ್ಟಲು ಕ್ರಮವಹಿಸಿ, ನಷ್ಟ ಆದವರಿಗೆ ಅರಣ್ಯ ಇಲಾಖೆಯಿಂದ ಸೂಕ್ತ ಪರಿಹಾರ ದೊರಕಿಸಿ ಕೊಡಲಾಗುವುದು ಎಂದರು.

ಕುಮಟೂರು–ಬಾಡಗದಲ್ಲಿ ಭಯ



ಕುಮಟೂರು–ಬಾಡಗ ಗ್ರಾಮದಲ್ಲಿ ಮರಿಯೊಂದಿಗೆ ಕಾಡಾನೆಗಳು ರಾತ್ರಿ ಬೀಡು ಬಿಟ್ಟಿರುವುದು.

ಗೋಣಿಕೊಪ್ಪ ಜು.2–ಪೊನ್ನಂಪೇಟೆ ತಾಲೂಕಿನ ಕುಮಟೂರು–ಬಾಡಗ ಗ್ರಾಮದಲ್ಲಿ ಕಾಡಾನೆ ಹಿಂಡು ಭಯ ಮೂಡಿಸುತ್ತಿವೆ. ಒಂದು ತಿಂಗಳ ಮರಿಯಾನೆಯೊಂದಿಗೆ ಎರಡು ಆನೆಗಳು ಹಗಲು ರಾತ್ರಿ ಎನ್ನದೆ ಈ ಭಾಗದಲ್ಲಿ ಉಪಟಳ ನೀಡುತ್ತಿವೆ. ವಿದ್ಯಾರ್ಥಿಗಳು ಶಾಲೆಗಳಿಗೆ ತೆರಳಲು ಭಯಗೊಂಡಿದ್ದಾರೆ. ಮಕ್ಕಳನ್ನು ಶಾಲೆಗಳಿಗೆ ಕಳುಹಿಸಲು ಪಾಲಕರು ಹಿಂದೇಟು ಹಾಕುತ್ತಿದ್ದು, ಜನರ ಮೇಲೆ ದಾಳಿ ನಡೆಸಬಹುದು ಎಂದು ಸ್ಥಳೀಯರು ಆತಂಕಗೊಂಡಿದ್ದಾರೆ. ಬೆಳೆ ನಾಶ ನಿರಂತರವಾಗಿ ನಡೆಯುತ್ತಿದ್ದು, ಅರಣ್ಯ ಇಲಾಖೆ ಆನೆಗಳ ಹಿಂಡನ್ನು ಕಾಡಿಗೆ ಸೇರಿಸಬೇಕಿದೆ. ಅಪಾಯದ ನಂತರ ಪರಿಹಾರ ನೀಡುವುದು ಸರಿಯಲ್ಲ ಎಂದು ಸ್ಥಳೀಯರು ಎಚ್ಚರಿಸಿದ್ದಾರೆ.

ಕೃಷಿ ಫಸಲು ಧ್ವಂಸ: ಸುಂಟಿಕೊಪ್ಪ ಸಮೀಪದ ಅತ್ತೂರು ನಲ್ಲೂರು ಗ್ರಾಮದ ಕೃಷಿಕ ಕಡ್ಲೆಮನೆಯ ರಘುಕುಮಾರ ಅವರ ತೋಟಕ್ಕೆ ಸೋಮವಾರ ರಾತ್ರಿ ಆಹಾರ ಅರಸಿ ಬಂದ ಕಾಡಾನೆಗಳ ಹಿಂಡು ಕೃಷಿ ಫಸಲುಗಳನ್ನು ಧ್ವಂಸಗೊಳಿಸಿವೆ.

ಮಧ್ಯರಾತ್ರಿ 1 ಗಂಟೆಯಲ್ಲಿ ಕಾಡಾನೆಗಳ ಹಿಂಡು ತೋಟಕ್ಕೆ ಲಗ್ಗೆ ಇಟ್ಟು ಬಾಳೆ ಗಿಡಗಳನ್ನು ಸಂಪೂರ್ಣವಾಗಿ ತಿಂದು ನಾಶಪಡಿಸಿವೆ. ಆನೆಗಳು ತೋಟದಲ್ಲೇ ಬೀಡು ಬಿಟ್ಟಿದ್ದು, ಈ ಭಾಗದ ಬಹುತೇಕ ತೋಟಗಳ ಫಸಲುಗಳನ್ನು ಹಾನಿಗೊಳಿಸುತ್ತಿವೆ. ಅರಣ್ಯ ಇಲಾಖೆ ಕಾಡಾನೆಗಳನ್ನು ಆಗ್ಗಿಂದಾಗೆ ಕಾಡಿಗೆ ಅಟ್ಟುತ್ತಿದ್ದಾರೆ. ಆದರೂ ಮರುದಿನ ಮತ್ತೆ ಅದೇ ಸ್ಥಳಗಳಲ್ಲಿ ಪ್ರತ್ಯಕ್ಷವಾಗಿ ದಾಂಧಲೆ ನಡೆಸುತ್ತಿವೆ ಎಂದು ರಘುಕುಮಾರ್ ಅಳಲು ತೋಡಿಕೊಂಡಿದ್ದಾರೆ.

ತೋಟದಲ್ಲಿ ಫಸಲು ಭರಿತ ಕಾಫಿ ಗಿಡಗಳನ್ನು ಧ್ವಂಸಗೊಳಿಸಿವೆ. ಕಾಡಾನೆ ಉಪಟಳಕ್ಕೆ ಶಾಶ್ವತ ಪರಿಹಾರದ ಚಿಂತನೆ ನಡೆಸುವಂತಾಗಬೇಕೆಂದು ಒತ್ತಾಯಿಸಿದ್ದಾರೆ.

ಅಂಗಡಿ, ಹುಂಡಿ ಕಳ್ಳನ ಬಂಧನ



ಮಡಿಕೇರಿ, ಜು.2–ಸಿದ್ದಾಪುರ ಹಾಗೂ ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಅಂಗಡಿ ಮತ್ತು ದೇವಾಲಯಗಳ ಹುಂಡಿ ಕಳವು ಮಾಡಿದ್ದ ಕಳ್ಳನನ್ನು ಪೊಲೀಸರು ಬಂಧಿಸಿದ್ದಾರೆ.

ನಾಪೋಕ್ಲು ಸಮೀಪದ ನಾಲಾಡಿ ಗ್ರಾಮದ ನಿವಾಸಿ ಕೆ.ಸಿ.ಅಶೋಕ(35) ಬಂಧಿತ ಆರೋಪಿ. ಈತನಿಂದ 21.3 ಗ್ರಾಂ ಚಿನ್ನಾಭರಣ ಮತ್ತು ದ್ವಿಚಕ್ರ ವಾಹನ ವಶಪಡಿಸಿಕೊಳ್ಳಲಾಗಿದೆ.

ಜೂ.5ರಂದು ನಗರದ ಹೊರವಲಯ ತಾಳತ್ ಮನೆ ನಿವಾಸಿ ಭರತ್ ಅವರ ಕೋಳಿ ಹಾಗೂ ಜ್ಯೂಸ್ ಅಂಗಡಿ ಯಲ್ಲಿದ್ದ 10 ಸಾವಿರ ರೂ. ನಗದು, 52 ಗ್ರಾಂ ಚಿನ್ನಾಭರಣ ಹಾಗೂ 1 ದ್ವಿಚಕ್ರ ವಾಹನ ಕಳವು ಮಾಡಲಾಗಿತ್ತು. ಈ ಸಂಬಂಧ ಮಡಿಕೇರಿ ಗ್ರಾಮಾಂತರ ಠಾಣೆ ಪೊಲೀಸರು ಸೋಮವಾರ ಆರೋಪಿ ಕೆ.ಸಿ. ಅಶೋಕನನ್ನು ಮಾಲು ಸಹಿತ ಬಂಧಿಸಿದ್ದಾರೆ. ನಂತರ ಈತನನ್ನು ವಿಚಾರಣೆಗೆ ಒಳಪಡಿಸಿ ದಾಗ ಬೆಟ್ಟಗೇರಿಯ ಅಂಗಡಿ ಹಾಗೂ ಅರೆಕಾಡು ಗ್ರಾಮದ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಹುಂಡಿ ಕಳವು ಮಾಡಿರುವುದು ಪತ್ತೆಯಾಗಿದೆ. ಮಡಿಕೇರಿ ಗ್ರಾಮಾಂತರ ವೃತ್ತ ನಿರೀಕ್ಷಕ ಯು.ಉಮೇಶ್, ಠಾಣಾಧಿಕಾರಿ ವೆಂಕಟ್ ಹಾಗೂ ಸಿಬ್ಬಂದಿ ಕಾರ್ಯಾಚರಣೆ ನಡೆಸಿದರು.

ವಿರಾಜಪೇಟೆಯಲ್ಲಿ ಮಗುಚಿ ಬಿದ್ದ ವಾಹನ



ಮಡಿಕೇರಿ, ಜು.2– ಮಡಕೆ ಹಾಗೂ ಹೂ ಕುಂಡಗಳನ್ನು ಸಾಗಿಸುತ್ತಿದ್ದ ವಾಹನ ರಸ್ತೆಯ ಮಣ್ಣನಡಿ ಸಿಲುಕಿದ್ದು, ಜೆಸಿಬಿ ಯಿಂದ ಮೇಲೆತ್ತುವಾಗ ವಾಹನ ಮಗುಚಿ ಬಿದ್ದ ಘಟನೆ ವಿರಾಜಪೇಟೆಯಲ್ಲಿ ನಡೆದಿದೆ.

ಕೇರಳದಿಂದ ವ್ಯಾಪಾರಕ್ಕೆ ಮಡಕೆ ಹಾಗೂ ಹೂ ಕುಂಡಗಳನ್ನು ಸಾಗಿಸುತ್ತಿದ್ದ ವಾಹನ ಪೆರುಂಬಾಡಿ ಕಡೆಗೆ ತೆರಳುವ ಬದಲು ವಿರಾಜಪೇಟೆ ಎಸ್‌ಬಿಐ ರಸ್ತೆಗೆ ಬಂದಿದೆ. ಈ ಸಂದರ್ಭ ಅಂಬೇಡ್ಕರ್ ಭವನದ ಬಳಿ ರಸ್ತೆಯ ಚರಂಡಿ ಹಾಗೂ ಪಕ್ಕದ ಮಣ್ಣಿನಲ್ಲಿ ಸಿಲು ಕಿದೆ. ಇದರಿಂದ ವಾಹನ ಹಿಂದಿನ ಎಡ ಚಕ್ರ ಒಡೆದು ಹೋಗಿದೆ. ಬಳಿಕ ಜೆಸಿಬಿ ಮೂಲಕ ವಾಹನವನ್ನು ಮೇಲೆತ್ತಲು ಪ್ರಯತ್ನಿಸಿದಾಗ ವಾಹನ ಎಡ ಬದಿಗೆ ಮಗುಚಿಕೊಂಡಿದೆ. ಪರಿಣಾಮ ಸುಮಾರು 60 ಸಾವಿರ ರೂ. ನಷ್ಟವಾಗಿದೆ. ಆದರೆ, ಯಾವುದೇ ಅಪಾಯ ಸಂಭವಿಸಿಲ್ಲ.

ಬಳಿಕ ಸ್ಥಳೀಯರ ಸಹಾಯದಿಂದ ಮಡಕೆ ಹಾಗೂ ಹೂ ಕಂಡಗಳನ್ನು ತೆರವುಗೊಳಿಸಿ, ವಾಹನ ಸಂಚಾರಕ್ಕೆ ಅನುಕೂಲ ಮಾಡಿಕೊಡಲಾಯಿತು.

ಚಿಕ್ಲಿಹೊಳೆ ಭರ್ತಿ

ಪ್ರವಾಸಿಗರನ್ನು ಆಕರ್ಷಿಸುತ್ತಿರುವ ಜಲಾಶಯ



ಕುಶಾಲನಗರ, ಜು.2–ಉತ್ತರ ಕೊಡಗಿನ ರಂಗಸಮುದ್ರ ಬಳಿ ಕಾವೇರಿ ಕಣಿವೆಯ ಪ್ರಮುಖ ಜಲಾಶಯಗಳ ಪೈಕಿ ಅತೀ ಚಿಕ್ಕದಾದ ಚಿಕ್ಲಿಹೊಳೆ ಜಲಾಶಯ ಮಂಗಳವಾರ ಭರ್ತಿಯಾಗಿದ್ದು, ಅರ್ಧ ಚಂದ್ರಾಕೃತಿಯ ತಡೆಗೋಡೆ ಮೇಲಿಂದ ಹಾಲ್ನೊರೆಯಂತೆ ಧುಮ್ಮಿಕ್ಕುವ ನೀರು ಪ್ರವಾಸಿಗರ ಮನಸೂರೆಗೊಳಿಸುತ್ತಿದೆ.

ಜಿಲ್ಲೆಯಲ್ಲಿ ಕೆಲ ದಿನಗಳಿಂದ ಸುರಿಯುತ್ತಿರುವ ಮಳೆಗೆ ಮೈದುಂಬಿ ನಿಂತಿದೆ. ಯಾವುದೇ ಕ್ರಸ್ಟ್ ಗೇಟ್‌ಗಳನ್ನು ಹೊಂದಿರದೆ ಕೇವಲ ಬಾವಿಯಾಕಾರದ ಮಾದರಿಯಲ್ಲಿ ದೊಡ್ಡ ತೂಬು ನಿರ್ಮಿಸಲಾಗಿದೆ

ಜಲಾಶಯಕ್ಕೆ ಒಳಹರಿವು ಹೆಚ್ಚಾದಂತೆ ನೀರು ಅಣೆಕಟ್ಟೆಯ ಹೊರಗೆ ಹರಿಯುತ್ತದೆ. ಗರಿಷ್ಠ 72.6 ಮೀಟರ್ ಎತ್ತರ ಹೊಂದಿರುವ ಅಣೆಕಟ್ಟೆಯಲ್ಲಿ 0.18 ಟಿಎಂಸಿ ನೀರು ಸಂಗ್ರಹಗೊಂಡಿದೆ. ಉತ್ತಮ ಮಳೆಯಿಂದ ಜಲಾಶಯ ಇದೀಗ ಭರ್ತಿಯಾಗಿದ್ದು, ಮೀನುಕೊಲ್ಲಿ ಮೀಸಲು ಅರಣ್ಯದ ಮಧ್ಯೆ ಸದಾ ಹಸಿರಿನಿಂದ ಕಂಗೊಳಿಸುವ ಸುಂದರ ಪರಿಸರದಲ್ಲಿ ಚಿಕ್ಲಿಹೊಳೆ ಜಲಾಶಯ ಪ್ರವಾಸಿಗರನ್ನು ತನ್ನತ್ತ ಕೈಬೀಸಿ ಕರೆಯುತ್ತಿದೆ. ಜಲಾಶಯದ ಹಿನ್ನೀರು ಪ್ರದೇಶ ಒಂದೆಡೆ ದಟ್ಟಕಾಡು ಹಾಗೂ ಮತ್ತೊಂದೆಡೆ ಕಾಫಿ ತೋಟಗಳ ಸಾಲಿನಿಂದ ಆವೃತಗೊಂಡಿದೆ. ಈ ಜಲಾಶಯ ಇತರೆ ಜಲಾಶಯಗಳೊಂದಿಗೆ ಹೋಲಿಕೆ ಮಾಡುವಷ್ಟು ದೊಡ್ಡದಾಗಿಲ್ಲ. ಆದರೆ, ಈ ಜಲಾಶಯವನ್ನು ಅಭಿವೃದ್ಧಿಪಡಿಸಿದ್ದಲ್ಲಿ ಸುಂದರ ಪ್ರವಾಸಿ ತಾಣವಾಗುವುದರಲ್ಲಿ ಸಂಶಯವಿಲ್ಲ.

ಜು.5ರಂದು ರಕ್ತದಾನ ಶಿಬಿರ

ವಿರಾಜಪೇಟೆ, ಜು.2–ವಿವೇಕ ಜಾಗೃತ ಬಳಗ ಹಾಗೂ ಸರ್ವೋದಯ ಶಿಕ್ಷಣ ಮಹಾವಿದ್ಯಾಲಯ ವತಿಯಿಂದ ಪಟ್ಟಣದ ಪಂಜರುಪೇಟೆಯ ಸರ್ವೋದಯ ಮಹಾವಿದ್ಯಾಲಯದಲ್ಲಿ ಜು.5ರಂದು ರಕ್ತದಾನ ಶಿಬಿರ ಏರ್ಪಡಿಸಲಾಗಿದೆ.

ಅಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 2 ಗಂಟೆ ವರೆಗೆ ಶಿಬಿರ ನಡೆಯಲಿದ್ದು, ಯುವಕ ಹಾಗೂ ಯುವತಿಯರು ಸೇರಿದಂತೆ 60 ವರ್ಷದೊಳಗಿನ ಆರೋಗ್ಯವಂತ ವ್ಯಕ್ತಿಗಳು ಸ್ವಯಂ ಪ್ರೇರಿತವಾಗಿ ರಕ್ತದಾನ ಮಾಡಬಹುದು. ಮಾಹಿತಿಗಾಗಿ ಪ್ರಾಂಶುಪಾಲರಾದ ಡಾ.ವಾಣಿ ಪುಷ್ಪರಾಜ್ (ಮೊ.ಸಂ: 9110473574) ಮತ್ತು ಲೋಕೇಶ್ (ಮೊ.ಸಂ: 9980398152) ಅನ್ನು ಸಂಪರ್ಕಿಸಬಹುದು ಎಂದು ವಿವೇಕ ಜಾಗೃತ ಬಳಗದ ಹೆಚ್.ಡಿ. ಲೋಕೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿರಾಜಪೇಟೆಯಲ್ಲಿ ಅಧಿಕಾರಿಗಳ ಸಭೆ...



ವಿರಾಜಪೇಟೆ ತಾಲೂಕು ವ್ಯಾಪ್ತಿಯಲ್ಲಿ ಹೆಚ್ಚು ಮಳೆ ಆಗುವ ಹಿನ್ನೆಲೆಯಲ್ಲಿ ಪುರಭವನ ಸಭಾಂಗಣದಲ್ಲಿ ತಹಸೀಲ್ದಾರ್ ರಾಮಚಂದ್ರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕಾಳಜಿ ಕೇಂದ್ರದ ಅಧಿಕಾರಿ ಮತ್ತು ಸಿಬ್ಬಂದಿಗೆ ಮುಂಜಾಗ್ರತಾ ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು. ಪುರಸಭೆ ಮುಖ್ಯಾಧಿಕಾರಿ ಚಂದ್ರಕುಮಾರ್, ನೋಡಲ್ ಅಧಿಕಾರಿಗಳು, ಪಿಡಿಓಗಳು, ಶಿಕ್ಷಕರು, ಆರೋಗ್ಯ, ಅರಣ್ಯ, ಪೊಲೀಸ್ ಇಲಾಖೆ, ಸೆಸ್ಕ್ ಅಧಿಕಾರಿಗಳು ಇದ್ದರು.

ಆತ್ಮ ರಕ್ಷಣೆಗೆ ಕರಾಟೆ ಅವಶ್ಯಕ



ಚಾಮರಾಜನಗರದ ವಿಶ್ವ ಹಿಂದೂ ಪರಿಷತ್ ಕಾಲೇಜಿನ ಆವರಣದಲ್ಲಿ ನಡೆದ ಕರಾಟೆ ಪಂದ್ಯಾವಳಿಗೆ ಮಾಜಿ ಶಾಸಕ ಎಸ್.ಬಾಲರಾಜು ಚಾಲನೆ ನೀಡಿದರು.

ಚಾಮರಾಜನಗರ, ಜು.2–ಆತ್ಮ ರಕ್ಷಣೆಗೆ ಕರಾಟೆ ಕಲಿಕೆ ಅವಶ್ಯಕ ಎಂದು ಮಾಜಿ ಶಾಸಕ ಎಸ್.ಬಾಲರಾಜು ಹೇಳಿದರು.

ನಗರದ ವಿಶ್ವ ಹಿಂದೂ ಪರಿಷತ್ ಕಾಲೇಜಿನ ಆವರಣದಲ್ಲಿ ನ್ಯಾಷನಲ್ ಕರಾಟೆ ಅಸೋಸಿಯೇಷನ್ ಆಫ್ ಇಂಡಿಯಾ ವತಿಯಿಂದ ನಡೆದ ರಾಜ್ಯ ಮಟ್ಟದ ಕರಾಟೆ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಕರಾಟೆಯಿಂದ ಸ್ವಯಂ ರಕ್ಷಣೆ ಜೊತೆಗೆ ದೈಹಿಕ, ಮಾನಸಿಕ ಆರೋಗ್ಯ ವೃದ್ಧಿಯಾಗುತ್ತದೆ. ಇಂತಹ ಕ್ರೀಡೆಯಿಂದ ಏಕಾಗ್ರತೆ ಹೆಚ್ಚುತ್ತದೆ. ಪ್ರತಿ ವಿದ್ಯಾರ್ಥಿ ಸಂಕೋಚ ಪಡದೆ ಕರಾಟೆಯನ್ನು ಶ್ರದ್ಧೆಯಿಂದ ಕಲಿಯಬೇಕು ಎಂದರು.

ಇತ್ತೀಚಿನ ದಿನಗಳಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ, ಅತ್ಯಾಚಾರ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಹೆಣ್ಣು ಮಕ್ಕಳು ಕರಾಟೆ ಕಲಿಯಬೇಕು. ಇಂತಹ ಪಂದ್ಯಾವಳಿಯಲ್ಲಿ ಹೆಚ್ಚು ಭಾಗವಹಿಸುವುದರಿಂದ ಉತ್ತೇಜನ ದೊರೆಯುತ್ತದೆ. ಸೋಲು–ಗೆಲುವು ಸಹಜ. ಎರಡನ್ನು ಸಮಾನವಾಗಿ ಸ್ವೀಕರಿಸಬೇಕು ಎಂದು ಕರಾಟೆಪಟುಗಳಿಗೆ ತಿಳಿಸಿದರು.

ಸನ್ಮಾನ: ರಾಜ್ಯ ಕುಂಗ್–ಫು ಕಾರ್ಯದರ್ಶಿ ಸುದರ್ಶನ್, ಜಿಲ್ಲಾ ಕರಾಟೆ ಅಸೋಸಿಯೇಷನ್ ಅಧ್ಯಕ್ಷ ರಾಜೇಂದ್ರ, ಉಪಾಧ್ಯಕ್ಷ ಗಣೇಶ್, ಅಂತಾರಾಷ್ಟ್ರೀಯ ಕಿಕ್ ಬಾಕ್ಸಿಂಗ್ ಚಿನ್ನ ಪದಕ ವಿಜೇತ ಎಂ. ತೇಜಸ್ವಿನಿ, ಬೆಳ್ಳಿ ಪದಕ ವಿಜೇತ ಎಸ್.ಯೋಗೇಶ್, ವುಷು ಚಿನ್ನದ ಪದಕ ವಿಜೇತ ಎನ್.ಹೃತ್ವಿಕ ಅವರನ್ನು ಸನ್ಮಾನಿಸಲಾಯಿತು. ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಆಯೋಜಕ ಅಗರಚಂದ್ರು, ಅಂತಾರಾಷ್ಟ್ರೀಯ ಕರಾಟೆ ತೀರ್ಪುಗಾರ ಶಂಕರ್, ಶಿವದಾಸ್, ನಗರಸಭಾ ಮಾಜಿ ಅಧ್ಯಕ್ಷ ಸುರೇಶ್‌ನಾಯಕ, ಆಮ್ ಆದ್ಮಿ ಪಕ್ಷದ ಕಾರ್ಯದರ್ಶಿ ಸಿದ್ದರಾಜು, ಬಿಜೆಪಿ ಎಸ್‌ಟಿ ಮೋರ್ಚಾ ರಾಜ್ಯ ಕಾರ್ಯಕಾರಿಣಿ ಸದಸ್ಯ ಎಂ.ಎನ್. ರಾಜು, ಯರಿಯೂರು ನಾಗರಾಜು, ವಿಷ್ಣು ಜಿ.ನಾಯಕ್, ನಾಗತ ನೀಶ್, ಶಿಲ್ಪಾದಾಸ್, ಸುದೀಪ್ ಹಾಜರಿದ್ದರು.

ಚುಡಾ ಅಧ್ಯಕ್ಷರಿಗೆ ಸನ್ಮಾನ

ಚಾಮರಾಜನಗರ, ಜು.2–ಚಾಮರಾಜನಗರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಹಮದ್ ಅಸ್ಗರ್ (ಮುನ್ನ) ಅವರನ್ನು ನಗರದ ಮದೀನ ಮಸೀದಿಯ ಧರ್ಮ ಗುರು ಹಾಗೂ ಆಡಳಿತ ಮಂಡಳಿ ಪದಾಧಿಕಾರಿಗಳು ಸನ್ಮಾನಿಸಿದರು. ಸನ್ಮಾನ ಸ್ವೀಕರಿಸಿ ಮಾತನಾಡಿದ ಮಹಮದ್ ಅಸ್ಗರ್, ನನ್ನ ಅಧಿಕಾರವಧಿಯಲ್ಲಿ ನಗರದ ವಿವಿಧ ಬಡಾವಣೆಗಳನ್ನು ಅಭಿವೃದ್ಧಿಪಡಿಸಲಾಗುವುದು ಎಂದರು. ಈ ಸಂದರ್ಭದಲ್ಲಿ ಮದೀನ ಮಸೀದಿ ಅಧ್ಯಕ್ಷ ನಹೀಮುಲ್ಲಹಕ್, ಕಾರ್ಯದರ್ಶಿ ವಸೀಂ, ಮೌಲಾನಾ ಮುಕ್ತಿ ಜಾಫರ್ ಹುಸೇನ್, ಮುಕ್ತಾರ್ ಅಹಮದ್ ಹಾಜರಿದ್ದರು.

ಮುನ್ನೆಚ್ಚರಿಕೆ ಇದ್ದರೆ ವಿದ್ಯುತ್ ಅವಘಡ ತಪ್ಪಿಸಬಹುದು

● ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕ ವೆಂಕಟೇಶ್ ಸಲಹೆ ● ನಗರದಲ್ಲಿ ವಿದ್ಯುತ್ ಸುರಕ್ಷತಾ ಸಪ್ತಾಹ



ಚಾಮರಾಜನಗರದಲ್ಲಿ ನಡೆದ ಸುರಕ್ಷತೆ ಕ್ರಮಗಳ ಕುರಿತ ಕಾರ್ಯಾಗಾರವನ್ನು ಎಚ್.ಎಸ್.ವೆಂಕಟೇಶ್ ಉದ್ಘಾಟಿಸಿದರು.

ಚಾಮರಾಜನಗರ, ಜು.2–ವಿದ್ಯುತ್ ಬಳಕೆ ಹಾಗೂ ಸಂಬಂಧಿಸಿದ ಕೆಲಸ ನಿರ್ವಹಿಸಲು ಸುರಕ್ಷತಾ ವಿಧಾನಗಳನ್ನು ಅನುಸರಿಸಿ, ಮುನ್ನೆಚ್ಚರಿಕೆ ಕೈಗೊಂಡರೆ ಅವಘಡ ತಪ್ಪಿಸಲು ಸಾಧ್ಯ ಎಂದು ಸೆಸ್ಕ್‌ನ ಮೈಸೂರು ವಲಯದ ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕ ಎಚ್.ಎಸ್.ವೆಂಕಟೇಶ್ ತಿಳಿಸಿದರು.

ನಗರದ ಡಾ.ರಾಜ್‌ಕುಮಾರ್ ಭವನದಲ್ಲಿ ವಿದ್ಯುತ್ ಪರಿವೀಕ್ಷಣಾಲಯ ವತಿಯಿಂದ ನಡೆದ ರಾಷ್ಟ್ರೀಯ ವಿದ್ಯುತ್ ಸುರಕ್ಷತಾ ಸಪ್ತಾಹ ಹಾಗೂ ವಿದ್ಯುತ್ ಸುರಕ್ಷತೆಗೆ ಅನುಸರಿಸಬೇಕಾದ ಕ್ರಮಗಳ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ದೇಶದಲ್ಲಿ ವಿದ್ಯುತ್ ಬಳಕೆ ಹೆಚ್ಚಾಗುತ್ತಿದೆ. ದೈನಂದಿನ ಜೀವನ ಸಹ ವಿದ್ಯುತ್ ಉಪಕರಣಗಳ ಬಳಕೆಯಿಂದಲೇ ಆರಂಭವಾಗಬೇಕು. ಸುನಾಮಿ, ಪ್ರವಾಹ ಹಾಗೂ ಭೂಕಂಪದಿಂದ ಸಾವಿರಾರು ಜನ ಮೃತಪಟ್ಟಿರುವ ವರದಿಗಳನ್ನು ನೋಡುತ್ತೇವೆ. ಅದನ್ನು ತಡೆಯುವ ಬಗ್ಗೆ ಬಹಳ ಚರ್ಚೆ ನಡೆಯುತ್ತವೆ. ಕೋಟ್ಯಾಂತರ ರೂ. ವೆಚ್ಚ ಮಾಡಲಾಗುತ್ತದೆ. ಆದರೂ ಸಹ ಅದನ್ನು ಸಮರ್ಪಕವಾಗಿ ನಿರ್ವಹಣೆ ಮಾಡಲು ಸಾಧ್ಯವಾಗುತ್ತಿಲ್ಲ. ಅದೇ ಪ್ರಮಾಣದಲ್ಲಿ ವಿದ್ಯುತ್ ಅವಘಡಗಳಿಂದ ಸಾವಿಗೀಡಾಗುತ್ತಿದ್ದಾರೆ. ಅಷ್ಟೇ ಪ್ರಮಾಣದಲ್ಲಿ ಗ್ರಾಹಕರು ಮೃತಪಡುತ್ತಿದ್ದಾರೆ ಎಂದು ಹೇಳಿದರು.

ಅವಘಡಗಳಿಗೆ ಕಾರಣ ವಿದ್ಯುತ್ ಬಗ್ಗೆ ನಮಗೆ ತಿಳುವಳಿಕೆ ಕೊರತೆ, ಅದು ಕಣ್ಣಿಗೆ ಕಾಣದ ಮತ್ತು ಗಮನಕ್ಕೆ ಬರುವ ಮುಂಚೆಯೇ ಆಪತ್ತು ಬರುತ್ತದೆ. ಹೀಗಾಗಿ ಈ ಬಗ್ಗೆ ಸಾರ್ವಜನಿಕರಲ್ಲಿ ಹೆಚ್ಚಿನ ಜಾಗೃತಿ ಮೂಡಿಸಲು ವಿದ್ಯುತ್ ಪರಿವೀಕ್ಷಣಾ ನಿಗಮ ಕಾರ್ಯಾಗಾರ ಆಯೋಜನೆ ಮಾಡಿದೆ ಎಂದರು.

ಇಂಧನ ಇಲಾಖೆ ಈ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿ, ವಿದ್ಯುತ್ ಅವಘಡಗಳನ್ನು ತಡೆಯುವ ಸಂಬಂಧ ರಾಷ್ಟ್ರೀಯ ವಿದ್ಯುತ್ ಸುರಕ್ಷತಾ ಸಪ್ತಾಹವನ್ನು ಎಂಟು ದಿನ ಆಯೋಜಿಸಿದೆ. ಇಂಧನ ಸಚಿವ ಕೆ.ಜೆ. ಜಾರ್ಜ್ ವಿಧಾನಸೌಧದಲ್ಲಿ ಸಪ್ತಾಹಕ್ಕೆ ಚಾಲನೆ ನೀಡಿದ್ದು, ಗ್ರಾಹಕರು ಮತ್ತು ಸೆಸ್ಕ್ ಸಿಬ್ಬಂದಿಗೆ ಹೆಚ್ಚಿನ ಅರಿವು ಮೂಡಿಸಲು ಕಾರ್ಯಾಗಾರ ಆಯೋಜಿಸಲಾಗಿದೆ ಎಂದು ಪವರ್ ಪಾಯಿಂಟ್ ಮೂಲಕ ಮಾಹಿತಿ ನೀಡಿದರು.

ಕಾರ್ಯಾಗಾರದಲ್ಲಿ ಸೆಸ್ಕ್ ಮೈಸೂರು ವಲಯದ ಉಪಮುಖ್ಯ ವಿದ್ಯುತ್ ಪರಿವೀಕ್ಷಕ ಅಲ್ತಾಫ್ ಉಸ್ತಾದ್ ಜಕಾರ್ಕಿ, ವಿದ್ಯುತ್ ಗುತ್ತಿಗೆದಾರರ ಸಂಘದ ರಾಜ್ಯಾಧ್ಯಕ್ಷ ಸಿ.ರಮೇಶ್, ಜಿಲ್ಲಾಧ್ಯಕ್ಷ ಎಂ.ಜಿ.ಸುರೇಶ್, ಮೈಸೂರು ದಕ್ಷಿಣ ವಿದ್ಯುತ್ ಪರಿವೀಕ್ಷಕಿ ವೀಣಾ, ಮೈಸೂರು ಉತ್ತರ ಪರಿವೀಕ್ಷಕಿ ನೇತ್ರಾವತಿ, ಚಾ.ನಗರ ಉಪ ವಿದ್ಯುತ್ ಪರಿವೀಕ್ಷಕಿ ಎಂ. ಅರ್ಚನಾ, ಸಹಾಯಕ ಕಾರ್ಯ ಪಾಲಕ ಇಂಜಿನಿಯರ್‌ಗಳಾದ ಸುರೇಶ್ ಕುಮಾರ್, ದ್ರುಪದ್, ಮುದ್ದರಾಜ್, ಸ್ಥಳೀಯ ಸಂಸ್ಥೆ ಅಧ್ಯಕ್ಷ ಮುರಳಿಕೃಷ್ಣ ಸ್ವಾಮಿ, ಎಸ್ಸಿ–ಎಸ್ಟಿ ಕಲ್ಯಾಣ ಸಂಸ್ಥೆ ಅಧ್ಯಕ್ಷ ಪ್ರಶಾಂತ್ ಕುಮಾರ್, ಕಿರಿಯ ಇಂಜಿನಿಯರ್ ಎಸ್.ಮಂಜುನಾಥ್, ತಾಲೂಕು ಅಧ್ಯಕ್ಷ ಚಾ.ನಗರ ಗಂಗಾಧರಸ್ವಾಮಿ, ಗುಂಡ್ಲುಪೇಟೆ ಭೀಮಣ್ಣ, ಯಳಂದೂರು ಬಿ. ನಾಗೇಶ್, ಕೊಳ್ಳೇಗಾಲ ನಾಗರಾಜು, ಹನೂರು ಮುತ್ತುರಾಜು, ಇಂಜಿನಿಯರ್‌ಗಳು, ಪವರ್‌ಮನ್‌ಗಳು, ವಿದ್ಯುತ್ ಗುತ್ತಿಗೆದಾರರು ಉಪಸ್ಥಿತರಿದ್ದರು.

ತೋಟಗಾರಿಕೆ ಮಿಷನ್ ಯೋಜನೆಯಡಿ ಸಹಾಯಧನ

ಚಾಮರಾಜನಗರ, ಜು.2– ತೋಟಗಾರಿಕೆ ಮಿಷನ್ ಯೋಜನೆ ಪ್ರದೇಶ ವಿಸ್ತರಣೆ ಕಾರ್ಯಕ್ರಮದಡಿ ಅಂಗಾಂಶ ಕೃಷಿ, ಬಾಳೆ, ಹೈಬ್ರಿಡ್ ತರಕಾರಿ ಹಾಗೂ ಬಿಡಿ ಹೂಗಳಾದ ಚೆಂಡು ಹೂ, ಸೇವಂತಿಗೆ ಕನಕಾಂಬರ ಬೆಳೆಗಳಿಗೆ ಸಹಾಯಧನ ನೀಡಲಾಗುವುದು.

ನೀರು ಸಂಗ್ರಹಣಾ ಘಟಕಕ್ಕೆ 75 ಸಾವಿರ ರೂ., ತೋಟಗಾರಿಕೆ ಬೆಳೆಗಳಿಗೆ ಹೊದಿಕೆ ಅಳವಡಿಸಲು ಪ್ರತಿ ಹೆಕ್ಟೇರ್‌ಗೆ 16 ಸಾವಿರ ರೂ., 20 ಹೆಚ್‌ಪಿ ಮಿನಿ ಟ್ರಾಕ್ಟರ್‌ಗೆ ಸಾಮಾನ್ಯ ವರ್ಗದ ರೈತರಿಗೆ 75 ಸಾವಿರ ರೂ. ಹಾಗೂ ಪರಿಶಿಷ್ಟ ಜಾತಿ, ಪಂಗಡ ರೈತರಿಗೆ 1 ಲಕ್ಷ ರೂ., ಈರುಳ್ಳಿ ಶೇಖರಣಾ ಘಟಕಕ್ಕೆ 87,500 ರೂ. ಹಾಗೂ ಪ್ಯಾಕ್‌ಹೌಸ್ ಘಟಕಕ್ಕೆ 2 ಲಕ್ಷ ರೂ. ಸಹಾಯಧನ ನೀಡಲಾಗುವುದು. ಸೋಲಾರ್ ಪಂಪ್‌ಸೆಟ್‌ಗೆ 1,50,000 ರೂ., ತೋಟಗಾರಿಕೆ ಯಂತ್ರೋಪಕರಣಗಳಿಗೆ ಸಾಮಾನ್ಯ ವರ್ಗದ ರೈತರಿಗೆ ಶೇ.40, ಪ.ಜಾತಿ, ಪ.ಪಂಗಡದ ಮಹಿಳೆಯರಿಗೆ ಶೇ.50,

ತಾಳೆ ಸಸಿಗಳಿಗೆ ಹೆಕ್ಟೇರ್‌ಗೆ 20 ಸಾವಿರ ರೂ., ಅಂತರ ಬೆಳೆ, ಡೀಸೆಲ್ ಪಂಪ್‌ಸೆಟ್, ಕೊಳವೆ ಬಾವಿ, ನೀರು ಸಂಗ್ರಹಣಾ ಘಟಕ, ಎರೆಹುಳು ಘಟಕ, ತಾಳೆ ಹಣ್ಣು ಕಟಾವು ಯಂತ್ರ, ಮೋಟೊರೈಸ್ಡ್ ಚೆಸೆಲ್, ತಾಳೆ ಹಣ್ಣು, ಕಟಾವು ಏಣಿ, ಚಾಫ್ ಕಟ್ಟರ್, ಟ್ರಾಕ್ಟರ್ ಟ್ರಾಲಿಗಳಿಗೆ ಸಹಾಯಧನ ನೀಡಲಾಗುವುದು. ಆಸಕ್ತ ರೈತರು ಸೂಕ್ತ ದಾಖಲಾತಿಗಳೊಂದಿಗೆ ಅರ್ಜಿಯನ್ನು ಕೊಳ್ಳೇಗಾಲದ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಚೇರಿ (ಜಿಲ್ಲಾ ಪಂಚಾಯಿತಿ)ಗೆ ಸಲ್ಲಿಸುವಂತೆ ಪ್ರಕಟಣೆ ತಿಳಿಸಿದೆ.

ಸಭೆ ನಡೆಸುವಂತೆ ಎಡಿಸಿಗೆ ಮನವಿ ಸಲ್ಲಿಕೆ



ಚಾಮರಾಜನಗರ, ಜು.2–ಪರಿಶಿಷ್ಟ ಜಾತಿ ಮತ್ತು ಪಂಗಡದ ಹಿತರಕ್ಷಣಾ ಸಮಿತಿ ಸಭೆ ಕರೆಯಬೇಕು ಹಾಗೂ ಬಿ.ರಾಚಯ್ಯ ಜೋಡಿರಸ್ತೆಗೆ ಮಾಜಿ ರಾಜ್ಯಪಾಲ ಬಿ.ರಾಚಯ್ಯನವರ ನಾಮಫಲಕ ಅಳವಡಿಸುವಂತೆ ಆಗ್ರಹಿಸಿ ರಾಜ್ಯ ದಲಿತ ಸಂಘರ್ಷ ಸಮಿತಿ (ಡಿ.ಜಿ.ಸಾಗರ್ ಬಣ) ಕಾರ್ಯಕರ್ತರು ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ ಅವರಿಗೆ ಮನವಿ ಸಲ್ಲಿಸಿದರು.

ಒಂದು ವರ್ಷದಿಂದ ಪರಿಶಿಷ್ಟ ಜಾತಿ ಮತ್ತು ಪಂಗಡ ಹಿತರಕ್ಷಣಾ ಸಮಿತಿ ಸಭೆಯನ್ನು ಜಿಲ್ಲಾಡಳಿತ ನಡೆಸಿಲ್ಲ. ಆದ್ದರಿಂದ ಸಭೆ ಕರೆದು ಸಮುದಾಯಗಳ ಕುಂದುಕೊರತೆ ಆಲಿಸಿ, ಸಮಸ್ಯೆ ಪರಿಹರಿಸಬೇಕು. ನಗರದ ಬಿ.ರಾಚಯ್ಯ ಜೋಡಿರಸ್ತೆ ವೃತ್ತಕ್ಕೆ ನಾಮಫಲಕ ಅಳವಡಿಸಬೇಕು ಎಂದು ಒತ್ತಾಯಿಸಲಾಗಿದೆ.

ಈ ಸಂದರ್ಭ ದಸಂಸ ಸಂಚಾಲಕ ಸಿ.ಎಂ.ಶಿವಣ್ಣ, ಛಲವಾದಿ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸೋಮಸುಂದರ್, ಡಿಎಸ್‌ಎಸ್‌ನ ಆಟೋ ಉಮೇಶ್, ಶಂಕರಮೂರ್ತಿ ಹನೂರು, ಮಹದೇವಸ್ವಾಮಿ, ಸೋಮಣ್ಣ ಹಾಜರಿದ್ದರು.

ಜು.5, ಹನೂರಿನಲ್ಲಿ ಜನಸ್ಪಂದನಾ ಕಾರ್ಯಕ್ರಮ

ಹನೂರು, ಜು.2–ಸಾರ್ವಜನಿಕರ ಕುಂದುಕೊರತೆ ನಿವಾರಿಸಲು ಜು.5ರಂದು ಬೆಳಗ್ಗೆ 10.30ಕ್ಕೆ ತಾಲೂಕಿನ ಲೊಕ್ಕನಹಳ್ಳಿ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ತಾಲೂಕು ಮಟ್ಟದ ಜನಸ್ಪಂದನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಶಾಸಕ ಮಂಜುನಾಥ್, ಜಿಲ್ಲಾಧಿಕಾರಿ ಶಿಲ್ಪನಾಗ್ ಸೇರಿದಂತೆ ಕಂದಾಯ ಹಾಗೂ ಇತರೆ ಇಲಾಖೆ ಅಧಿಕಾರಿಗಳು ಭಾಗವಹಿಸಲಿದ್ದಾರೆ. ಸಾರ್ವಜನಿಕರು ತಮ್ಮ ಅಹವಾಲುಗಳನ್ನು ನೋಂದಾಯಿಸಿಕೊಂಡು ಸಮಸ್ಯೆಗಳನ್ನು ಇತ್ಯರ್ಥಪಡಿಸಿಕೊಳ್ಳಬಹುದು ಎಂದು ತಹಸೀಲ್ದಾರ್ ಗುರುಪ್ರಸಾದ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರೋಗಿಗಳ ಪಾಲಿಗೆ ವೈದ್ಯರೇ ದೇವರು



ಯಡಪುರ ಸಮೀಪದ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಸಭಾಂಗಣದಲ್ಲಿ ಕೇಕ್ ಕತ್ತರಿಸುವ ಮೂಲಕ ವೈದ್ಯರ ದಿನ ಆಚರಿಸಲಾಯಿತು.

ಚಾಮರಾಜನಗರ, ಜು.2– ಜನರ ಅನಾರೋಗ್ಯ ಗುಣಪಡಿಸಿ, ಮರುಜೀವ ನೀಡುವ ವೈದ್ಯರು ನಿಜಕ್ಕೂ ದೇವರ ಸಮಾನ. ಅವರ ಪಾಲಿಗೆ ದೇವರೇ ಆಗಿರುವ ವೈದ್ಯರನ್ನು ಗೌರವಿಸುವ ದಿನವೇ ವೈದ್ಯರ ದಿನಾಚರಣೆ ಎಂದು ನಗರದ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಡೀನ್ ಮತ್ತು ನಿರ್ದೇಶಕ ಡಾ.ಹೆಚ್.ಜಿ.ಮಂಜುನಾಥ್ ತಿಳಿಸಿದರು.

ನಗರದ ಹೊರವಲಯದ ಯಡಪುರ ಸಮೀಪದ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಸಭಾಂಗಣದಲ್ಲಿ ನಡೆದ ವೈದ್ಯರ ದಿನಾಚರಣೆಯಲ್ಲಿ ಮಾತನಾಡಿದ ಅವರು, ವೈದ್ಯರು ರೋಗಿಗಳ ಪಾಲಿಗೆ ದೇವರ ರೂಪದಲ್ಲೇ ಕಾಣಿಸುತ್ತಾರೆ. ವೈದ್ಯರು ನಿರಂತರವಾಗಿ ಜನರು ಹಾಗೂ ಸಮಾಜದ ಸ್ವಾಸ್ಥ್ಯ ಕಾಪಾಡುವ ಕೆಲಸ ಮಾಡುತ್ತಾರೆ. ಜೊತೆಗೆ ಜನರ ಯೋಗಕ್ಷೇಮದಲ್ಲಿ ಅಮೂಲ್ಯ ಪಾತ್ರ ವಹಿಸುತ್ತಾರೆ ಎಂದು ಹೇಳಿದರು.

ವೈದ್ಯಕೀಯ ಕಾಲೇಜು ಶಿಕ್ಷಕರ ಸಂಘದ ಅಧ್ಯಕ್ಷ ಡಾ.ಮಾರುತಿ, ಪ್ರಾಂಶುಪಾಲ ಗಿರೀಶ್ ಪಾಟೀಲ್, ಡಾ.ರಮೇಶ್, ಪ್ರೊಸೆಸರ್ ವಿಭಾಗದ ಮುಖ್ಯಸ್ಥೆ ಡಾ.ದೇವಕಿ ಮಾತನಾಡಿದರು. ಮುಖ್ಯ ಆಡಳಿತಾಧಿಕಾರಿ ನಂಜುಂಡೇಗೌಡ, ಡಾ.ಅಜಯ್, ವಿವಿಧ ವಿಭಾಗದ ಮುಖ್ಯಸ್ಥರು ಹಾಗೂ ಬೋಧಕರು, ವೈದ್ಯ ವಿದ್ಯಾರ್ಥಿಗಳು ಇದ್ದರು.

ಮೈಸೂರು ಮಿತ್ರ

ರಾಜ್ಯದಲ್ಲೇ ಪ್ರಥಮ ಬಾರಿಗೆ ಲ್ಯಾಪರೊಸ್ಕೋಪಿಕ್ ಶಸ್ತ್ರಚಿಕಿತ್ಸೆಗೆ ಮೈಸೂರಿನ ಅಪೋಲೊ ಬಿಜಿಎಸ್ ಆಸ್ಪತ್ರೆಯಲ್ಲಿ

ಆಪಲ್ ವಿಷನ್ ಪ್ರೊ ಅತ್ಯಾಧುನಿಕ ತಂತ್ರಜ್ಞಾನ ಬಳಕೆ



ಮೈಸೂರು,ಜು.2(ಪಿಎಂ)– ಮೈಸೂರಿನ ಅಪೋಲೊ ಬಿಜಿಎಸ್ ಆಸ್ಪತ್ರೆಯ ಮುಖ್ಯ ಗ್ಯಾಸ್ಟ್ರೋಇಂಟೆಸ್ಟಿನಲ್ ಸರ್ಜನ್ ಡಾ.ಎಸ್.ನೈರುತ್ಯ ಮತ್ತು ಅವರ ತಂಡವು ಕರ್ನಾಟಕದಲ್ಲಿ ಪ್ರಥಮ ಬಾರಿಗೆ ಲ್ಯಾಪರೊಸ್ಕೋಪಿಕ್ ಶಸ್ತ್ರಚಿಕಿತ್ಸೆಯನ್ನು ಆಪಲ್ ವಿಷನ್ ಪ್ರೊ ಎಂಬ ಅತ್ಯಾಧುನಿಕ ಆಗ್ಮೆಂಟೆಡ್ ರಿಯಾಲಿಟಿ ಹೆಡ್‌ಸೆಟ್ ಬಳಸಿ ಯಶಸ್ವಿಯಾಗಿ ನೆರವೇರಿಸಿದೆ.

ವೈದ್ಯಕೀಯ ತಂತ್ರಜ್ಞಾನ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆಯಾಗಿರುವ ಈ ಐತಿಹಾಸಿಕ ಮೈಲಿಗಲ್ಲು, ಸ್ಪೇಶಿಯಲ್ ಕಂಪ್ಯೂಟಿಂಗ್‌ನ ಯುಗವನ್ನು ಜಾರಿಪಡಿಸಿದೆ. ಅಪೋಲೊ ಬಿಜಿಎಸ್ ಆಸ್ಪತ್ರೆಯು ಆಪಲ್ ಪ್ರೊ ವಿಷನ್‌ನಂತಹ ಹೊಸ ತಂತ್ರಜ್ಞಾನವನ್ನು ಶಸ್ತ್ರಚಿಕಿತ್ಸೆಯಲ್ಲಿ ಅಳವಡಿಸಿಕೊಂಡ ವಿಶ್ವದ ಕೆಲವೇ ಕೇಂದ್ರಗಳಲ್ಲಿ ಒಂದು ಎಂಬ ಹೆಗ್ಗಳಿಕೆಗೆ ಭಾಜನವಾಗಿದೆ.

ಲ್ಯಾಪರೊಸ್ಕೋಪಿಕ್ ಸರ್ಜರಿಯನ್ನು ಅದರ ಕನಿಷ್ಠ ಆಕ್ರಮಣಕಾರಿ ವಿಧಾನಕ್ಕಾಗಿ ಉಪಯೋಗಿಸಲಾಗುತ್ತದೆ. ಈ ಶಸ್ತ್ರಚಿಕಿತ್ಸೆಯಲ್ಲಿ ಒಂದು ಸೆಂಟಿಮೀಟರ್ ಗಾತ್ರಕ್ಕಿಂತ ಕಡಿಮೆ ಇರುವ ಸಣ್ಣ ಛೇದನಗಳನ್ನು ಮಾಡಿ, ಅವುಗಳ ಮೂಲಕ ತೆಳುವಾದ ಪ್ರಕಾಶಮಾನವಾದ ಒಂದು ಟ್ಯೂಬ್ ಅನ್ನು ಬಳಸಿಕೊಂಡು ವೀಡಿಯೋ ಕ್ಯಾಮೆರಾವನ್ನು ದೇಹದೊಳಕ್ಕೆ ಸೇರಿಸಲಾಗುತ್ತದೆ. ಇದು ಸಾಂಪ್ರದಾಯಿಕವಾಗಿ ಮಾಡುವ ತೆರೆದ ಅಥವಾ ಓಪನ್ ಸರ್ಜರಿಗೆ ಹೋಲಿಸಿದರೆ ರೋಗಿಗಳಿಗೆ ತ್ವರಿತ ಚೇತರಿಕೆಗೆ ಸಹಕಾರಿ. ಜೊತೆಗೆ ನೋವಿನ ಪ್ರಮಾಣವೂ ಕಡಿಮೆ.

ಆಪಲ್ ವಿಷನ್ ಪ್ರೊ ಶಸ್ತ್ರಚಿಕಿತ್ಸಾ ಕೋಣೆಗೆ ಬಹಳಷ್ಟು ವೈಶಿಷ್ಟ್ಯಗಳನ್ನು ತಂದುಕೊಡುತ್ತದೆ. ಮುಖ್ಯವಾಗಿ ಗ್ಯಾಜೆಟ್ ಅನ್ನು ಧರಿಸಿರುವ ಶಸ್ತ್ರಚಿಕಿತ್ಸಕರ ದೃಷ್ಟಿಕೋನದಲ್ಲಿ ನೇರವಾಗಿ ರೋಗಿಯ ಅಂಗಾಂಗಗಳಿಗೆ ಸಂಬಂಧಪಟ್ಟಿರುವ ಮಾಹಿತಿ ಮತ್ತು ರೋಗಿಯ ದೇಹದೊಳಗಿನ ದೃಶ್ಯ ಎರಡನ್ನೂ ಜೊತೆಯಲ್ಲಿಯೇ ತೋರಿಸುತ್ತದೆ. ಶರೀರದೊಳಗಿನ ಹೆಗ್ಗುರುತುಗಳು, ಶಸ್ತ್ರಚಿಕಿತ್ಸೆಯಲ್ಲಿ ಕೈಗೊಳ್ಳಬಹುದಾದ ನಿರ್ಣಯಗಳು, ಕಾರ್ಯವಿಧಾನದ ಹಂತಗಳು ಹೀಗೆ ಹಲವಾರು ಮುಖ್ಯ ಅಂಶಗಳನ್ನು ಗ್ರಹಿಸಲು ವೈದ್ಯರಿಗೆ ಹೆಚ್ಚು ಅನುಕೂಲ ಕಲ್ಪಿಸುತ್ತದೆ. ಇದರಿಂದ ಶಸ್ತ್ರಚಿಕಿತ್ಸೆ ಸಮಯದಲ್ಲಿ ಪರಿಸ್ಥಿತಿಯ ಅರಿವು ಮತ್ತು ಸ್ಪಷ್ಟ ನಿರ್ಧಾರ ಕೈಗೊಳ್ಳಲು ಸಹಕಾರಿಯಾಗಲಿದೆ.

ಈ ಕುರಿತು ವಿವರಿಸಿದ ಆಸ್ಪತ್ರೆಯ ಮುಖ್ಯ ಗ್ಯಾಸ್ಟ್ರೋಇಂಟೆಸ್ಟಿನಲ್ ಸರ್ಜನ್ ಡಾ.ಎಸ್.ನೈರುತ್ಯ, ನನ್ನ ದೃಷ್ಟಿಗೋಚರದಲ್ಲಿ ನೇರವಾಗಿ ಎಲ್ಲಾ ಅಗತ್ಯ ಮಾಹಿತಿಗಳು ಪ್ರದರ್ಶನವಾದ ಹಿನ್ನೆಲೆಯಲ್ಲಿ ನಾನು ಕಾರ್ಯವಿಧಾನದ ಮೇಲೆ ಸಂಪೂರ್ಣ ಗಮನವನ್ನು ಉಳಿಸಿಕೊಳ್ಳಬಹುದು. ಇದು ಹೆಚ್ಚಿನ ನಿಖರತೆ ಮತ್ತು ಉತ್ತಮ ಫಲಿತಾಂಶಗಳಿಗೆ ಕಾರಣವಾಗುತ್ತದೆ. ಯಾವುದಕ್ಕೂ ಹೋಲಿಸಲಾಗದ ಹೈ ರೆಸಲ್ಯೂಶನ್ ಪ್ರದರ್ಶನ ಮತ್ತು ನಿಖರವಾದ ಟ್ರ್ಯಾಕಿಂಗ್ ಹಿಂದೆಂದೂ ಸಾಧಿಸಲಾಗದ ನಿಷ್ಕೃಷ್ಟತೆ ನೀಡುತ್ತವೆ ಎಂದು ಹೇಳಿದರು. ಇವರೊಂದಿಗೆ ಅಸೋಸಿಯೇಟ್ ಕನ್ಸಲ್ಟೆಂಟ್ ಡಾ.ಸಾಗರ್ ನಾರಾಯಣ್, ಕನ್ಸಲ್ಟೆಂಟ್ ಅನೆಸ್ತೆಥಿಸ್ಟ್ ಡಾ. ಶೀಮಾ ಉಮೇಶ್ ಕೂಡ ಶಸ್ತ್ರಚಿಕಿತ್ಸೆಯಲ್ಲಿ ಪಾಲ್ಗೊಂಡಿದ್ದರು.

ಒಂದನೇ ಪುಟದಿಂದ

ಜೊತೆಗೆ ಅಮಾನತಿನಲ್ಲಿಡಿ...

ಸಾವಿರಾರು ಕೋಟಿ ರೂ. ಆರ್ಥಿಕ ನಷ್ಟ ಉಂಟು ಮಾಡಿರುವ ಅಧಿಕಾರಿಗಳನ್ನು ಸೇವೆಯಿಂದ ಅಮಾನತುಗೊಳಿಸದೇ ನಗರಾಭಿವೃದ್ಧಿ ಸಚಿವ ಭೈರತಿ ಸುರೇಸ್ ಕೇವಲ ವರ್ಗಾವಣೆ ಮಾಡಿರುವುದು ಅವರನ್ನು ರಕ್ಷಿಸುವ ಪ್ರಯತ್ನವಾಗಿದೆ ಎಂದು ಶಾಸಕರು ಆರೋಪಿಸಿದರು.

ಮೈಸೂರಿಗೆ ಬಂದು ಸಭೆ ನಡೆಸಿದ್ದರೂ, ಮುಡಾ ಸದಸ್ಯನಾದ, ಹಗರಣದ ದೂರುದಾರನಾದ ನನಗೆ ಮಾಹಿತಿ ನೀಡದಿರುವುದನ್ನು ಗಮನಿಸಿದರೆ ಇದರ ಹಿಂದಿನ ಉದ್ದೇಶ ಅನುಮಾನ ಮೂಡಿಸಿದೆ ಎಂದ ಶ್ರೀವತ್ಸ, ನನ್ನನ್ನು ಸಭೆಗೆ ಕರೆದಿದ್ದರೆ ಹಗರಣದ ಬಗ್ಗೆ ಪೂರಕ ದಾಖಲೆಗಳನ್ನು ನೀಡುತ್ತಿದ್ದೆ. ಆದರೆ, ಕೇವಲ ಸಭೆ ನಡೆಸಿ ಹೋಗಿರುವುದನ್ನು ಗಮನಿಸಿದಾಗ ಸಚಿವರು ಪ್ರಾಧಿಕಾರದ ಅಧಿಕಾರಿಗಳನ್ನು ರಕ್ಷಿಸುತ್ತಿದ್ದಾರೆ ಎಂದೆನಿಸುತ್ತದೆ ಎಂದರು.

ಕಡತ ತರಿಸಿಕೊಂಡಿದ್ದೇಕೆ?: ಹಗರಣ ಬಯಲಾಗುತ್ತದ್ದಂತೆಯೇ ಮೈಸೂರಿಗೆ ಬಂದು ಸಭೆ ನಡೆಸಿದ ಸಚಿವರು, ಇಲ್ಲೇ ವಾಸ್ತವ್ಯ ಹೂಡಿ ಪರಿಶೀಲಿಸಿ ತನಿಖೆ ಮಾಡಿಸಬಹುದಿತ್ತು ಒಂದು ದಿನ ಮುಂಚಿತವಾಗಿಯೇ ಕಡತಗಳನ್ನು ಬೆಂಗಳೂರಿನ ತಮ್ಮ ಗೆಸ್ಟ್‌ಹೌಸ್‌ಗೆ ತರಿಸಿಕೊಂಡಿದ್ದೇಕೆ. ಅಲ್ಲಿ ನಡೆದಿರುವುದೇನು ಎಂಬುದನ್ನು ಭೈರತಿ ಸುರೇಶ್ ಸ್ಪಷ್ಟಪಡಿಸಬೇಕು ಎಂದರು.

ಸಸ್ಪೆಂಡ್ ಮಾಡಬಹುದಿತ್ತು: ಸರ್ಕಾರದ ಆದೇಶ ಧಿಕ್ಕರಿಸಿ ಕಾಯ್ದೆ ವಿರುದ್ಧವಾಗಿ ನಿವೇಶನ ಹಂಚಿರುವುದು ನಿಮ್ಮ ಕಣ್ಮುಂದೆಯೇ ಇರುವಾಗ ಅಧಿಕಾರಿಗಳನ್ನು ನಿನ್ನೆಯೇ ಸಸ್ಪೆಂಡ್ ಮಾಡಿ ಕ್ರಿಮಿನಲ್ ಪ್ರಾಸಿಕ್ಯೂಷನ್ ಮಾಡಿಸಬೇಕಿತ್ತು. ಅದನ್ನು ಬಿಟ್ಟು ಕೇವಲ ವರ್ಗಾವಣೆ ಮಾಡಿ ಸಚಿವರು ಕಣ್ಣೊರೆಸುವ ನಾಟಕವಾಡುತ್ತಿದ್ದಾರೆ ಎಂದು ಶ್ರೀವತ್ಸ ದೂರಿದರು.

2020ರಿಂದಲೂ ತನಿಖೆಯಾಗಲಿ: ಶೇ. 50:50ರ ಅನುಪಾತದಡಿ 2020ನೇ ಸಾಲಿನಿಂದೀಚೆಗೆ ಹಂಚಿಕೆ ಮಾಡಿರುವ ಎಲ್ಲಾ ನಿವೇಶನಗಳ ಬಗ್ಗೆಯೂ ತನಿಖೆಯಾಗಬೇಕು, ಭೂ ಸ್ವಾಧೀನಕ್ಕೊಳಪಡಿಸದೇ ಪರಿಹಾರ ನೀಡದೇ ಬಳಸಿಕೊಂಡಿರುವ ಭೂಮಿಯ ವಿಸ್ತೀರ್ಣ, ಪರಿಹಾರದ ರೂಪದಲ್ಲಿ ಯಾರ್‍ಯಾರಿಗೆ ಎಲ್ಲಿ ಎಷ್ಟು ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ ಎಂಬುದರ ಬಗ್ಗೆ ಉನ್ನತ ಮಟ್ಟದ ತನಿಖೆಯಾಗಬೇಕು ಎಂದು ಅವರು ಒತ್ತಾಯಿಸಿದರು.

ರಾಜೀನಾಮೆ ನೀಡಬೇಕು: ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ 187 ಕೋಟಿ ರೂ. ಭ್ರಷ್ಟಾಚಾರವಾಗಿದೆ ಎಂದು ಸಚಿವರ ರಾಜೀನಾಮೆ ಪಡೆಯಲಾಗಿದೆ. ಸಂಬಂಧಪಟ್ಟ ಅಧಿಕಾರಿಗಳನ್ನು ಅಮಾನತುಗೊಳಿಸಲಾಗಿದೆ. ಆದರೆ, ಸುಮಾರು 2500 ಕೋಟಿ ರೂ. ಹಗರಣವಾಗಿದ್ದರೂ ಮುಡಾ ಅಧಿಕಾರಿಗಳನ್ನು ಕೇವಲ ವರ್ಗಾವಣೆ ಮಾಡಲಾಗಿದೆ. ಇದರ ನೈತಿಕ ಹೊಣೆ ಹೊತ್ತು ನಗರಾಭಿವೃದ್ಧಿ ಸಚಿವರು ರಾಜೀನಾಮೆ ನೀಡಬೇಕು ಎಂದರು.

ಸದನದಲ್ಲೂ ಹೋರಾಟ: ಮುಡಾ ಹಗರಣ ಸಂಬಂಧ ಈಗಾಗಲೇ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಮುಖೇನ ದೂರು ನೀಡಿದ್ದೇನೆ. ಜುಲೈ 15ರಿಂದ ನಡೆಯುವ ಅಧಿವೇಶನದಲ್ಲೂ ವಿಷಯ ಪ್ರಸ್ತಾಪಿಸಿ ಮುಡಾ ಆಸ್ತಿ ರಕ್ಷಣೆಗೆ ನಿರಂತರ ಹೋರಾಟ ಮಾಡುತ್ತೇನೆ ಎಂದು ಶ್ರೀವತ್ಸ ತಿಳಿಸಿದರು.

ಪಿ.ಎಂ.ಪ್ರಸನ್ನ ದಿಢೀರ್ ರಾಜೀನಾಮೆ

ಪರಿಣಾಮ ಮಹದೇವ್ ಪುತ್ರ ಪ್ರಸನ್ನ ಅವರನ್ನು ಮೈಮುಲ್ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸಲು ನಿರಂತರ ಪ್ರಯತ್ನ ನಡೆಸಿದ್ದರು ಎಂದು ದೂರಲಾಗಿದೆ.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ ರಾಜೀನಾಮೆ ಸಲ್ಲಿಸಿರುವುದನ್ನು ಸ್ಪಷ್ಟಪಡಿಸಿದ ಪಿ.ಎಂ.ಪ್ರಸನ್ನ, ವೈಯಕ್ತಿಕ ದ್ವೇಷದಿಂದ ಸಚಿವ ಕೆ.ವೆಂಕಟೇಶ್ ಅವರು ನಿರಂತರವಾಗಿ ತೊಂದರೆ ಕೊಡುತ್ತಿದ್ದಾರೆ. ಅಧ್ಯಕ್ಷ ಸ್ಥಾನದಿಂದ ತನನ್ನು ಕೆಳಗಿಳಿಸುವಂತೆ ನಿರ್ದೇಶಕರುಗಳ ಮೇಲೆ ಒತ್ತಡ ಹೇರುತ್ತಿದ್ದರು. ಆ ಪ್ರಯತ್ನ ಫಲಿಸದಿದ್ದಾಗ ವಾಸಸ್ಥಳ ದೃಢೀಕರಣ ವಿಚಾರವಾಗಿ ಪದೇ ಪದೆ ನೋಟಿಸ್ ಕೊಡಿಸುವುದು, ಮೈಮುಲ್ ಮೇಲೆ ತನಿಖೆಗೆ ಆದೇಶ ಮಾಡಿಸುತ್ತೇನೆ ಎಂದು ಹೇಳಿ ಗೊಂದಲ ಸೃಷ್ಟಿಸುವ ಕೆಲಸ ಮಾಡಿದ್ದಾರೆ. ಅವರ ದ್ವೇಷ ರಾಜಕಾರಣವನ್ನು ಎದುರಿಸಲು ನಾನು ಸಿದ್ಧನಿದ್ದೇನೆ. ಆದರೆ ಈ ಎಲ್ಲಾ ಬೆಳವಣಿಗೆಯಿಂದ ರೈತರಿಗೆ ಬೆನ್ನೆಲುಬಾಗಿರುವ ಮೈಮುಲ್ ಸಂಸ್ಥೆಗೆ ಯಾವುದೇ ತೊಂದರೆಯಾಗಬಾರದು ಎಂಬ ಏಕೈಕ ಉದ್ದೇಶದಿಂದ ರಾಜೀನಾಮೆ ನೀಡಿದ್ದೇನೆ ಎಂದು ತಿಳಿಸಿದರು. ಶಾಸಕ ಜಿ.ಟಿ.ದೇವೇಗೌಡರ ಬಣದಲ್ಲಿ ಗುರುತಿಸಿಕೊಂಡಿದ್ದ ಪಿ.ಎಂ. ಪ್ರಸನ್ನ 2021ರಲ್ಲಿ ಮೈಮುಲ್ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದರು. ಸಚಿವ ಕೆ.ವೆಂಕಟೇಶ್ ಅವರು 6 ತಿಂಗಳಲ್ಲಿ 24 ನೋಟಿಸ್ ಕೊಡಿಸಿ, ಕಿರುಕುಳ ನೀಡುತ್ತಿದ್ದಾರೆ. ತಮ್ಮ ಪುತ್ರನ ಭವಿಷ್ಯಕ್ಕಾಗಿ ಹೀಗೆ ಮಾಡುತ್ತಿದ್ದಾರೆ ಎಂದು ವಾರದ ಹಿಂದೆ ಆರೋಪ ಮಾಡಿದ್ದ ಪಿ.ಎಂ.ಪ್ರಸನ್ನ, ಇದೀಗ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ. ಆದರೆ ರಾಜೀನಾಮೆ ಅಂಗೀಕಾರವಾಗಿಲ್ಲ. ಮುಂದಿನ ಬೆಳವಣಿಗೆ ಕುತೂಹಲ ಸೃಷ್ಟಿಸಿದೆ.

ಮರಗಳಿಗೆ ಮಾರಕವಾಗಿ ಪರಿಣಮಿಸಿದ ಆಧುನಿಕ ಫುಟ್‌ಪಾತ್..!


● ಯಾದವಗಿರಿಯಲ್ಲಿ ಮಳೆ ನೀರು ಭೂಮಿ ಸೇರಲು ಅವಕಾಶವೇ ಇಲ್ಲ ● ನೀರೆಲ್ಲಾ ಮೇದರ್ ಬ್ಲಾಕ್‌ಗೆ ಹರಿದು ನೆರೆ ಬರುತ್ತಿದೆ



ಯಾದವಗಿರಿಯ ವಿವೇಕಾನಂದ ರಸ್ತೆಯಲ್ಲಿ ಭೂಮಿಯಲ್ಲಿ ಮಳೆ ನೀರು ಇಂಗಲು ಅವಕಾಶ ಆಗದಂತೆ ಫುಟ್‌ಪಾತ್ ನಿರ್ಮಾಣ ಮಾಡಿರುವುದು.



ಯಾದವಗಿರಿಯ ಪರಮಹಂಸ ರಸ್ತೆಯ 6ನೇ ಮುಖ್ಯ ರಸ್ತೆಯಲ್ಲಿ ಮರವೊಂದರ ಕಾಂಕ್ರಿಟ್ ಕಟ್ಟೆಯನ್ನು ಕಸದ ತೊಟ್ಟಿ ಮಾದರಿಯಲ್ಲಿ ಬಗೆಬಗೆಯ ತ್ಯಾಜ್ಯಗಳನ್ನು ಸುರಿದಿರುವುದು.



ರೈಲ್ವೆ ಅಧಿಕಾರಿಗಳ ಕಾಲೋನಿ ಕಾಂಪೌಂಡ್‌ನಲ್ಲಿ ದುಸ್ಥಿತಿಯಲ್ಲಿರುವ ಬೇವಿನ ಮರ.

ಮೈಸೂರು,ಜು.2(ಪಿಎಂ)–ಟೈಲ್ಸ್, ಕಾಂಕ್ರೀಟ್, ಡಾಂಬರ್‌ನಿಂದ ಮರಗಳಿಗೆ ಉಳಿಗಾಲವಿಲ್ಲ. ಮೈಸೂರಿನ ಯಾದವಗಿರಿಯ ವಿವೇಕಾನಂದ ರಸ್ತೆಯ ಉದ್ದಕ್ಕೂ ಮರಗಳಿಗೆ ಮಾರಕವಾಗಿ ಕಾಮಗಾರಿ ನಡೆದಿದೆ. ಡಾಂಬರೀಕರಣ ಅನಿವಾರ್ಯ. ಆದರೆ ಫುಟ್‌ಪಾತ್ ಅನ್ನು ಹೀಗೆ ಮುಚ್ಚಿದರೆ ಮರಗಳ ಬೇರಿಗೆ ನೀರು ಲಭಿಸುವುದಾದರೂ ಹೇಗೆ?

ಇದು ಕೇವಲ ಮೈಸೂರಿನ ಯಾದವಗಿರಿಗೆ ಸೀಮಿತವಲ್ಲ, ಮೈಸೂರಿನ ಇತರ ಭಾಗಗಳೂ ಮಾತ್ರವಲ್ಲದೆ, ಬೇರೆ ನಗರ, ಪಟ್ಟಣಗಳಲ್ಲೂ ಬಹುತೇಕ ಇದೇ ದುಸ್ಥಿತಿ. ಇದಕ್ಕೆಲ್ಲಾ ಅವೈಜ್ಞಾನಿಕ ರೀತಿಯ ಅಭಿವೃದ್ಧಿ ಕಾರಣ. ಇದಿಷ್ಟೇ ಅಲ್ಲ ಫುಟ್‌ಪಾತ್, ಚರಂಡಿ ಕಾಮಗಾರಿ ಹಾಗೂ ವಿವಿಧ ಕೇಬಲ್ ಅಳವಡಿಕೆಗಾಗಿ ನೆಲ ಅಗೆಯುವ ಸಂದರ್ಭದಲ್ಲೂ ಮರಗಳ ಬೇರುಗಳಿಗೆ ಹಾನಿ ಮಾಡುವುದು ನಡೆಯುತ್ತಲೇ ಇದೆ.

ಯಾದವಗಿರಿಯಲ್ಲಿ ಇಂತಹ ಅವೈಜ್ಞಾನಿಕ ಅಭಿವೃದ್ಧಿ ಕ್ರಮದಿಂದ ಮರಗಳ ಬೇರು ಮಳೆ ನೀರನ್ನು ಹೀರಲಾಗದ ಸ್ಥಿತಿ ಉಂಟಾಗಿದೆ. ಒಟ್ಟಾರೆ ರಸ್ತೆ ಹಾಗೂ ಫುಟ್‌ಪಾತ್ ಎಲ್ಲಿಯೂ ಮಳೆ ನೀರು ಭೂಮಿ ಸೇರಲು ಅವಕಾಶವಿಲ್ಲದೆ, ಇಲ್ಲಿಗೆ ಸಮೀಪದ ಮೇದರ್ ಬ್ಲಾಕ್ ಹಾಗೂ ಬಂಬೂ ಬಜಾರ್ ಪ್ರದೇಶಗಳು ಮಳೆಯಾದಾಗ ನೆರೆ ಪರಿಸ್ಥಿತಿಗೆ ತುತ್ತಾಗುತ್ತಿವೆ ಎನ್ನುತ್ತಾರೆ ಯಾದವಗಿರಿ ನಿವಾಸಿಗಳು ಹಾಗೂ ಪರಿಸರ ಪ್ರೇಮಿಗಳು.

ಮರಗಳ ಬುಡಕ್ಕೆ ಇಂಟರ್‌ಲಾಕ್ ಟೈಲ್ಸ್, ಸಿಮೆಂಟ್ ಟೈಲ್ಸ್ ಹಾಕಿ ಫುಟ್‌ಪಾತ್ ನಿರ್ಮಿಸಿದ್ದರಿಂದ ಅವುಗಳ ಬೆಳವಣಿಗೆಗೆ ಮಾರಕವಾಗಿ ಪರಿಣಮಿಸಿದೆ. ಅದರ ದುಷ್ಪರಿಣಾಮ ತತ್‌ಕ್ಷಣಕ್ಕೆ ಗೊತ್ತಾಗುವುದಿಲ್ಲ. ಆದರೆ ಮಳೆ–ಗಾಳಿ ಸಂದರ್ಭದಲ್ಲಿ ಅವುಗಳು ನೆಲಕ್ಕುರಳಿದಾಗ ಬುಡ ಭದ್ರವಾಗಿಲ್ಲದ್ದು ಗೋಚರಿಸುತ್ತದೆ. ಇಂತಹ ಅವೈಜ್ಞಾನಿಕ ಅಭಿವೃದ್ಧಿ ಮಾದರಿಯ ಪರಿಣಾಮ ಅವುಗಳ ಬುಡಕ್ಕೆ ಮಳೆ ನೀರು ಸೇರುತ್ತಿಲ್ಲ. ಹೀಗಾಗಿ ಬೇರುಗಳಿಗೆ ನೀರು ದೊರೆಯದೇ ಅವು ರೋಗಗ್ರಸ್ತಗೊಳ್ಳುತ್ತಿವೆ.

ಇದೇ ರಸ್ತೆ ಬದಿಯ ಬೇವಿನಮರವೊಂದರ ದುಸ್ಥಿತಿ ಹೇಳಲಾಗದ ಪರಿಸ್ಥಿತಿಯಲ್ಲಿದೆ. ಅದರ ಬೇರನ್ನು ಸಂಪೂರ್ಣ ಕಾಂಕ್ರೀಟ್ ಆವರಿಸುವಂತೆ ಮಾಡಲಾಗಿದೆ. ರೈಲ್ವೆ ಅಧಿಕಾರಿಗಳ ಕಾಲೋನಿಯ ಕಾಂಪೌಂಡ್‌ಗೆ ಈ ಮರ ಹೊಂದಿಕೊಂಡಿದ್ದು, ಕಾಂಪೌಂಡ್ ಗೋಡೆಯನ್ನು ನಿರ್ಮಾಣ ಮಾಡುವಾಗ ಸೈಜುಗಲ್ಲು ಒತ್ತಡವಾಗಿರುವುದು ಅಲ್ಲಿ ನೋಡಿದ ಯಾರಿಗಾದರೂ ಗೋಚರಿಸುತ್ತದೆ. ಇದೇ ರಸ್ತೆ ಬದಿಯ ಮರವೊಂದಕ್ಕೆ ಕೇಬಲ್‌ಗಳು ಸುತ್ತುವರಿದಿದ್ದು (ಆರ್.ಕೆ.ನಾರಾಯಣ್ ಮನೆ ಎದುರು), ಪಾದಚಾರಿಗಳು ಎಚ್ಚರ ತಪ್ಪಿದರೆ ಕಾಲಿಗೆ ಕೇಬಲ್ ಸಿಲುಕಿ ಬೀಳುವುದಂತೂ ಗ್ಯಾರಂಟಿ.

ಇಲ್ಲಿನ ಮತ್ತೊಂದು ಬೇವಿನಮರದ ಬುಡದಲ್ಲಿ ಯಾವ ಪರಿಯಲ್ಲಿ ಟೈಲ್ಸ್ ಅಳವಡಿಸಲಾಗಿದೆ ಎಂದರೆ ಒಂದಿಂಚು ಬಿಡದೇ ಪೂರ್ಣ ಪ್ರಮಾಣದಲ್ಲಿ ಟೈಲ್ಸ್ ಹಾಗೂ ಕಾಂಕ್ರೀಟ್ ಹಾಕಲಾಗಿದೆ. ಇಲ್ಲಿನ ಯಾವ ಮರದ ಬುಡದಲ್ಲೂ ವೈಜ್ಞಾನಿಕವಾಗಿ ಸ್ಥಳಾವಕಾಶ ಮಾಡಿಲ್ಲ. ಇದರಿಂದ ಅವುಗಳ ಬುಡ ಹಾಗೂ ಬೇರು ಸಡಿಲಗೊಳ್ಳುವುದರಿಂದ ಎದುರಾಗುವ ದುಷ್ಪರಿಣಾಮ ಈಗಲ್ಲದಿದ್ದರೂ ಮುಂದೊಂದು ದಿನ ಅರಿವಿಗೆ ಬರಲಿದೆ.

ಜೊತೆಗೆ ಇದೇ ರಸ್ತೆಯಲ್ಲಿರುವ ಸಣ್ಣ ಪಾರ್ಕ್‌ನಲ್ಲಿಯೂ ಹೆಚ್ಚಿನ ಪ್ರಮಾಣದಲ್ಲಿ ಇಂಟರ್‌ಲಾಕ್ ಟೈಲ್ಸ್ ಅಳವಡಿಸಿ ಮಳೆ ನೀರು ಭೂಮಿ ಸೇರಲು ಅವಕಾಶವೇ ಇಲ್ಲದಂತೆ ಮಾಡಲಾಗಿದೆ. ಇನ್ನು ಈ ರಸ್ತೆಯ ಜಿಲ್ಲಾ ಹಾಪ್‌ಕಾಮ್ಸ್ ಮಳಿಗೆ ಎದುರು ಫುಟ್‌ಪಾತ್ ಸೇರಿದಂತೆ ವಿವಿಧ ಕಾಮಗಾರಿಗಾಗಿ ಗುಂಡಿ ತೆಗೆದು ಮಣ್ಣನ್ನು ಮೂರು ಗುಡ್ಡೆ ಹಾಕಿದ್ದು, ಈ ಪೈಕಿ ಎರಡರಲ್ಲಿ ಗಿಡಗಂಟಿ ಬೆಳೆದು ನಿಂತಿವೆ. ಫುಟ್‌ಪಾತ್ ಪಕ್ಕದಲ್ಲೇ ಈ ಪುಟ್ಟ ಬೆಟ್ಟ ಗುಡ್ಡಗಳನ್ನು ಕಾಮಗಾರಿ ಮಾಡುವವರು ನಿರ್ಮಾಣ ಮಾಡಿಟ್ಟಿದ್ದಾರೆ! ಒಟ್ಟಾರೆ ಪಾದಚಾರಿಗಳು ಹಾಗೂ ವಾಹನ ಸವಾರರು ಇದರಿಂದ ಕಿರಿಕಿರಿ ಅನುಭವಿಸುವಂತಾಗಿದೆ.

ಈ ಹಾಪ್‌ಕಾಮ್ಸ್ ಮಳಿಗೆಯ ಹಿಂಭಾಗದಲ್ಲಿ (ಪರಮಹಂಸ ರಸ್ತೆ) ಇಂಟರ್‌ಲಾಕ್ ಟೈಲ್ಸ್‌ಗಳನ್ನು ಜೋಡಿಸಿಟ್ಟಿದ್ದು, ಅವುಗಳನ್ನು ಅಳವಡಿಸಲು ಇಲ್ಲಿ ಫುಟ್‌ಪಾತ್‌ನಲ್ಲಿ ಜಲ್ಲಿಕಲ್ಲು ಹಾಕಿ ಕಾಂಕ್ರೀಟಿಕರಣ ಮಾಡಲಾಗಿದೆ. ಇಂತಹ ಅವೈಜ್ಞಾನಿಕ ಕ್ರಮದಿಂದಲೇ ಇಲ್ಲಿ ನೀರು ಇಂಗಲಾಗದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಪರಿಸರವಾದಿಗಳು ಕಿಡಿಕಾರಿದ್ದಾರೆ. ಇಂಟರ್‌ಲ್ಯಾಕ್ ಟೈಲ್ಸ್‌ಗಳನ್ನು ಅಳವಡಿಸುವ ಮುನ್ನ ನೆಲದ ಮೇಲೆ ಕಾಂಕ್ರೀಟ್ ಹಾಕಬಾರದು. ಬದಲಿಗೆ 'ಎಂ ಸ್ಯಾಂಡ್' ಹಾಕಿ ಇಂಟರ್‌ಲಾಕ್ ಟೈಲ್ಸ್‌ಗಳನ್ನು ಅಳವಡಿಸಬೇಕು. ಇದರಿಂದ ನೀರು ಇಂಗಲು ಅವಕಾಶ ದೊರೆಯುತ್ತದೆ ಎನ್ನುತ್ತಾರೆ ಪರಿಸರವಾದಿಗಳು.

ಕಳೆದ 2 ವರ್ಷಗಳಿಂದ ಯಾದವಗಿರಿಯ ಎಲ್ಲೆಡೆಯೂ ಟೈಲ್ಸ್, ಕಾಂಕ್ರೀಟ್ ಹಾಗೂ ಡಾಂಬರು ಹಾಕಿದ್ದು, ಇದರಿಂದ ಮಳೆ ನೀರು ಭೂಮಿಯಲ್ಲಿ ಇಂಗಲಾಗದ ಸನ್ನಿವೇಶ ನಿರ್ಮಾಣವಾಗಿದೆ. ಇನ್ನು ಇಲ್ಲಿನ ವಿವೇಕಾನಂದ ರಸ್ತೆಯ ಫುಟ್‌ಪಾತ್‌ನ ಬಹುತೇಕ ಕಡೆಯಲ್ಲಿ ಪಾದಚಾರಿಗಳು ಸಂಚರಿಸಲು ಯೋಗ್ಯವಾದ ಸ್ಥಿತಿ ಇಲ್ಲವೆಂದೇ ಹೇಳಬಹುದು. ಹಲವೆಡೆ ವಿದ್ಯುತ್ ಕಂಬಗಳನ್ನು ಸೂಕ್ತ ರೀತಿಯಲ್ಲಿ ಅಳವಡಿಸಿಲ್ಲ. ಜೊತೆಗೆ ಟ್ರಾನ್ಸ್‌ಫಾರ್ಮರ್‌ಗಳನ್ನು ಸುರಕ್ಷಿತವಾಗಿ ಅಳವಡಿಸಿಲ್ಲ. ಇಲ್ಲೆಲ್ಲಾ ಕೇಬಲ್‌ಗಳು ಜೋತಾಡುತ್ತಿದ್ದು, ನೋಡಿದರೆ ಏನಾದರೂ ಅಪಾಯವಾದೀತು ಎಂಬ ಭಯ ಆವರಿಸುತ್ತದೆ ಎನ್ನುತ್ತಾರೆ ಇಲ್ಲಿನ ನಿವಾಸಿಗಳು.

ಫುಟ್‌ಪಾತ್‌ನಲ್ಲಿರುವ ಮರಗಳ ಬುಡದಲ್ಲಿ 6X6 ಅಡಿ ಸುತ್ತಳತೆಯಲ್ಲಿ ಯಾವುದೇ ಕಾಮಗಾರಿ ಮಾಡದೇ ನೀರು ಇಂಗಲು ಸ್ಥಳಾವಕಾಶ ನೀಡಬೇಕೆಂದು ಹೈಕೋರ್ಟ್ ಮಾರ್ಗಸೂಚಿ ಸಹ ಇದೆ. ಆದರೆ ಅದರ ಪಾಲನೆ ಸಮರ್ಪಕವಾಗಿ ಆಗುತ್ತಿಲ್ಲ ಎಂದು ಪರಿಸರವಾದಿಗಳು ಆಕ್ಷೇಪ ವ್ಯಕ್ತಪಡಿಸಿದರು. ಜೊತೆಗೆ ಯಾವುದೇ ರೀತಿಯ ಟೈಲ್ಸ್ ಬಳಸಿದರೂ ಅವುಗಳಲ್ಲಿ ಎರಡು ರಂಧ್ರ ಇದ್ದರೆ ನೀರು ಇಂಗಲು ಅವಕಾಶ ಆಗುತ್ತದೆ. ಈ ವಿಧಾನ ಸಹ ಬಳಸಿಕೊಳ್ಳುತ್ತಿಲ್ಲ. ಮರ, ಭೂಮಿ ಸೇರಿದಂತೆ ಒಟ್ಟಾರೆ ಪ್ರಕೃತಿಗೆ ಈ ರೀತಿ ಶೋಷಣೆ ಮಾಡುವುದು ನ್ಯಾಯವೇ? ಇದು ನಮಗೂ ಮಾರಕವಲ್ಲವೇ? ಎಂಬುದು ಪರಿಸರವಾದಿಗಳ ಪ್ರಶ್ನೆಯಾಗಿದೆ. ಈಗಲಾದರೂ ಪರಿಸರಕ್ಕೆ ಮಾರಕವಾಗುವ ಇಂತಹ ವ್ಯವಸ್ಥೆಯನ್ನು ಮಾರ್ಪಾಡು ಮಾಡಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಮಳೆ ನೀರು ಇಂಗುಗುಂಡಿ ವ್ಯವಸ್ಥೆ (ರೀಚಾರ್ಜ್ ಪಿಟ್) ಅಳವಡಿಸಿಕೊಳ್ಳುವುದು ಅಗತ್ಯ. ಈ ವ್ಯವಸ್ಥೆಯಲ್ಲಿ ಫುಟ್‌ಪಾತ್‌ನಲ್ಲಿ 100 ಅಡಿ ಅಂತರದಲ್ಲಿ ಒಂದರಂತೆ 4 ಅಡಿ ಆಳದ ಗುಂಡಿ ಮಾಡಿ ಅದರೊಳಗೆ ಕಲ್ಲುಗಳನ್ನು ತುಂಬಲಾಗುತ್ತದೆ. ಆದರೆ ಕಾಂಕ್ರೀಟೀಕರಣ ಮಾಡುವುದಿಲ್ಲ. ಇದರಿಂದ ನೀರು ಹರಿದು ಬಂದು ಗುಂಡಿಯೊಳಗೆ ಇಳಿದು ಬಳಿಕ ಭೂಮಿಯಲ್ಲಿ ಇಂಗುತ್ತದೆ. ಚರಂಡಿಯೊಳಗೂ ಈ ವ್ಯವಸ್ಥೆ ಮಾಡಬಹುದು. ಈ ವ್ಯವಸ್ಥೆಯಿಂದ ಮಳೆ ನೀರು ಭೂಮಿಯಲ್ಲಿ ಇಂಗಲು ಸಾಧ್ಯವಾಗಲಿದೆ. ಗುಂಡಿಯಲ್ಲಿ ಕಲ್ಲುಗಳು ಮೇಲ್ಭಾಗದವರೆಗೂ ಭರ್ತಿ ಇರುವ ಕಾರಣ ಯಾರು ಬಿದ್ದು ಅನಾಹುತ ಆಗಲೂ ಅವಕಾಶ ಇರುವುದಿಲ್ಲ. ಈ ವ್ಯವಸ್ಥೆ ಮಳೆ ನೀರು ಕೊಯ್ಲುವಿನ ಮತ್ತೊಂದು ವಿಧಾನ ಎನ್ನುತ್ತಾರೆ ಪರಿಸರವಾದಿಗಳು.



ಒಂದಿಂಚು ನೆಲ ಬಿಡದೇ ಮರದ ಬುಡಕ್ಕೆ ಟೈಲ್ಸ್ ಅಳವಡಿಸಿರುವುದು.

ನಾನು ಯಾವುದಕ್ಕೂ ಎದೆಗುಂದಲ್ಲ

ಶಾಸಕ ಹೆಚ್.ಡಿ.ರೇವಣ್ಣ ಪ್ರತಿಕ್ರಿಯೆ



ಮೈಸೂರಿನಲ್ಲಿ ಮಂಗಳವಾರ ಶಾಸಕ ಹೆಚ್.ಡಿ.ರೇವಣ್ಣ ಮಾಧ್ಯಮಗಳೊಂದಿಗೆ ಮಾತನಾಡಿದರು. ಎಂಎಲ್‌ಸಿ ಕೆ.ವಿವೇಕಾನಂದ, ಮಾಜಿ ಕಾರ್ಪೋರೇಟರ್ ಸಾತ್ವಿಕ್ ಸಂದೇಶ್ ಸ್ವಾಮಿ ಮತ್ತಿತರರಿದ್ದರು.

ಮೈಸೂರು, ಜು.2(ಎಸ್‌ಬಿಡಿ)– ನಾನು ಯಾವುದಕ್ಕೂ ಎದೆಗುಂದುವುದಿಲ್ಲ. ಎಲ್ಲದಕ್ಕೂ ಕಾಲವೇ ಉತ್ತರ ನೀಡಲಿದೆ ಎಂದು ಶಾಸಕ ಹೆಚ್.ಡಿ.ರೇವಣ್ಣ ಹೇಳಿದರು.

ಮಂಗಳವಾರ ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ಆಗಮಿಸಿ, ದೇವಿಯ ದರ್ಶನ ಪಡೆದ ಬಳಿಕ ನಗರದ ಖಾಸಗಿ ಹೋಟೆಲ್‌ನಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಪುತ್ರರಾದ ಪ್ರಜ್ವಲ್ ಮತ್ತು ಸೂರಜ್ ವಿರುದ್ಧದ ಪ್ರಕರಣಗಳು ನ್ಯಾಯಾಲಯದ ಮುಂದಿವೆ. ಹಾಗಾಗಿ ಈ ಬಗ್ಗೆ ಮಾತನಾಡುವುದು ಸೂಕ್ತವಲ್ಲ. ಕಾಲ ಬಂದಾಗ ಸತ್ಯವನ್ನು ಜನತೆಯ ಮುಂದಿಡುತ್ತೇನೆ ಎಂದರು.

ನಾನು 40 ವರ್ಷದಿಂದ ರಾಜಕೀಯ ಕ್ಷೇತ್ರದಲ್ಲಿದ್ದೇನೆ. 15 ವರ್ಷ ಜಿಪಂ ಸದಸ್ಯನಾಗಿದ್ದೆ ದೇವರು ಹಾಗೂ ಜನ ಇಲ್ಲಿಯವರೆಗೆ ನನ್ನನ್ನು ಕರೆತಂದಿದ್ದಾರೆ. ನಾನು ಯಾವುದಕ್ಕೂ, ಯಾವತ್ತೂ ಎಂದೆಗುಂದುವುದಿಲ್ಲ. ಎಲ್ಲದಕ್ಕೂ ಕಾಲವೇ ಉತ್ತರ ನೀಡಲಿದೆ. ನಮಗೆ ಸದ್ಯಕ್ಕೆ ದೇವರು ಬಿಟ್ಟರೇ ಇನ್ನ್ಯಾರು. ಎಂತೆಂಥವರಿಗೋ ಕಷ್ಟ ಬರುತ್ತದೆ, ಅಂತಹದರಲ್ಲಿ ನಮ್ಮದೇನಿದೆ?. ನ್ಯಾಯಾಲಯ ಹಾಗೂ ದೇವರ ಮೇಲೆ ನಂಬಿಕೆ ಇದೆ ಎಂದು ಹೇಳಿದರು.

ನಾನು ಸದ್ಯಕ್ಕೆ ಜೈಲಿನಲ್ಲಿರುವ ಪ್ರಜ್ವಲ್ ಭೇಟಿಗೆ ಹೋಗುವುದಿಲ್ಲ. ನಾನು ಭೇಟಿ ಮಾಡಿದರೆ ಏನಾದರೂ ಹೇಳಿಕೊಟ್ಟಿರಬಹುದು ಎನ್ನುತ್ತಾರೆ. ಸದ್ಯಕ್ಕೆ ಯಾರನ್ನೂ ಭೇಟಿ ಮಾಡುವುದಿಲ್ಲ. ನಿನ್ನೆ ಮಗ ಅನ್ನೋ ಮಮತೆಯಿಂದ ನನ್ನ ಪತ್ನಿ ಹೋಗಿದ್ದರು. ತಾಯಿ– ಮಗ ಏನು ಮಾತನಾಡಿದರೋ ನನಗೆ ಗೊತ್ತಿಲ್ಲ. ಅದನ್ನ ಕೇಳಲು ಸಹ ಹೋಗಿಲ್ಲ. ಆದರೆ ಸೂರಜ್ ಮಹಾನ್ ದೈವಭಕ್ತ. ಅವನು ಬೇಗ ಹೊರ ಬರುತ್ತಾನೆ ಎಂಬ ನಂಬಿಕೆ ಇದೆ ಎಂದರು.

ನಾಳೆ ಕ್ಯಾನ್ಸರ್ ಉಚಿತ ತಪಾಸಣಾ ಶಿಬಿರ

ಮೈಸೂರು, ಜು.2–ಮೈಸೂರಿನ ಲಕ್ಷ್ಮೀಪುರಂನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಜು.4ರಂದು ಬೆಳಗ್ಗೆ 10ರಿಂದ ರಾತ್ರಿ 8 ಗಂಟೆಯವರೆಗೆ ಕ್ಯಾನ್ಸರ್ ಉಚಿತ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಒಂದು ತಿಂಗಳಿಗೂ ಮೇಲ್ಪಟ್ಟ ವಾಸಿಯಾಗದ ಗಾಯ, ರಕ್ತಸ್ರಾವ, ಊತ, ಗಡಸುತನ, ನುಂಗುವಾಗಿನ ತೊಂದರೆ, ಗಂಟಲಲ್ಲಿ ಉರಿತ ಅಥವಾ ತಡೆತ, ಧ್ವನಿ ಬದ ಲಾವಣೆ ಇರುವ ರೋಗಿಗಳು ಶಿಬಿರದಲ್ಲಿ ಪಾಲ್ಗೊಳ್ಳಬಹುದು. ಹೆಚ್ಚಿನ ಮಾಹಿತಿಗೆ ದೂ. 0821–4259259 ಸಂಪರ್ಕಿಸಬಹುದು.

ಶಾಸಕ ಹರೀಶ್‌ಗೌಡರ ಸೂಚನೆ; ವಿಜಯನಗರ ಎರಡನೇ ಹಂತಕ್ಕೆ ಸಮರ್ಪಕ ಬಸ್ ಸೌಕರ್ಯ



ಮೈಸೂರು, ಜು.2(ಎಸ್‌ಬಿಡಿ)– ಮೈಸೂರು ವಿಜಯನಗರ 2ನೇ ಹಂತಕ್ಕೆ ನಗರ ಸಾರಿಗೆ ಬಸ್ ಸೌಲಭ್ಯ ಕಲ್ಪಿಸಲಾಗಿದೆ. ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರ ನಿರ್ದೇಶನದ ಮೇರೆಗೆ ಕೆಎಸ್‌ಆರ್‌ಟಿಸಿ ಮೈಸೂರು ನಗರ ವಿಭಾಗದ ವತಿಯಿಂದ ಜೂ.27ರಿಂದ ನಗರ ಬಸ್ ನಿಲ್ದಾಣ–ಕೃಷ್ಣದೇವರಾಯ ವೃತ್ತ–ಹೊಯ್ಸಳ ವೃತ್ತ–ಹಂಪಿ ವೃತ್ತಕ್ಕೆ ಬಸ್ ವ್ಯವಸ್ಥೆ ಮಾಡಲಾಗಿದೆ. ವಿಜಯನಗರ ಘಟಕದ ಮಾರ್ಗ(ಸಂಖ್ಯೆ 123/01)ದಡಿ 10 ಸುತ್ತುವಳಿಗಳಲ್ಲಿ ಬಸ್ ಕಾರ್ಯಾಚರಿಸಲಿದೆ.

ಹಾಗೆಯೇ ಶಾಸಕರ ಸೂಚನೆಯಂತೆ ಹಾಸ್ಟೆಲ್ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಹೊಯ್ಸಳ ವೃತ್ತದಿಂದ ನಗರ ಬಸ್ ನಿಲ್ದಾಣಕ್ಕೆ (ಅನುಸೂಚಿ ಸಂಖ್ಯೆ 260/1, 265/5 ಮತ್ತು 201/6ರಲ್ಲಿ) ಬೆಳಗ್ಗೆ 7, 8 ಮತ್ತು 9 ಗಂಟೆಗೆ ಬಸ್ ಸೌಲಭ್ಯ ಕಲ್ಪಿಸಲಾಗಿದೆ ಎಂದು ವಿಭಾಗೀಯ ನಿಯಂತ್ರಣಾಧಿಕಾರಿ ತಿಳಿಸಿದ್ದಾರೆ.

ಇಸ್ರೋದ ಮತ್ತೊಂದು ಸಾಧನೆ

ನವದೆಹಲಿ, ಜು.2– ಭಾರತದ ಹೆಮ್ಮೆಯ ಬಾಹ್ಯಾಕಾಶ ಸಂಸ್ಥೆ ಇಸ್ರೋ ಮಂಗಳವಾರ ಮತ್ತೊಂದು ಸಾಧನೆ ಮಾಡಿದ್ದು, ಸೂರ್ಯನ ಅಧ್ಯಯನಕ್ಕೆ ಕಳುಹಿಸಿದ್ದ ಆದಿತ್ಯಾ–ಎಲ್1 ನೌಕೆ ತನ್ನ ಮೊದಲ ಹ್ಯಾಲೋ ಆರ್ಬಿಟ್ ಪ್ರದಕ್ಷಿಣೆ ಪೂರ್ಣಗೊಳಿಸಿದೆ.

ಈ ಬಗ್ಗೆ ಇಸ್ರೋ ಟ್ವೀಟ್ ಮಾಡಿದ್ದು, ಇಂದು, ಆದಿತ್ಯ–L1 ನೌಕೆ ಸೂರ್ಯ–ಭೂಮಿಯ L1 ಬಿಂದುವಿನ ಸುತ್ತ ತನ್ನ ಮೊದಲ ಹಾಲೋ ಕಕ್ಷೆ ಪ್ರದಕ್ಷಿಣೆಯನ್ನು ಪೂರ್ಣಗೊಳಿಸಿದೆ. ಇಂದಿನ ಸ್ಟೇಷನ್ ಕೀಪಿಂಗ್ ಕುಶಲತೆಯು ಅದರ ತಡೆರಹಿತ ಪರಿವರ್ತನೆಯನ್ನು ಎರಡನೇ ಹಾಲೋ ಕಕ್ಷೆಗೆ ಖಾತ್ರಿಪಡಿಸಿದೆ ಎಂದು ಟ್ವೀಟ್ ಮಾಡಿದೆ. ಆದಿತ್ಯ–L1 ಮಿಷನ್ ಲಗ್ರಾಂಜಿಯನ್ ಪಾಯಿಂಟ್ L1 ನಲ್ಲಿ ಭಾರತದ ಮೊದಲ ಸೌರ ವೀಕ್ಷಣಾಲಯವಾಗಿದ್ದು, ಇದನ್ನು ಸೆಪ್ಟೆಂಬರ್ 2, 2023 ರಂದು ಉಡಾವಣೆ ಮಾಡಲಾಗಿತ್ತು.

ನೌಕೆಯು ಅದರ ಉದ್ದೇಶಿತ ಹಾಲೋ (L–1) ಕಕ್ಷೆಯಲ್ಲಿ ಜನವರಿ 6, 2024 ರಂದು ಸೇರಿತ್ತು. ಹ್ಯಾಲೋ ಕಕ್ಷೆಯಲ್ಲಿರುವ ಆದಿತ್ಯ–L1 ಬಾಹ್ಯಾಕಾಶ ನೌಕೆಯು ತನ್ನ ಹ್ಯಾಲೋ ಆರ್ಬಿಟ್ ಪೂರ್ಣಗೊಳಿಸಲು ಭರ್ತಿ 178 ದಿನಗಳನ್ನು ತೆಗೆದುಕೊಂಡಿದೆ.

ಹಾಲೋ ಕಕ್ಷೆಯಲ್ಲಿ ಅದರ ಪ್ರಯಾಣದ ಸಮಯದಲ್ಲಿ, ಆದಿತ್ಯ–L1 ಬಾಹ್ಯಾಕಾಶ ನೌಕೆಯು ವಿವಿಧ ವಿಚಲಿತ ಶಕ್ತಿಗಳಿಗೆ ಒಳಗಾಗುತ್ತದೆ, ಅದು ಉದ್ದೇಶಿತ ಕಕ್ಷೆಯಿಂದ ನಿರ್ಗಮಿಸಲು ಕಾರಣವಾಗುತ್ತದೆ.

ಈ ಕಕ್ಷೆಯನ್ನು ನಿರ್ವಹಿಸಲು ಇದು ಕ್ರಮವಾಗಿ ಫೆಬ್ರವರಿ 22 ಮತ್ತು ಜೂನ್ 7 ರಂದು ಎರಡು ಸ್ಟೇಷನ್ ಕೀಪಿಂಗ್ ಮ್ಯಾನೋವರ್‌ಗೆ ಒಳಗಾಯಿತು. ಇಂದಿನ 3ನೇ ಸ್ಟೇಷನ್ ಕೀಪಿಂಗ್ ಮ್ಯಾನೋವರ್‌ಗೆ ಕುಶಲತೆಯು L1 ಸುತ್ತಲಿನ ಈ 2ನೇ ಹಾಲೋ ಕಕ್ಷೆಯ ಹಾದಿಯಲ್ಲಿ ತನ್ನ ಪ್ರಯಾಣವನ್ನು ಮುಂದುವರೆಸಿದೆ ಎಂದು ಇಸ್ರೋ ತಿಳಿಸಿದೆ.

ಸೆಸ್ಕ್ ವ್ಯಾಪ್ತಿ ವಿದ್ಯುತ್ ಅಪಘಾತಗಳ ಪ್ರಮಾಣ ಇಳಿಕೆ

ಪ್ರಾಣಾಪಾಯದ ಪ್ರಮಾಣ ಶೇ.70, ಪ್ರಾಣಿಗಳ ಸಾವು ಶೇ.40ರಷ್ಟು ಕಡಿಮೆ ; ಮುಖ್ಯ ಇಂಜಿನಿಯರ್ ಮಹದೇವಸ್ವಾಮಿ ಪ್ರಸನ್ನ ಮಾಹಿತಿ

ಮೈಸೂರು,ಜು.2(ಪಿಎಂ)– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ (ಸೆಸ್ಕ್) ವ್ಯಾಪ್ತಿಯಲ್ಲಿ ವಿದ್ಯುತ್ ಅಪಘಾತಗಳ ಪ್ರಮಾಣ ಶೇ.70ರಷ್ಟು ಇಳಿಕೆಯಾಗಿದೆ ಎಂದು ಸೆಸ್ಕ್ ಮುಖ್ಯ ಇಂಜಿನಿಯರ್ ಮಹದೇವಸ್ವಾಮಿ ಪ್ರಸನ್ನ ತಿಳಿಸಿದ್ದಾರೆ.

ವಿದ್ಯುತ್ ಸುರಕ್ಷತಾ ಸಪ್ತಾಹದ (ಜೂನ್ 26ರಿಂದ ಜುಲೈ 2ರವರೆಗೆ) ಅಂಗವಾಗಿ ಕಡಕೊಳದಲ್ಲಿರುವ ಕೆಇಬಿಇಎ ತರಬೇತಿ ಕೇಂದ್ರದಲ್ಲಿ ಮಂಗಳವಾರ ಆಯೋಜಿಸಿದ್ದ ವಿದ್ಯುತ್ ಕಾರ್ಯ ನಿರ್ವಹಣೆಯಲ್ಲಿ ಸುರಕ್ಷತಾ ಕ್ರಮಗಳ ಕುರಿತ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಸೆಸ್ಕ್ ವ್ಯಾಪ್ತಿಯಲ್ಲಿ ವಿದ್ಯುತ್ ಅಪಘಾತಗಳ ಪ್ರಮಾಣ ಗಣನೀಯವಾಗಿ ಕಡಿಮೆಯಾಗಿದ್ದು, 2022–2023ನೇ ಸಾಲಿನಲ್ಲಿ 211 ವಿದ್ಯುತ್ ಅಪಘಾತಗಳು ಸಂಭವಿಸಿತ್ತು. 2023–24ರಲ್ಲಿ 138 ವಿದ್ಯುತ್ ಅಪಘಾತಗಳು ಮಾತ್ರ ಸಂಭವಿಸಿದ್ದು, ಒಟ್ಟಾರೆ ಅಪಘಾತಗಳ ಪ್ರಮಾಣದಲ್ಲಿ ಶೇ.35ರಷ್ಟು ಕಡಿಮೆಯಾಗಿದೆ.



ಪ್ರಾಣಾಪಾಯದ ಪ್ರಮಾಣ ಶೇ.70ರಷ್ಟು ಕಡಿಮೆ ಆಗಿದ್ದರೆ ಪ್ರಾಣಿಗಳ ಸಾವು ಶೇ.40ರಷ್ಟು ಕ್ಷೀಣಿಸಿದೆ ಎಂದರು.

ಸುರಕ್ಷತೆ ದೃಷ್ಟಿಯಿಂದ ಸಿಬ್ಬಂದಿಗೆ ದಂಡ: ವಿದ್ಯುತ್ ಸುರಕ್ಷತೆ ವಿಚಾರದಲ್ಲಿ ನಮ್ಮ ಜವಾಬ್ದಾರಿ ಅರಿತು ಕೆಲಸ ಮಾಡಬೇಕೆಂಬುದನ್ನು ನೆನಪಿಸಲು ಸುರಕ್ಷತಾ ಸಪ್ತಾಹ ಅತ್ಯಂತ ಮುಖ್ಯವಾಗಿದೆ. ಗ್ರಾಹಕರಿಗೆ ಗುಣಮಟ್ಟದ ನಿರಂತರ ವಿದ್ಯುತ್ ಪೂರೈಸುವ ಜೊತೆಗೆ ಸುರಕ್ಷತಾ ಕ್ರಮಗಳಿಗೆ ಒತ್ತು ನೀಡಬೇಕು. ಕಾರ್ಯ ನಿರ್ವಹಣೆ ವೇಳೆ ಸುರಕ್ಷತಾ ನಿಯಮ ಉಲ್ಲಂಘಿಸಿದ ಸಿಬ್ಬಂದಿಗೆ ದಂಡ ವಿಧಿಸಬೇಕೆಂದು ಇತ್ತೀಚೆಗೆ ಸಭೆಯಲ್ಲಿ ನಿರ್ಧರಿಸಲಾಗಿದ್ದು, ಸಿಬ್ಬಂದಿ ಸುರಕ್ಷತೆಯ ಉದ್ದೇಶದಿಂದ ಈ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ ಎಂದು ಅವರು ತಿಳಿಸಿದರು.

ವಿದ್ಯುತ್ ಅವಘಡಗಳಿಗೆ ಪ್ರಮುಖ ಕಾರಣಗಳು ಹಾಗೂ ಸಿಬ್ಬಂದಿ ಕಾರ್ಯನಿರ್ವಹಿಸುವ ಸಂದರ್ಭದಲ್ಲಿ ಅನುಸರಿಸಬೇಕಾದ ಸುರಕ್ಷತಾ ಕ್ರಮಗಳ ಕುರಿತಂತೆ ಕಾರ್ಯಕ್ರಮದಲ್ಲಿ ಪ್ರಾತ್ಯಕ್ಷಿಕೆ ಪ್ರದರ್ಶಿಸಲಾಯಿತು. ಸೆಸ್ಕ್ ಅಪರ ಮುಖ್ಯ ಪರಿವೀಕ್ಷಕರಾದ ಹೆಚ್.ಎಸ್. ವೆಂಕಟೇಶ್, ಅಧೀಕ್ಷಕ ಅಭಿಯಂತರ ಸುನೀಲ್, ಉಪ ಮುಖ್ಯ ಪರಿವೀಕ್ಷಕ ಅಲ್ತಾಫ್ ಹುಸೇನ್, ಸಂದೀಪ್, ರಘುಕುಮಾರ್ ಸೇರಿದಂತೆ ವಿದ್ಯುತ್ ಪರಿವೀಕ್ಷಕ ವಲಯದ ಹಲವು ಅಧಿಕಾರಿಗಳು ಭಾಗವಹಿಸಿದ್ದರು.

ನಮ್ಮ ಸಿಬ್ಬಂದಿ ನಮಗೆ ಅಮೂಲ್ಯ....

ರಾಷ್ಟ್ರೀಯ ವಿದ್ಯುತ್ ಸುರಕ್ಷತಾ ಸಪ್ತಾಹದ ಅಂಗವಾಗಿ ಹಮ್ಮಿಕೊಳ್ಳಲಾದ ಕಾರ್ಯಕ್ರಮದಲ್ಲಿ ನಮ್ಮ ಸಿಬ್ಬಂದಿಗೆ ಸುರಕ್ಷತೆಯ ಬಗ್ಗೆ ಮಾಹಿತಿ, ಪ್ರಾತ್ಯಕ್ಷಿಕೆ ನೀಡಲಾಗಿದೆ. ಇದೇ ರೀತಿ ನಮ್ಮ ಎಲ್ಲಾ ಉಪವಿಭಾಗಗಳಲ್ಲಿ ಕಾರ್ಯಕ್ರಮ ನಡೆಸಲಾಗಿದೆ ಬೆಳಕು ನೀಡಲು ಶ್ರಮಿಸುವ ನಮ್ಮ ಸಿಬ್ಬಂದಿ ನಮಗೆ ಅಮೂಲ್ಯ. ವಿದ್ಯುತ್ ಅಪಘಾತಗಳು ಸಂಭವಿಸದಂತೆ ಎಲ್ಲ ಸುರಕ್ಷತಾ ಕ್ರಮ ಪಾಲಿಸಲಾಗುತ್ತದೆ. ನಮ್ಮ ಸೆಸ್ಕ್ ವ್ಯಾಪ್ತಿಯಲ್ಲಿ ವಿದ್ಯುತ್ ಅವಘಡಗಳ ಪ್ರಮಾಣ ಕಡಿಮೆಯಾಗಿರುವುದು ಸಮಾಧಾನಕರ ಸಂಗತಿ.

-ಶೀಲಾ, ವ್ಯವಸ್ಥಾಪಕ ನಿರ್ದೇಶಕರು, ಸೆಸ್ಕ್

ಕೆ.ಆರ್.ನಗರದಲ್ಲಿ ಡಯಾಲಿಸಿಸ್ ಕೇಂದ್ರ ಉದ್ಘಾಟನೆ

ಆಸ್ಪತ್ರೆಗಳ ಉನ್ನತೀಕರಣಕ್ಕೆ ಅನುದಾನ ಮಂಜೂರು: ಶಾಸಕ ಡಿ.ರವಿಶಂಕರ್

ಕೆ.ಆರ್.ನಗರ, ಜು.2– ಸಾರ್ವಜನಿಕರಿಗೆ ಉತ್ತಮ ಸೇವೆ ನೀಡುವ ದೃಷ್ಟಿಯಿಂದ ಸರ್ಕಾರಿ ಆಸ್ಪತ್ರೆಗಳನ್ನು ಉನ್ನತೀಕರಣಗೊಳಿಸಲು ಸರ್ಕಾರದಿಂದ ಸಾಕಷ್ಟು ಅನುದಾನ ಮಂಜೂರು ಮಾಡಿಸಲಾಗಿದೆ ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಡಯಾಲಿಸಿಸ್ ಕೇಂದ್ರ ಉದ್ಘಾಟಿಸಿ ಮಾತನಾಡಿದ ಅವರು ಸರ್ಕಾರದಿಂದ 8 ಡಯಾಲಿಸಿಸ್ ಯಂತ್ರಗಳನ್ನು ತರಿಸಲಾಗಿದ್ದು, ಕೆ.ಆರ್.ನಗರ ಸಾರ್ವಜನಿಕ ಆಸ್ಪತ್ರೆಗೆ 6 ಮತ್ತು ಸಾಲಿಗ್ರಾಮಕ್ಕೆ 2 ಯಂತ್ರಗಳನ್ನು ಅಳವಡಿಸಲಾಗಿದೆ. ಇದರಿಂದ ರೋಗಿಗಳಿಗೆ ಅನುಕೂಲವಾಗಲಿದೆ ಎಂದರು.

ಡಯಾಲಿಸಿಸ್ ಮಾಡಿಸಬೇಕಾದ ರೋಗಿಗಳು ಖಾಸಗಿ ಆಸ್ಪತ್ರೆಗಳಲ್ಲಿ ದುಬಾರಿ ಹಣ ಕಟ್ಟುವ ಜೊತೆಗೆ ಜಿಲ್ಲಾ ಕೇಂದ್ರ ಮೈಸೂರಿನ ಆಸ್ಪತ್ರೆಗಳಿಗೆ ಹೋಗುವುದನ್ನು ತಪ್ಪಿಸುವ ಸಲುವಾಗಿ ಡಯಾಲಿಸಿಸ್ ಕೇಂದ್ರ ಆರಂಭಿಸಲಾಗಿದೆ. ಸಂಬಂಧಪಟ್ಟ ವೈದ್ಯಾಧಿಕಾರಿಗಳು ರೋಗಿಗಳಿಗೆ ಉತ್ತಮ ಸೇವೆ ನೀಡಿ ಅಗತ್ಯ ಔಷಧಿಗಳನ್ನು ವಿತರಿಸಬೇಕು ಎಂದು ಸೂಚಿಸಿದರು.

ಇಲ್ಲಿನ ಸಾರ್ವಜನಿಕ ಆಸ್ಪತ್ರೆ ದುರಸ್ತಿ ಮತ್ತು ಆಸ್ಪತ್ರೆ ಆವರಣವನ್ನು ಕಾಂಕ್ರೀಟಿಕರಣ ಮಾಡಿಸಲು 1 ಕೋಟಿ ರೂ. ಮಂಜೂರು ಮಾಡಿಸಲಾಗಿದ್ದು, ಶೀಘ್ರ ಕಾಮಗಾರಿಗೆ ಚಾಲನೆ ನೀಡಲಾಗುವುದು. ಸಾಲಿಗ್ರಾಮ ಸಮುದಾಯ ಆರೋಗ್ಯ ಕೇಂದ್ರ ಭೇರ್ಯ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸಲು ಅಗತ್ಯ ಅನುದಾನ ಬಿಡುಗಡೆ ಮಾಡಿಸಲಾಗಿದೆ ಎಂದು ಮಾಹಿತಿ ನೀಡಿದರು.

ಕೆ.ಆರ್.ನಗರ ಸಾರ್ವಜನಿಕ ಆಸ್ಪತ್ರೆಗೆ ಆಂಬುಲೆನ್ಸ್ ನೀಡಲಾಗಿದ್ದು, ಕ್ಷೇತ್ರದ 6 ಹೋಬಳಿಯ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೂ ಆಂಬುಲೆನ್ಸ್ ನೀಡಲಾಗುವುದು. ಇದರಿಂದ ರೋಗಿಗಳಿಗೆ ಸಕಾಲದಲ್ಲಿ ಚಿಕಿತ್ಸೆ ದೊರೆಯಲಿದೆ. ಕ್ಷೇತ್ರದ ಜನತೆಯ ಉತ್ತಮ ಆರೋಗ್ಯ ಮತ್ತು ಶಿಕ್ಷಣಕ್ಕೆ ಮೊದಲ ಆದ್ಯತೆ ನೀಡುವುದಾಗಿ ಹೇಳಿದರು.



ಡಯಾಲಿಸಿಸ್ ಕೇಂದ್ರವನ್ನು ಶಾಸಕ ಡಿ.ರವಿಶಂಕರ್ ಉದ್ಘಾಟಿಸಿದರು.

ಈ ವೇಳೆ ಶಾಸಕ ರವಿಶಂಕರ್ ಪಟ್ಟಣದ ಪ್ರಮುಖ ಬೀದಿಗಳಲ್ಲಿ ನೂತನ ಆಂಬುಲೆನ್ಸ್ ಅನ್ನು ಚಾಲನೆ ಮಾಡಿದರು. ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಜೈಕಾರ ಹಾಕಿದರು.

ಈ ವೇಳೆ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕುಮಾರಸ್ವಾಮಿ, ಸಾರ್ವಜನಿಕ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ.ಬಿ.ಜೆ.ನವೀನ್‌ಕುಮಾರ್, ತಾಲೂಕು ಆರೋಗ್ಯಾಧಿಕಾರಿ ಡಾ.ಡಿ.ನಟರಾಜು, ವೈದ್ಯರಾದ ಡಾ.ಗೌತಮ್, ಡಾ.ತೇಜೋಮಣಿ, ಡಾ.ಕಿಶೋರ್, ಡಾ.ಭವಾನಿ, ಡಾ.ಶಿವಶಂಕರ್, ಡಾ.ದರ್ಶನ್, ಡಾ.ಶ್ರೀದೇವಿ, ಆರೋಗ್ಯ ರಕ್ಷಾ ಸಮಿತಿ ಸದಸ್ಯರಾದ ಹೆಚ್.ಹೆಚ್.ನಾಗೇಂದ್ರ, ಎಂ.ಲೋಕೇಶ್, ಕೆಂಚಿ ಮಂಜುನಾಥ್, ಎಸ್.ಸಾಗರ್, ನಾಗರತ್ನ, ಪುರಸಭೆ ಸದಸ್ಯರಾದ ಕೋಳಿಪ್ರಕಾಶ್, ಕೆ.ಜಿ.ಸುಬ್ರಹ್ಮಣ್ಯ, ಶಿವಕುಮಾರ್, ನಟರಾಜು, ಮಾಜಿ ಸದಸ್ಯ ಕೆ.ವಿನಯ್, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಮಹೇಶ್, ನಿರ್ದೇಶಕರಾದ ಸರಿತಾ, ಸೈಯದ್ ಜಾಬೀರ್, ಮುಖಂಡರಾದ ಶ್ರೀನಿವಾಸ್, ಜಿ.ಎಸ್.ವೆಂಕಟೇಶ್, ರವಿ, ವೈ.ಎಸ್.ಜಯಂತ್, ಪ್ರದೀಪ್‌ಕುಮಾರ್, ನವೀದ್, ಮಧುಕಿರಣ್, ಚಂದ್ರು, ರಾಜಣ್ಣ ಮತ್ತಿತರರಿದ್ದರು.

ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟನೆ



ಶುದ್ಧ ಕುಡಿಯುವ ನೀರಿನ ಘಟಕವನ್ನು ಶಾಸಕ ದರ್ಶನ್ ಉದ್ಘಾಟಿಸಿದರು.

ನಂಜನಗೂಡು, ಜು.2– ನಗರದ ಚಾಮಲಾಪುರ ಬೀದಿಯಲ್ಲಿ ನೂತನ ಶುದ್ಧ ಕುಡಿಯುವ ನೀರಿನ ಘಟಕವನ್ನು ಶಾಸಕ ದರ್ಶನ್ ಉದ್ಘಾಟಿಸಿದರು.

ನಂತರ ಮಾತನಾಡಿದ ಶಾಸಕರು, ನಗರದ ಜನತೆಯ ಆರೋಗ್ಯದ ಹಿತದೃಷ್ಟಿಯಿಂದ ಶುದ್ಧ ಕುಡಿಯುವ ನೀರನ್ನು ಒದಗಿಸುವ ಸಲುವಾಗಿ ನಗರಸಭೆ ಸಾಮಾನ್ಯ ನಿಧಿ ಅನುದಾನದಡಿ 12.5 ಲಕ್ಷ ರೂ. ವೆಚ್ಚದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಿಸಲಾಗಿದೆ. ಇದರಿಂದ ಬಡಾವಣೆ ಜನರಿಗೆ ಕುಡಿಯುವ ನೀರಿನ ಸಮಸ್ಯೆ ನೀಗಿಸಿದಂತಾಗುತ್ತದೆ. ನಗರಸಭೆ ಜನರ ಅನುಕೂಲಕ್ಕಾಗಿ ಇಂತಹ ಜನೋಪಯೋಗಿ ಕಾರ್ಯ ಮುಂದುವರಿಸಲಿ. ಅದಕ್ಕೆ ನನ್ನ ಸಹಕಾರ ಯಾವಾಗಲೂ ಇರುತ್ತದೆ ಎಂದ ಅವರು ನಗರದ ನಿವಾಸಿಗಳು ಇದನ್ನು ಸದುಪಯೋಗ ಪಡಿಸಿಕೊಳ್ಳಬೇಕು. ಜೊತೆಗೆ ನೀರು ಅಮೂಲ್ಯ ವಸ್ತು ಆದ್ದರಿಂದ ಮಿತವಾಗಿ ಬಳಸಬೇಕು ಎಂದು ಸಲಹೆ ನೀಡಿದರು.

ಈ ವೇಳೆ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಸಿ.ಎಂ.ಶಂಕರ್, ನಗರಸಭಾ ಸದಸ್ಯರಾದ ಗಾಯಿತ್ರಿ, ಎಸ್.ಪಿ.ಮಹೇಶ್, ಗಂಗಾಧರ್, ಸಿದ್ದಿಕ್, ಮಹದೇವಮ್ಮ, ವಿಜಯಲಕ್ಷ್ಮಿ, ಮಹದೇವಪ್ರಸಾದ್, ಕೆ.ಎಂ.ಬಸವರಾಜು, ರವಿ, ಮುಖಂಡರಾದ ಸತೀಶ್, ಅನಂತು, ಡಿ.ಆರ್.ರಾಜು, ಗುಣೀಂದ್ರ ಇನ್ನಿತರರಿದ್ದರು.

ಕೋಟ್ಯಾಂತರ ರೂ. ನಗದು, ಚಿನ್ನಾಭರಣ ಕಳವು

ಹುಣಸೂರು, ಜು.2– ಮನೆ ಹಿಂಬಾಗಿಲು ಮುರಿದು ಒಳ ನುಗ್ಗಿರುವ ಕಳ್ಳರು ಕೋಟ್ಯಾಂತರ ರೂ. ನಗದು, ಲಕ್ಷಾಂತರ ರೂ. ಮೌಲ್ಯದ ಚಿನ್ನಾಭರಣ ದೋಚಿರುವ ಪರಾರಿಯಾಗಿರುವ ಘಟನೆ ನಗರದ ಮಂಜುನಾಥ ಬಡಾವಣೆಯಲ್ಲಿ ನಡೆದಿದೆ. ನಗರದ ಗೋಕುಲ ರಸ್ತೆಯ ಸಗಟು ರಸಗೊಬ್ಬರ ವ್ಯಾಪಾರಿ ಗಿರೀಶ್ ಎಂಬುವರ ಮನೆಯಲ್ಲಿ ಕಳ್ಳತನ ನಡೆದಿದ್ದು, ದುಷ್ಕರ್ಮಿಗಳು 1.88 ಕೋಟಿ ರೂ. ಹಾಗೂ ಲಕ್ಷಾಂತರ ರೂ. ಮೌಲ್ಯದ 440 ಗ್ರಾಂ ಚಿನ್ನಾಭರಣ ದೋಚಿ ಪರಾರಿಯಾಗಿದ್ದಾರೆ.

ವಿವರ: ಭಾನುವಾರ ಸಂಜೆ ಗಿರೀಶ್ ಅವರು ತಮ್ಮ ತಾಯಿಯನ್ನು ಹಳ್ಳಿಗೆ ಬಿಟ್ಟು ಬರಲು ಮನೆಗೆ ಬೀಗ ಹಾಕಿಕೊಂಡು ಹೋಗಿದ್ದ ವೇಳೆ ಕಳ್ಳರು ಮನೆಯ ಹಿಂಬಾಗಿಲು ಮುರಿದು ಒಳ ಪ್ರವೇಶಿಸಿ ಬೀರು ಬೀಗ ಒಡೆದು ತಿಜೋರಿಯಲ್ಲಿದ್ದ 1.88 ಕೋಟಿ ರೂ. ನಗದು ಹಾಗೂ ಲಕ್ಷಾಂತರ ರೂ. ಬೆಲೆ ಬಾಳುವ ಚಿನ್ನಾಭರಣ ದೋಚಿ ಪರಾರಿಯಾಗಿದ್ದಾರೆ. ತಾಯಿಯನ್ನು ಬಿಟ್ಟು ಗಿರೀಶ್ ರಾತ್ರಿ ಮನೆಗೆ ಬಂದಾಗ ಕಳ್ಳತನ ನಡೆದಿರುವುದು ಪತ್ತೆಯಾಗಿದೆ. ವಿಷಯ ತಿಳಿದು ಶ್ವಾನದಳ ಮತ್ತು ಬೆರಳಚ್ಚು ತಜ್ಞರೊಂದಿಗೆ ಸ್ಥಳಕ್ಕಾಗಮಿಸಿದ ಎಸ್‌ಪಿ ಸೀಮಾ ಲಾಟ್ಕರ್, ಅಡಿಷನಲ್ ಎಸ್‌ಪಿ ಡಾ.ನಂದಿನಿ, ಡಿವೈಎಸ್‌ಪಿ ಗೋಪಾಲಕೃಷ್ಣ, ಇನ್ಸ್‌ಪೆಕ್ಟರ್ ಸಂತೋಷ್ ಕಶ್ಯಪ್ ಪರಿಶೀಲನೆ ನಡೆಸಿದರು. ಈ ಸಂಬಂಧ ಹುಣಸೂರು ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬರ ಪರಿಹಾರ: ರೈತರ ಖಾತೆಗಳಿಗೆ 2.25 ಕೋಟಿ ಜಮಾ



ಹುಣಸೂರು, ಜು.2– ಬರ ಪರಿಹಾರ ಯೋಜನೆಯಡಿ ತಾಲೂಕಿನ 4168 ರೈತರ ಬ್ಯಾಂಕ್ ಖಾತೆಗಳಿಗೆ 2.25 ಕೋಟಿ ರೂ. ಪರಿಹಾರದ ಹಣವನ್ನು ಜಮಾ ಮಾಡಲಾಗಿದೆ ಎಂದು ಸಹಾಯಕ ಕೃಷಿ ನಿರ್ದೇಶಕ ಅನಿಲ್ ಕುಮಾರ್ ತಿಳಿಸಿದರು.

ಕಳೆದ ಸಾಲಿನಲ್ಲಿ ಬರದಿಂದಾಗಿ ತಾಲೂಕಿನಲ್ಲಿ 622.32 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ನಷ್ಟವಾಗಿತ್ತು. ಬೆಳೆ ನಷ್ಟದ ಬಗ್ಗೆ ಸರ್ಕಾರಕ್ಕೆ ಮಾಹಿತಿ ನೀಡಲಾಗಿತ್ತು. ಅದರಂತೆ ಸರ್ಕಾರದಿಂದ ಒಣ ಭೂಮಿಗೆ ಪ್ರತಿ ಹೆಕ್ಟೇರ್‌ಗೆ 8.5ಸಾವಿರ, ನೀರಾವರಿ ಬೆಳೆಗೆ 17ಸಾವಿರ ರೂ., ತೋಟಗಾರಿಕೆ ಬೆಳೆಗೆ ಪ್ರತಿ ಹೆಕ್ಟೇರ್‌ಗೆ 22,500 ಹಾಗೂ ರೇಷ್ಮೆ ಬೆಳೆಗೆ 6,500 ರಿಂದ 7ಸಾವಿರ ರೂ.ವರೆಗೆ ದೊರೆಯಲಿದೆ.

ಪ್ರತಿ ರೈತನಿಗೆ 2 ಹೆಕ್ಟೇರ್ ಬೆಳೆ ನಷ್ಟಕ್ಕೆ ಮಾತ್ರ ಪರಿಹಾರ ಸಿಗಲಿದೆ. ಕಡಿಮೆ ಭೂಮಿ ಹೊಂದಿರುವ ರೈತರಿಗೆ ಕುಂಟೆ ಲೆಕ್ಕದಲ್ಲಿ ಪರಿಹಾರ ದೊರೆಯಲಿದೆ. ಆದರೆ ವಾಣಿಜ್ಯ ಬೆಳೆಯಾದ ತಂಬಾಕು, ಶುಂಠಿ ಬೆಳೆ ನಷ್ಟಕ್ಕೆ ಪರಿಹಾರ ಸಿಗುವುದಿಲ್ಲ ಎಂದರು.

ಪರಿಹಾರದ ಹಣ ಜಮೆಯಾಗದ ರೈತರು ಸಮಸ್ಯೆಗಳಿದ್ದಲ್ಲಿ ತಾಲೂಕು ಕಚೇರಿ, ನಾಡ ಕಚೇರಿ, ಗ್ರಾಪಂಗಳಿಗೆ ಭೇಟಿ ನೀಡಿ ಮಾಹಿತಿ ಪಡೆದುಕೊಳ್ಳಿ ಎಂದು ಮನವಿ ಮಾಡಿದರು.

11 ರೈತ ಕುಟುಂಬಗಳಿಗೆ ಪರಿಹಾರ: 2023–24ನೇ ಸಾಲಿನಲ್ಲಿ ತಾಲೂಕಿನಲ್ಲಿ 13 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಪೈಕಿ 11 ಮಂದಿಗೆ ಸರ್ಕಾರದಿಂದ ತಲಾ 5 ಲಕ್ಷ ರೂ.ಗಳ ಪರಿಹಾರದ ಚೆಕ್ ಅನ್ನು ಶಾಸಕ ಜಿ.ಡಿ.ಹರೀಶ್‌ಗೌಡರು ತಾಲೂಕು ಕಚೇರಿಯಲ್ಲಿ ಮೃತರ ಕುಟುಂಬದವರಿಗೆ ವಿತರಿಸಿ, ಹಣವನ್ನು ಸದ್ಬಳಕೆ ಮಾಡಿಕೊಳ್ಳಿ ಎಂದು ಸಲಹೆ ನೀಡಿದರು.

ಈ ಕುಟುಂಬದ ಮಂದಿಗೆ ಪ್ರತಿ ಮಾಹೆ ತಲಾ 2 ಸಾವಿರ ರೂ. ಮಾಶಾಸನ, ಆರೋಗ್ಯ ಕಾರ್ಡ್ ಹಾಗೂ ಮಕ್ಕಳಿಗೆ ಉಚಿತ ಶಿಕ್ಷಣ ದೊರೆಯಲಿದೆ. ಇಬ್ಬರು ರೈತರ ಅರ್ಜಿ ತಿರಸ್ಕೃತಗೊಂಡಿದೆ ಎಂದು ಸಹಾಯಕ ಕೃಷಿ ನಿರ್ದೇಶಕ ಅನಿಲ್‌ಕುಮಾರ್ ತಿಳಿಸಿದ್ದಾರೆ.

ವೈದ್ಯರು ರೋಗಿಗಳ ಪಾಲಿನ ದೇವರು

ದಡದಹಳ್ಳಿ ಮುಖ್ಯ ಶಿಕ್ಷಕ ಟಿ.ಎಂ.ಸುರೇಶ್ ಕುಮಾರ್



ಸರಗೂರು, ಜು.2– ವೈದ್ಯರು ರೋಗಿಗಳ ಪಾಲಿನ ದೇವರು ಎಂದು ದಡದಹಳ್ಳಿ ಮುಖ್ಯ ಶಿಕ್ಷಕ ಟಿ.ಎಂ.ಸುರೇಶ್ ಕುಮಾರ್ ತಿಳಿಸಿದರು.

ವೈದ್ಯರ ದಿನಾಚರಣೆ ಅಂಗವಾಗಿ ತಾಲೂಕಿನ ದಡದಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯಾಧಿಕಾರಿ ಡಾ.ಅಖಿಲಾ ಅವರನ್ನು ಸನ್ಮಾನಿಸಿ ಮಾತನಾಡಿದರು.

ವೈದ್ಯರು ಸದಾ ಒತ್ತಡದಲ್ಲಿರುತ್ತಾರೆ. ಆದರೂ ತಾವು ಎಷ್ಟೇ ಒತ್ತಡದಲ್ಲಿದ್ದಲ್ಲಿ ಇದ್ದರೂ ಅದನ್ನು ತೋರಿಸಿಕೊಳ್ಳದೇ ರೋಗಿಗೆ ಚಿಕಿತ್ಸೆ ನೀಡುತ್ತಾರೆ. ಹೀಗಾಗಿ ವೈದ್ಯರು ರೋಗಿಗಳ ಪಾಲಿನ ದೇವರಾಗಿಯೇ ಉಳಿ ದಿದ್ದಾರೆ. ಆಧುನಿಕ ಬದುಕಿನಲ್ಲಿ ಹೊಸ ಕಾಯಿಲೆಗಳು ಹುಟ್ಟಿಕೊಳ್ಳುತ್ತಿದ್ದು, ಅದಕ್ಕೆ ತಕ್ಕಂತೆ ಚಿಕಿತ್ಸೆ ನೀಡಿ ಗುಣಪಡಿಸುವುದು ವೈದ್ಯರಿಗೆ ಸವಾಲಾಗಿದೆ. ಇಂತಹ ವೈದ್ಯರನ್ನು ಎಲ್ಲರು ಗೌರವಿಸುವುದು ನಮ್ಮೆಲ್ಲರ ಕರ್ತವ್ಯ ಎಂದರು.

ದಡದಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಅಖಿಲಾ ಮಾತನಾಡಿ, ಸೇವೆ ನಮ್ಮ ಗುರಿ. ಸರ್ಕಾರಿ, ಖಾಸಗಿ ಆಸ್ಪತ್ರೆಯಲ್ಲೇ ಕೆಲಸ ಮಾಡುತ್ತಿರಲಿ ವೈದ್ಯರು ಸಮಾಜದಲ್ಲಿ ತಮ್ಮ ಸ್ಥಾನವನ್ನು ಅರಿತು ಕೆಲಸ ಮಾಡಬೇಕು ಎಂದರು.

ಈ ವೇಳೆ ದಡದಹಳ್ಳಿ ಶಾಲೆ ಶಿಕ್ಷಕರಾದ ಆರ್.ಪ್ರೇಮ್ ಕುಮಾರ್, ಪಾರ್ವತಿ, ವಿಶ್ವ ಹಾಗೂ ಆರೋಗ್ಯ ಕೇಂದ್ರದ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

ಅಧಿಕಾರದಲ್ಲಿದ್ದಾಗ ಜನರ ಸಮಸ್ಯೆ ಬಗೆಹರಿಸಬೇಕು

ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್



ಕಂಪಲಾಪುರದಲ್ಲಿ ನೂತನ ವಾಣಿಜ್ಯ ಮಳಿಗೆಗಳನ್ನು ಸಚಿವ ಕೆ.ವೆಂಕಟೇಶ್ ಉದ್ಘಾಟಿಸಿದರು.

ಕಂಪಲಾಪುರ, ಜು.2– ಎಷ್ಟು ದಿನ ಅಧಿಕಾರಲ್ಲಿರುತ್ತೇವೆ ಎನ್ನುವುದು ಮುಖ್ಯವಲ್ಲ. ಅಧಿಕಾರದಲ್ಲಿರುವಾಗ ಸಾರ್ವಜನಿಕ ಸಮಸ್ಯೆ ಬಗೆಹರಿಸಲು ಮುಂದಾಗಬೇಕು ಎಂದು ಪಶುಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್ ಕಿವಿಮಾತು ಹೇಳಿದರು.

ಗ್ರಾಮದ ಬಸ್ ನಿಲ್ದಾಣದ ಬಳಿ ನೂತನ ವಾಣಿಜ್ಯ ಮಳಿಗೆಗಳನ್ನು ಉದ್ಘಾಟಿಸಿ ಮಾತನಾಡಿದ ಅವರು, ತಳ ಹಂತದಲ್ಲೇ ಜನರ ಸಮಸ್ಯೆಗಳನ್ನು ಗುರುತಿಸಬೇಕು. ನಂತರ ನಮ್ಮ ಗಮನಕ್ಕೆ ತಂದಾಗ ಅದನ್ನು ಬಗೆಹರಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಕೇವಲ ಸಣ್ಣ ಕೆಲಸಗಳನ್ನು ಮಾಡಿಸಲು ನಮ್ಮ ಕಡೆ ಮುಖ ಮಾಡುವುದು ಬೇಡ. ಈ ಹಿಂದೆ ಸುವರ್ಣ ಗ್ರಾಮ ಯೋಜನೆಯಡಿ ಗ್ರಾಮವನ್ನು ದತ್ತು ತೆಗೆದುಕೊಂಡು ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಿದ್ದೇನೆ. ಮುಂದಿನ ದಿನಗಳಲ್ಲಿ ಗ್ರಾಮಕ್ಕೆ ಅವಶ್ಯವಿರುವ ಎಲ್ಲಾ ಕೆಲಸಗಳನ್ನು ಮಾಡುತ್ತೇನೆ ಎಂದರು.

ಗ್ರಾಮಸ್ಥರ ಹಲವು ದಿನಗಳ ಬೇಡಿಕೆಯಾದ ಪಿಯು ಕಾಲೇಜನ್ನು ಸಂಭಂದಪಟ್ಟ ಸಚಿವರ ಜೊತೆ ಮಾತನಾಡಿ ಮಂಜೂರು ಮಾಡಿಸುವ ಭರವಸೆ ನೀಡಿದರು. ಹಾಗೆಯೇ ಸೆಸ್ಕ್ ಲೈನ್‌ಮನ್‌ಗಳ ಕೊರತೆ ನೀಗಿಸುವುದಾಗಿ ತಿಳಿಸಿದರು.

ಇದೇ ಸಂದರ್ಭ ತಾಪಂ ಇಓ ಸುನೀಲ್ ಕುಮಾರ್, ತಾ.ಆಶ್ರಯ ಸಮಿತಿ ಅಧ್ಯಕ್ಷ ನಿತಿನ್ ವೆಂಕಟೇಶ್, ಬಿಇಓ ಬಸವರಾಜ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಡಿ.ಟಿ.ಸ್ವಾಮಿ, ಹಿರಿಯ ಮುಖಂಡ ಎಂ.ರಮೇಶ್, ಉದ್ಯಮಿ ಕೆ.ಪಿ.ನಿಂಗರಾಜು, ಪ್ರಕಾಶ್‌ಗೌಡ, ಪಿಡಿಓ ಪರಮೇಶ್, ಕಾರ್ಯದರ್ಶಿ ಸುಷ್ಮ, ಸುಮಿತ್ರಾ, ಅಧ್ಯಕ್ಷೆ ಜಾನಕಿ, ಉಪಾಧ್ಯಕ್ಷೆ ಸುಮಾ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು, ಗ್ರಾಪಂ ಸದಸ್ಯರು, ಸಿಬ್ಬಂದಿ ಹಾಜರಿದ್ದರು.

ಜು.7, ಉಚಿತ ಆರೋಗ್ಯ ತಪಾಸಣಾ ಶಿಬಿರ



ತಿ.ನರಸೀಪುರ, ಜು.2– ತಾಪಂ ಮಾಜಿ ಅಧ್ಯಕ್ಷ, ಮೈಮುಲ್ ನಿರ್ದೇಶಕ ಆರ್.ಚೆಲುವರಾಜು ಅವರ 40ನೇ ಹುಟ್ಟುಹಬ್ಬದ ಅಂಗವಾಗಿ ಬನ್ನೂರಿನ ರೋಟರಿ ಶಾಲೆಯಲ್ಲಿ ಜು.7ರಂದು ಉಚಿತ ಆರೋಗ್ಯ ತಪಾಸಣಾ ಶಿಬಿರ ಹಾಗೂ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಅತ್ತಹಳ್ಳಿ ಗ್ರಾಪಂ ಅಧ್ಯಕ್ಷ ಡಿ.ಸುನೀಲ್ ಕುಮಾರ್ ತಿಳಿಸಿದರು.

ತಾಲೂಕಿನ ಬನ್ನೂರು ಲೋಕೋಪಯೋಗಿ ಇಲಾಖೆ ಅತಿಥಿ ಗೃಹದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದ ಉದಯೋನ್ಮುಖ ಯುವ ನಾಯಕರಾಗಿ ಪಕ್ಷದ ಸಂಘಟನೆಗೆ ದುಡಿಯುತ್ತಿರುವ ಚಲುವರಾಜು ಅವರ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಲು ಸ್ನೇಹ ಬಳಗದ ವತಿಯಿಂದ ಆರೋಗ್ಯ ತಪಾಸಣಾ ಶಿಬಿರ ಹಾಗೂ ಪ್ರತಿಭಾ ಪುರಸ್ಕಾರ ಆಯೋಜಿಸಲಾಗಿದೆ ಎಂದರು.

ಉದ್ಯೋಗದಾತ ಸಂಸ್ಥೆ ಡಿ.ಬಿ.ರುಕ್ಮಾಂಗದ ಮಾತನಾಡಿ, ಕಳೆದ ವರ್ಷ ಸಂಸದ ಸುನೀಲ್ ಬೋಸ್ ಅವರ ಹುಟ್ಟುಹಬ್ಬದ ಪ್ರಯುಕ್ತ ತಿ.ನರಸೀಪುರದಲ್ಲಿ ಬೃಹತ್ ಉದ್ಯೋಗ ಮೇಳ ಆಯೋಜಿಸಿ ಸಾವಿರಾರು ವಿದ್ಯಾವಂತ ನಿರುದ್ಯೋಗಿ ಯುವಕ–ಯುವತಿಯರಿಗೆ ಉದ್ಯೋಗಾವಕಾಶ ಒದಗಿಸುವ ಮೂಲಕ ಚೆಲುವರಾಜು ಅವರು ನಮ್ಮೆಲ್ಲರಿಗೂ ಮಾದರಿ ಯುವನಾಯಕರಾಗಿದ್ದಾರೆ. ಅವರ ಜನ್ಮದಿನ ಆಚರಿಸಲು ಸ್ನೇಹ ಬಳಗ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮೈಮುಲ್ ಮಾಜಿ ನಿರ್ದೇಶಕ ಕೇತುಪುರ ಪ್ರಭಾಕರ್, ಸದಸ್ಯ ಎ.ಎಸ್.ಮಹೇಶ್, ಮಾಜಿ ಸದಸ್ಯ ಕೃಷ್ಣೇಗೌಡ, ಪಟೇಲ್, ಕಾಂಗ್ರೆಸ್ ಯುವ ಘಟಕದ ಅಧ್ಯಕ್ಷ ಟಿ.ಎಸ್.ಲೋಕೇಶ್, ಮುಖಂಡರಾದ ದೇವರಾಜು, ಮರಿಗೌಡ, ನಾಗೇಶ, ದೀಪು, ಭಾಸ್ಕರ, ಅಶೋಕ, ಜಯರಾಮು, ಅಶೋಕ್ ಕುಮಾರ್, ಕೃಷ್ಣ, ರಂಜಿತ್ ಮಹೇಂದ್ರ ಹಾಗೂ ಲೋಕೇಶ್ ಹಾಜರಿದ್ದರು.

ಅಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಕೆ



ತಿ.ನರಸೀಪುರ ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷ ಸ್ಥಾನಕ್ಕೆ ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷರೂ ಆದ ಹೆಳವರಹುಂಡಿ ಸಿದ್ದಪ್ಪ ನಾಮಪತ್ರ ಸಲ್ಲಿಸಿದರು. ಈ ವೇಳೆ ಸಿದ್ದೇಶ್ ಬಾಬು, ಬಸವಣ್ಣ, ಮೋಹನ್, ಶೇಖರ್, ನಾಗೇಶ್, ಶಾಂತರಾಜು, ಮೂರ್ತಿ, ಮಾದಪ್ಪ, ನಿಂಗಪ್ಪ ಮತ್ತಿತರಿದ್ದರು.

ಕರಾಟೆ ಸ್ಪರ್ಧೆ: ಎಂ.ಸಮೀಕ್ಷಾಗೆ ಚಿನ್ನದ ಪದಕ

ಬನ್ನೂರು, ಜು.2– ಇತ್ತೀಚೆಗೆ ಉತ್ತರ ಪ್ರದೇಶದ ಲಕ್ನೋದಲ್ಲಿ ನಡೆದ 41ನೇ ರಾಷ್ಟ್ರೀಯ ಟೆಕ್ವಾಂಡೋ ಚಾಂಪಿಯನ್‌ಶಿಪ್ ಕರಾಟೆ ಸ್ಪರ್ಧೆಯಲ್ಲಿ ಗೆಲುವು ಸಾಧಿಸುವ ಮೂಲಕ ಎಂ.ಸಮೀಕ್ಷಾ ಚಿನ್ನದ ಪದಕವನ್ನು ತನ್ನದಾಗಿಸಿಕೊಂಡಿದ್ದಾರೆ. ಈಕೆ ಮೈಸೂರಿನ ರಾಘವೇಂದ್ರ ನಗರದ ನಿವಾಸಿ ಎಂ.ಆರ್.ಮಧುಚಂದ್ರ, ಪ್ರೀತಿ ದಂಪತಿ ಪುತ್ರಿ. ಕರಾಟೆ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದಿರುವ ಎಂ.ಸಮೀಕ್ಷಾ ಸಾಧನೆಗೆ ತರಬೇತುದಾರ ಸಾಯಿ ಪ್ರತಾಪ್‌ಬಾಬು ಅಭಿನಂದನೆ ಸಲ್ಲಿಸಿದ್ದಾರೆ.



ಅರಿವು ಕೇಂದ್ರ, ಡಿಜಿಟಲ್ ಗ್ರಂಥಾಲಯ ಉದ್ಘಾಟನೆ



ನಂಜನಗೂಡು ತಾಲೂಕಿನ ಬದನವಾಳಲ್ಲಿ ನೂತನ ಅರಿವು ಕೇಂದ್ರ ಮತ್ತು ಡಿಜಿಟಲ್ ಗ್ರಂಥಾಲಯವನ್ನು ಶಾಸಕ ದರ್ಶನ್ ಉದ್ಘಾಟಿಸಿದರು. ಈ ವೇಳೆ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುರಹಟ್ಟಿ ಮಹೇಶ್ ಇದ್ದಾರೆ.

ನಯನಜ ಕ್ಷತ್ರಿಯ ಸಂಘದಿಂದ ಉತ್ತಮ ಕಾರ್ಯ

ಸಂಘದಲ್ಲಿ ಅವ್ಯವಹಾರ ನಡೆದಿದ್ದರೇ ದಾಖಲೆ ನೀಡಲಿ: ಅಧ್ಯಕ್ಷ ನಾಗೇಂದ್ರ



ತಾಲೂಕು ನಯನಜ ಕ್ಷತ್ರಿಯ ಸಂಘದ ಅಧ್ಯಕ್ಷ ನಾಗೇಂದ್ರ ಮಾತನಾಡಿದರು.

ತಿ.ನರಸೀಪುರ, ಜು.2– ತಾಲೂಕಿನ ನಯನಜ ಕ್ಷತ್ರಿಯ ಸಂಘವು ಉತ್ತಮ ಕೆಲಸದೊಂದಿಗೆ ಮುನ್ನಡೆಯುತ್ತಿದೆ. ಆದರೆ ಇತ್ತೀಚೆಗೆ ಸಮಾಜದ ಗಮನಕ್ಕೆ ತರದೇ ಟೌನ್ ಸಂಘ ಸ್ಥಾಪಿಸಿಕೊಳ್ಳಲಾಗಿದ್ದು, ಅಲ್ಲಿನ ಕಾರ್ಯಕಾರಿ ಸಮಿತಿ ತಮ್ಮ ಸಂಘದ ಬೆಳವಣಿಗೆಗೆ ಶ್ರಮಿಸಲಿ ಎಂದು ತಾಲೂಕು ನಯನಜ ಕ್ಷತ್ರಿಯ ಸಂಘದ ಅಧ್ಯಕ್ಷ ನಾಗೇಂದ್ರ ತಿಳಿಸಿದರು.

ಪಟ್ಟಣದ ಶ್ರೀನಿವಾಸ ಹೋಟೆಲ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಮ್ಮ ಸಂಘದ ಬೆಳವಣಿಗೆಗೆ ಶ್ರಮಿಸುವುದನ್ನು ಬಿಟ್ಟು ಅಭಿವೃದ್ಧಿಯತ್ತ ದಾಪುಗಾಲು ಹಾಕುತ್ತಿರುವ ಮತ್ತೊಂದು ಸಂಘದ ಮೇಲೆ ಗೂಬೆ ಕೂರಿಸುವ ಕೆಲಸಕ್ಕೆ ಮುಂದಾಗಿರುವುದು ಸರಿಯಲ್ಲ. ಅನುದಾನ ದುರ್ಬಳಕೆಯಾಗಿದ್ದರೆ ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನೀಡಿ. ಅದನ್ನು ಬಿಟ್ಟು ಜಿಲ್ಲಾ ನೋಂದಣಾಧಿಕಾರಿಗಳಿಗೆ ಆಧಾರ ರಹಿತ ದೂರು ಸಲ್ಲಿಸಿ ಸಂಘದ ಏಳಿಗೆಗೆ ಕುತ್ತು ತರುವ ಕೆಲಸಕ್ಕೆ ಕೈ ಹಾಕಬೇಡಿ. ಇಲ್ಲಿ ಸಮಾಜ ಕಟ್ಟುವ ಕೆಲಸ ಮಾಡಬೇಕೆ ಹೊರತು ಒಡೆಯುವ ಕೆಲಸ ಮಾಡಬಾರದು ಎಂದರು.

ತಾಲೂಕು ನಯನಜ ಕ್ಷತ್ರಿಯ ಸಂಘದ ಕಾರ್ಯದರ್ಶಿ ಈ.ರಾಜು ಮಾತನಾಡಿ, ಸಮಾಜದ ಮುಖಂಡರಾದ ಶಿವರುದ್ರಸ್ವಾಮಿ ಅವರು ಸಮಾಜದ ಆಸ್ತಿಯನ್ನು ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದಾರೆ. ಸಂಘಕ್ಕೆ ಬಿಡುಗಡೆಯಾದ ಅನುದಾನವನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ತಮ್ಮ ಮೇಲೆ ಮಾಡಿರುವ ಆರೋಪ ಆಧಾರ ರಹಿತ ಎಂದರು.

ಶಿವರುದ್ರಸ್ವಾಮಿ ಆರೋಪಿಸಿರುವಂತೆ ನಾವೇನು ನಮ್ಮ ಸ್ವಂತಕ್ಕೆ ಖಾತೆ ಮಾಡಿಸಿಕೊಂಡಿಲ್ಲ. ಸಂಘದ ಸರ್ವ ಸದಸ್ಯರ ಸಭೆಯಲ್ಲಿ ವಿಷಯವನ್ನು ಚರ್ಚೆಗಿಟ್ಟು ನಂತರ ಸರ್ವಾನುಮತದ ಒಪ್ಪಿಗೆ ಪಡೆದು ಸಂಘದ ಕಾರ್ಯದರ್ಶಿ ಹಾಗೂ ಅಧ್ಯಕ್ಷರ ಹೆಸರಲ್ಲಿ ಈ–ಖಾತೆ ಮಾಡಿಸಿದ್ದೇವೆ ಎಂದರು.

ಶಿವರುದ್ರಸ್ವಾಮಿ ಮಾಡಿರುವ ಎಲ್ಲಾ ಆರೋಪಗಳು ಸತ್ಯಕ್ಕೆ ದೂರವಾಗಿದ್ದು ನಮ್ಮ ಸಂಘದಲ್ಲಿ ಯಾವುದೇ ಅವ್ಯವಹಾರ ನಡೆದಿಲ್ಲ. ಎಲ್ಲಾ ವ್ಯವಹಾರಗಳನ್ನು ಸಂಘದ ನಿಯಮಾನುಸಾರ ಮಾಡಲಾಗಿದೆ. ಇದು ಗೊತ್ತಿಲ್ಲದೇ ಆಧಾರ ರಹಿತ ಆರೋಪ ಮಾಡುತ್ತಿರುವ ಅವರಿಗೆ ಕಾನೂನು ಅರಿವೇ ಇಲ್ಲ ಎಂದು ಕಿಡಿಕಾರಿದರು.

ಸಂಘದಲ್ಲಿ 70 ಲಕ್ಷ ರೂ. ದುರುಪಯೋಗ ಮಾಡಿಕೊಂಡಿದ್ದೇವೆ ಎಂಬ ಆರೋಪಕ್ಕೆ ಉತ್ತರಿಸಿದ ರಾಜು ಕಟ್ಟಕಡೆಯ ಸಮಾಜವಾದ ನಮಗೆ ಅಷ್ಟು ದೊಡ್ಡ ಅನುದಾನ ಯಾರು ನೀಡುತ್ತಾರೆ. ಹಾಗಾಗಿ ಆರೋಪ ಮಾಡುವವರು ಆಧಾರ ಇಟ್ಟುಕೊಂಡು ಮಾತನಾಡಲಿ. ನಮಗೆ ಯಾರ್ಯಾರು ಅನುದಾನ ನೀಡಿದ್ದಾರೆ. ಅದರ ಬಳಕೆ ಹೇಗೆ ಮಾಡಲಾಗಿದೆ ಎಂಬ ವಿಚಾರವೇ ಆರೋಪ ಮಾಡುವವರಿಗೆ ಗೊತ್ತಿಲ್ಲ. ಅವರ ಮಾಸಿಕ ಸ್ಥಿತಿ ಉತ್ತಮವಾಗಿಲ್ಲ. ಹಾಗಾಗಿ ಅವರು ನಿರಾಧಾರ ಆರೋಪದಲ್ಲಿ ನಿರತರಾಗಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಸಂಘದ ಉಪಾಧ್ಯಕ್ಷ ಮೂರ್ತಿ, ಖಜಾಂಜಿ ಜೋಗಿ ನಾಗರಾಜ್, ಸಮಾಜದ ಮುಖಂಡರಾದ ವಿಜಯಕುಮಾರ್, ಮಹೇಂದ್ರ, ರಘು, ರಾಮಕೃಷ್ಣ, ಶರತ್, ಚೇತನ್, ರಾಜೇಶ್, ದೇವರಾಜ್, ವೇಣು, ಆನಂದ್, ಗೋವಿಂದ, ಮಹದೇವ್ ಹಾಜರಿದ್ದರು.

ಪತ್ರಿಕಾ ರಂಗದಿಂದ ಸಮಾಜ ತಿದ್ದುವ ಕಾರ್ಯ

ಪತ್ರಿಕಾ ದಿನಾಚರಣೆಯಲ್ಲಿ ಶಾಸಕ ಅನಿಲ್ ಅಭಿಪ್ರಾಯ

ಹೆಚ್.ಡಿ.ಕೋಟೆ, ಜು.2– ಪತ್ರಿಕಾ ರಂಗದಿಂದ ಸಮಾಜದ ಅಂಕು ಡೊಂಕುಗಳನ್ನು ತಿದ್ದುವ ಕಾರ್ಯ ನಡೆಯುತ್ತಿದೆ ಎಂದು ಶಾಸಕ ಅನಿಲ್ ತಿಳಿಸಿದರು.

ತಾಲೂಕಿನ ಕಾರಾಪುರದಲ್ಲಿರುವ ಜಂಗಲ್ ಲಾಡ್ಜ್ ರೆಸಾರ್ಟ್‌ನಲ್ಲಿ ನಡೆದ ಪತ್ರಿಕಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ನ್ಯಾಯಾಂಗ, ಶಾಸಕಾಂಗ, ಕಾರ್ಯಾಂಗದಂತೆ ಪತ್ರಿಕಾ ರಂಗವೂ ಕಾರ್ಯ ನಿರ್ವಹಿಸುತ್ತಿದ್ದು, ಸಮಾಜದ ಅಂಕು ಡೊಂಕುಗಳನ್ನು ತಿದ್ದುವ ಕೆಲಸ ಮಾಡುತ್ತಿದೆ ಎಂದರು.

ಜನಪ್ರತಿನಿಧಿಗಳನ್ನು ಎಚ್ಚರಿಸುವ ಕೆಲಸ ಪತ್ರಕರ್ತರಿಂದ ನಡೆಯುತ್ತಿದ್ದು, ಮುಂದಿನ ದಿನಗಳಲ್ಲಿ ಈ ಪ್ರಮಾಣ ಹೆಚ್ಚಾಗಬೇಕು. ತಾಲೂಕಿನಲ್ಲಿ ಹಲವು ಸಮಸ್ಯೆಗಳು ಪತ್ರಕರ್ತರ ಮೂಲಕ ಬೆಳಕಿಗೆ ಬಂದಿದ್ದು, ಆ ಸಮಸ್ಯೆಗಳನ್ನು ನಾನು ಪ್ರಾಮಾಣಿಕವಾಗಿ ಬಗೆಹರಿಸಿದ್ದೇನೆ. ತಾಲೂಕಿನಲ್ಲಿ ಸಿಎ ನಿವೇಶನ ಗುರುತಿಸಿ ಸಂಘಕ್ಕೆ ನೀಡಲಾಗುವುದು ಎಂದು ಭರವಸೆ ನೀಡಿದರು.

ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಬೀಚನಹಳ್ಳಿ ಮಂಜು ಮಾತನಾಡಿ, ಶಾಸಕರ ಸಹಕಾರದೊಂದಿಗೆ ಕಳೆದ ಕೆಲವು ವರ್ಷಗಳಿಂದ ಪತ್ರಿಕಾ ದಿನಾಚರಣೆ ಅಂಗವಾಗಿ ಸಂಘದ ವತಿಯಿಂದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುತ್ತಿದೆ. ತಾಲೂಕಿನಲ್ಲಿ ಪತ್ರಕರ್ತರ ಭವನದ ಅವಶ್ಯಕತೆ ಇರುವುದರಿಂದ ಶಾಸಕರು ಈ ಬಗ್ಗೆ ಗಮನಹರಿಸುವಂತೆ ಕೋರಿದರು.

ತಾಲೂಕಿನ ಹಲವು ಪತ್ರಕರ್ತರು ಸ್ವಂತ ಮನೆ ಇಲ್ಲದೇ ಇಲ್ಲದೆ ಬಾಡಿಗೆ ಮನೆಯಲ್ಲಿ ಜೀವನ ಸಾಗಿಸುತ್ತಿದ್ದಾರೆ. ಅಂತಹ ಪತ್ರಕರ್ತರನ್ನು ಗುರುತಿಸಿ ಅವರಿಗೆ ನಿವೇಶನ ದೊರಕಿಸಿಕೊಡಬೇಕು ಎಂದು ಮನವಿ ಮಾಡಿದರು.



ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಪ್ರತಿಭಾ ಪುರಸ್ಕಾರ: ಇದೇ ವೇಳೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಾದ ಎನ್.ನಂದಿನಿ, ಸಹನಾ, ಸಿಂಚನಾ, ವಸಂತ ಮತ್ತು ಪತ್ರಕರ್ತರ ಪ್ರತಿಭಾವಂತ ಮಕ್ಕಳಾದ ಹೆಚ್.ಡಿ.ಭರತ್ ಹಾಗೂ ಎಸ್.ಪಿ.ಸಮರ್ಥ್ ಅವರನ್ನು ಸನ್ಮಾನಿಸಲಾಯಿತು. ಅಲ್ಲದೇ ಪತ್ರಕರ್ತ ಮಂಜು ಕೋಟೆ ಅವರನ್ನು ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಅಂತರಸಂತೆ ಠಾಣೆ ಎಸ್‌ಐ ಚಂದ್ರಹಾಸ, ಮುಖಂಡ ಪ್ರದೀಪ್, ಉಪಾಧ್ಯಕ್ಷ ಮಹೇಶ್, ಪ್ರಧಾನ ಕಾರ್ಯದರ್ಶಿ ನಾಗರಾಮ, ಕಾರ್ಯದರ್ಶಿ ದೊಡ್ಡಸಿದ್ದು, ಖಜಾಂಚಿ ಮಂಜುಕೋಟೆ, ನಿರ್ದೇಶಕರಾದ ರಂಗರಾಜು, ರೇಣುಕಾ, ಪುಟ್ಟರಾಜು, ರವಿ ಕುಮಾರ್ ಆರಾಧ್ಯ, ನಾಗೇಶ್, ಜಿ.ರವಿಕುಮಾರ್, ಸದಸ್ಯರಾದ ವಾಸುಕಿ ನಾಗೇಶ್, ಸುರೇಶ್, ಪುರುಷೋತ್ತಮ್, ದಾಸೇಗೌಡ, ಚಂದ್ರು, ಕನ್ನಡ ಪ್ರಮೋದ್, ಚಿಕ್ಕಣ್ಣೆಗೌಡ, ಆನಂದ, ಪತ್ರಕರ್ತರ ಕುಟುಂಬದವರು ಹಾಗೂ ವಿದ್ಯಾರ್ಥಿಗಳ ಕುಟುಂಬದವರು ಹಾಜರಿದ್ದರು.

ನಾನು 2ನೇ ಬಾರಿಗೆ ಶಾಸಕನಾಗಿ ಕ್ಷೇತ್ರದ ಹೆಚ್ಚಿನ ಅಭಿವೃದ್ಧಿ ಒತ್ತು ಕೊಡುತ್ತಿದ್ದೇನೆ. ಅದಕ್ಕೆ ಮುಖ್ಯ ಕಾರಣ ಪತ್ರಕರ್ತರು. ಏಕೆಂದರೆ ತಾಲೂಕಿನಲ್ಲಿ ಅಭಿವೃದ್ಧಿ ಕುಂಠಿತವಾದರೆ ಆ ಮಾಹಿತಿಯನ್ನು ಎಚ್ಚರಿಕೆಯಾಗಿ ನೀಡುವವರೇ ಪತ್ರಕರ್ತರು. ಅವರ ಮಾರ್ಗದರ್ಶನದ ಮೇರೆಗೆ ತಾಲೂಕಿನಲ್ಲಿ ಇನ್ನೂ ಹೆಚ್ಚಿನ ಅಭಿವೃದ್ಧಿಗೆ ಮುಂದಾಗುತ್ತೇನೆ.
–ಅನಿಲ್, ಶಾಸಕ

ಮೈಸೂರು ಮಿತ್ರ

ಜು.6, 7ರಂದು ಎಂಟನೇ ಆವೃತ್ತಿಯ 'ಮೈಸೂರು ಸಾಹಿತ್ಯ ಸಂಭ್ರಮ'

● ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಚಾಲನೆ; ನಟ ರಮೇಶ್ ಅರವಿಂದ್, ಪರಿಸರ ಪ್ರೇಮಿ ಸುರೇಶ್ ಹೆಬ್ಳೀಕರ್ ಇತರರು ಭಾಗಿ ● ಸಾಹಿತ್ಯ ಉತ್ಸವದಲ್ಲಿ ಗೋಷ್ಠಿ, ಸಂವಾದ, ವಿವಿಧ ಕಲಾ ಪ್ರಾಕಾರ ಪ್ರದರ್ಶನ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಮೈಸೂರು ಸಾಹಿತ್ಯ ಸಂಭ್ರಮದ ಪೋಸ್ಟರ್ ಅನ್ನು ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷೆ ಶುಭಾ ಸಂಜಯ್ ಅರಸ್ ಬಿಡುಗಡೆ ಮಾಡಿದರು.

ಮೈಸೂರು, ಜು.2(ಎಂಟಿವೈ)– ಮೈಸೂರಿನ ಸದರ್ನ್ ಸ್ಟಾರ್ ಸಭಾಂಗಣದಲ್ಲಿ ಜು.6 ಮತ್ತು 7ರಂದು ಎಂಟನೇ ಆವೃತ್ತಿಯ 'ಮೈಸೂರು ಸಾಹಿತ್ಯ ಸಂಭ್ರಮ' ಆಯೋಜಿಸಲಾಗಿದೆ ಎಂದು ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷೆ ಶುಭಾ ಸಂಜಯ್ ಅರಸ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ಬುಕ್ ಕ್ಲಬ್ಸ್ ವತಿಯಿಂದ ಆಯೋಜಿಸಿರುವ ಮೈಸೂರು ಸಾಹಿತ್ಯ ಸಂಭ್ರಮಕ್ಕೆ ಜು.6ರಂದು ಬೆಳಗ್ಗೆ 9.30ಕ್ಕೆ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಚಾಲನೆ ನೀಡಲಿದ್ದಾರೆ. ಕಾರ್ಯಕ್ರಮದಲ್ಲಿ ಚಲನಚಿತ್ರ ನಟ ರಮೇಶ್ ಅರವಿಂದ್ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ಬಳಿಕ ಇಂಗ್ಲಿಷ್ ಗೋಷ್ಠಿಯನ್ನು ಪ್ರಮೋದಾದೇವಿ ಒಡೆಯರ್ ಉದ್ಘಾಟಿಸಲಿದ್ದು, ಪರಿಸರ ತಜ್ಞ ಮತ್ತು ನಟ ಸುರೇಶ್ ಹೆಬ್ಳೀಕರ್ ಗೌರವ ಅತಿಥಿಯಾಗಿ ಪಾಲ್ಗೊಳ್ಳುವರು. ಲೇಖಕ ಮತ್ತು ಉದ್ಯಮಿ ಅರೂನ್ ರಮಣ್ ಪಾಲ್ಗೊಳ್ಳಲಿದ್ದಾರೆ. ಈ ಸಂಭ್ರಮದ ಇಂಗ್ಲಿಷ್ ಗೋಷ್ಠಿಯಲ್ಲಿ ಗ್ರಾಮ್ ಸಂಸ್ಥೆಯ ಸಂಸ್ಥಾಪಕ ಡಾ. ಬಾಲಸುಬ್ರಮಣ್ಯಂ ಅವರ 'ಪವರ್ ವಿತಿನ್ ನರೇಂದ್ರಮೋದಿ' ಕೃತಿಯನ್ನು ಲೇಖಕ ಡಾ. ವಿಕ್ರಂ ಸಂಪತ್ ಬಿಡುಗಡೆ ಮಾಡಲಿದ್ದು, ಎಕ್ಸೆಲ್ ಸಾಫ್ಟ್‌ನ ಚೇರ್ಮನ್ ಸುಧನ್ವ ಧನಂಜಯ್ ಮೊದಲ ಪ್ರತಿಯನ್ನು ಸ್ವೀಕರಿಸಲಿದ್ದಾರೆ ಎಂದರು.

ಜು. 6ರಂದು ಮಧ್ಯಾಹ್ನ 12.45ಕ್ಕೆ ರಮೇಶ್ ಅರವಿಂದ್ ಅವರು 'ಬೆಳ್ಳಿತೆರೆಯಿಂದ ಬರವಣಿಗೆಗೆ: ಪ್ರೀತಿಯಿಂದ ರಮೇಶ್' ಗೋಷ್ಠಿ ನಡೆಸಿಕೊಡಲಿದ್ದಾರೆ. ಮಧ್ಯಾಹ್ನ 1.15ಕ್ಕೆ 'ಕಾಡು–ನಾಡು– ಕಾಪಾಡು' ಸಾಹಿತ್ಯ ಸಿನಿಮಾ ಮತ್ತು ಪರಿಸರ ಚಿಂತನೆ ಕುರಿತ ವಿಚಾರ ಸಂಕಿರಣದಲ್ಲಿ ಸುರೇಶ್ ಹೆಬ್ಳೀಕರ್, ಶಶಿಧರ ಹಾಲಾಡಿ, ಲಕ್ಷ್ಮೀಕಾಂತರಾಜೇ ಅರಸ್ ಮಾತನಾಡಲಿದ್ದಾರೆ.

ಮಧ್ಯಾಹ್ನ 2.15ಕ್ಕೆ 'ಸಿರಿಧಾನ್ಯಗಳ ಸರದಾರ' ಸುಸ್ಥಿರ ಬದುಕನ್ನು ಬಾಳುವುದು ಹೇಗೆ ವಿಷಯ ಕುರಿತು ಡಾ. ಖಾದರ್ ವಲ್ಲಿ ದೂದೇಕುಲ ಮಾತನಾಡಲಿದ್ದಾರೆ. ಮಧ್ಯಾಹ್ನ 3.15ಕ್ಕೆ 'ಸುದ್ದಿ ಸರ್ಕಸ್‌ಗಳ ನಡುವೆ ಮಾಧ್ಯಮಗಳ ಜವಾಬ್ದಾರಿಗಳು' ಕುರಿತ ವಿಚಾರ ಸಂಕಿರಣದಲ್ಲಿ ಹಿರಿಯ ಪತ್ರಕರ್ತರಾದ ರವೀಂದ್ರಭಟ್ಟ, ಅಂಶಿ ಪ್ರಸನ್ನಕುಮಾರ್, ಧರ್ಮೇಂದ್ರಕುಮಾರ್ ವಿಷಯ ಮಂಡಿಸಲಿದ್ದಾರೆ. ಸಂಜೆ 4.15ಕ್ಕೆ 'ಸರೋದ್ ಮಾಂತ್ರಿಕನ ಸುಮಧುರ ನೆನಪುಗಳು' ಕುರಿತು ಸುರೇಶ್ ಹೆಬ್ಳೀಕರ್, ರೂಮಿ ಹರೀಶ್ ಮತ್ತು ಕೃಷ್ಣ ಮನವಳ್ಳಿ ಮಾತನಾಡುವರು. ಸಂಜೆ 4.30ಕ್ಕೆ 'ಕನ್ನಡ ಕಾವ್ಯ ಕಣಜ' ನಾಟಕ ಪ್ರದರ್ಶನ ಏರ್ಪಡಿಸಲಾಗಿದ್ದು, ಮಂಡ್ಯ ರಮೇಶ್ ನಿರ್ದೇಶನವಿದೆ.

ಜು.7ರಂದು ಬೆಳಗ್ಗೆ 9.30ಕ್ಕೆ 'ಏಕವ್ಯಕ್ತಿ ತಾಳ ಮದ್ದಲೆ'ಯನ್ನು ಕೆರೆಹೊಂಡ ದಿವಾಕರ ಹೆಗಡೆ ತಂಡದವರು ಪ್ರಸ್ತುತಪಡಿಸಲಿದ್ದಾರೆ. ಬೆಳಗ್ಗೆ 10.30ಕ್ಕೆ 'ರಾಷ್ಟ್ರ ಪ್ರಶಸ್ತಿಗಳ ಸುರಿಮಳೆ: ಕಾಸರವಳ್ಳಿ ಮಾಯಾ ಲೋಕ' ಕುರಿತು ಗಿರೀಶ್ ಕಾಸರವಳ್ಳಿ, ದೀಪಾ ರವಿಶಂಕರ್, ಗೋಪಾಲಕೃಷ್ಣ ಪೈ ಮಾತನಾಡಲಿದ್ದಾರೆ. ಬೆಳಗ್ಗೆ 11.30ಕ್ಕೆ 'ಭಾಷಾ ಪಾಂಡಿತ್ಯ ಸೃಜನಶೀಲತೆಯನ್ನು ಮಸಕು ಮಾಡುವುದೇ?' ವಿಷಯ ಕುರಿತು ಕಬ್ಬಿನಾಲೆ ವಸಂತ ಭಾರದ್ವಾಜ್ ಮಾತನಾಡಲಿದ್ದಾರೆ.

ಮಧ್ಯಾಹ್ನ 12ಕ್ಕೆ 'ನಗಿಸುವವನ ಮನದ ಮಾತಿನಲ್ಲಿ' ಗಂಗಾವತಿ ಪ್ರಾಣೇಶ್, ಡಾ. ಮಾಧುರಿ ಕುಲಕರ್ಣಿ ಪಾಲ್ಗೊಳ್ಳುವರು. ಮಧ್ಯಾಹ್ನ 12.45ಕ್ಕೆ 'ಅಂತರ್ಜಾಲ ಯುಗದಲ್ಲಿ ಸಂಬಂಧಗಳ ಸುಳಿಗಳು' ಕುರಿತು ಉಷಾ ನರಸಿಂಹನ್, ಬಿ.ಆರ್. ನಾಗರತ್ನ, ಎನ್. ಸಂಧ್ಯಾರಾಣಿ, ವಸುಮತಿ ಉಡುಪ ವಿಷಯ ಮಂಡಿಸಲಿದ್ದಾರೆ. ಮಧ್ಯಾಹ್ನ 1.45ಕ್ಕೆ 'ಆನ್‌ಲೈನ್ ಸಂಬಂಧಗಳ ಸಮಾಜದಲ್ಲಿ ಕವನಗಳ ಪ್ರಸ್ತುತತೆ' ಕುರಿತು ಹೆಚ್.ಎಸ್. ಶಿವಪ್ರಕಾಶ್, ಡಾ.ಬಿ.ಆರ್. ಶ್ರುತಿ, ಮಧುರಾಣಿ, ಅರೀಫ್ ರಾಜ, ರಾಜೇಂದ್ರ ಪ್ರಸಾದ್ ಮಾತನಾಡಲಿದ್ದಾರೆ.

ಮಧ್ಯಾಹ್ನ 2.45ಕ್ಕೆ 'ಅಜ್ಞಾತ ಅಲೆಮಾರಿ ಕಲಾವಿದರ ಜತೆಗೆ 60 ನಿಮಿಷಗಳು' ಕಾರ್ಯಕ್ರಮದಲ್ಲಿ ಶಿಳ್ಳೆಕ್ಯಾತರ ಮಂಜುನಾಥ್, ಹೆಳವರಸೊಲ್ಲಿನ ಮಲ್ಲಯ್ಯ ಮ್ಯೂಜಿಕ್, ಕಲಾವಿದ ಸಯ್ಯದ್ ಮೌಲಾ, ದೊಂಬರ ನರಸಿಂಹ ಮತ್ತು ರಾಣಿ ಇನ್ನಿತರರು ಪಾಲ್ಗೊಳ್ಳಲಿದ್ದು, ಅಬ್ದುಲ್ ರಶೀದ್ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

ಮಧ್ಯಾಹ್ನ 3.45ಕ್ಕೆ 'ಪ್ರಕಾಶನ ಕಲೆ– ಓದುಗರ ಮತ್ತು ಲೇಖಕರ ನಡುವಿನ ಕೊಂಡಿ' ವಿಷಯದಲ್ಲಿ ಜಮೀಲ್ ಸಾವಣ್ಣ, ಪ್ರತಿಭಾ ಛಾಯಾಪತಿ, ನಿಂಗರಾಜು ಚಿತ್ತಣ್ಣನವರ್, ಅಭಿರುಚಿ ಗಣೇಶ್, ಮೀನಾ ಮೈಸೂರು ಮಾತನಾಡುವರು. ಸಂಜೆ 4.45ಕ್ಕೆ 'ಭಾಷಾಂತರ ಸಾಂಸ್ಕೃತಿಕ ಸಂಬಂಧಗಳ ಜಾಲತಾಣದ ಪಾಸ್‌ವರ್ಡ್' ಕುರಿತು ಡಾ. ಪ್ರಧಾನ ಗುರುದತ್ತ ಮಾತನಾಡುವರು. ವಿಕ್ರಂ ಚದುರಂಗ, ಧರ್ಮೇಂದ್ರ ಕುಮಾರ್ ಪಾಲ್ಗೊಳ್ಳುವರು. ಸಂಜೆ 5.30ಕ್ಕೆ 'ಸಮಾಜ ಪರ ಪೊಲೀಸ್: ಬಲಾಢ್ಯ ಹೃದಯವಂತಿಕೆ' ಕುರಿತು ಐಪಿಎಸ್ ಅಧಿಕಾರಿ ರವಿ ಚನ್ನಣ್ಣನವರ್ ಮಾತನಾಡಲಿದ್ದಾರೆ ಎಂದು ವಿವರಿಸಿದರು.

ಇಂಗ್ಲಿಷ್ ಆವೃತ್ತಿಯ ಗೋಷ್ಠಿಗಳಲ್ಲಿ ಅಶ್ವಿನಿ ಸಾಂಘಿ, ಗಿರೀಶ್ ಕಾಸರವಳ್ಳಿ, ಇತಿಹಾಸಕಾರ ವಿಕ್ರಮ್ ಸಂಪತ್, ಅರೂನ್ ರಮಣ್, ರಾಜೇಶ್ ರಾಮಚಂದರ್, ಶಾಂತನು ರಾಯ್ ಚೌಧರಿ, ಮೈಥಿಲಿ ರಾವ್, ಬಾಲಾಜಿ ವಿಠಲ್, ಶುಭಾ ನಾರಾಯಣ್, ಮೋನಿಕಾ ಮೊನಾಲಿಸ್ಟ್, ವಿಜಯ್ ಬಾಲನ್, ಶಶಿಕಲಾ ರಾಮನಾಥ್, ರುಗ್ಮಿನಿ ಪ್ರಭಾಕರ್, ಕವಿತಾ ರತ್ನ, ಸೋನ್ಯ ಜೆ. ನಾಯರ್, ಸೋನಾಲಿ ಪಟ್ನಾಯಕ್, ಅನುಜಾ ಚಂದ್ರಮೌಳಿ, ರವಿ ಜೋಷಿ, ನಿಖಿಲ್ ಜೆ. ಆಳ್ವಾ, ಕೃಷ್ಣನ್ ಶ್ರೀನಿವಾಸನ್, ಸೋನಾಜಿ ಸಬರ್ವಾಲ್ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು. ಇದೇ ವೇಳೆ ಲಿಟರರಿ ಫೆಸ್ಟ್‌ನ ಪೋಸ್ಟರ್ ಬಿಡುಗಡೆಗೊಳಿಸಲಾಯಿತು. ಸುದ್ದಿಗೋಷ್ಠಿಯಲ್ಲಿ ಶ್ಯಾಮ್ ಚೆರಿಯನ್, ಸಿ.ಆರ್. ಹನುಮಂತ್, ದಿವ್ಯಶ್ರೀ, ಸುಚಿತಾ ಇದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಬಿಲ್ಲಾ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಮಹಾರಾಜ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕಲ್ಕಿ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಜಡ್ಜ್‌ಮೆಂಟ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಲ್ಕಿ (ಕ)	4 ಪ್ರದರ್ಶನಗಳು
ರಾಜಕಮಲ್	
ಗರುಡನ್ (ತ)	4 ಪ್ರದರ್ಶನಗಳು
ಸಂಗಂ	
ಕೋಟಿ (ಕ)	4 ಪ್ರದರ್ಶನಗಳು
ಲಿಡೋ	
ಪೊಕ್ರಿ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಮುಂಜ್ಯಾ (ಹಿಂ)	4 ಪ್ರದರ್ಶನಗಳು
ಪ್ರಭಾ	
ಶತಭಿಷ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕಲ್ಕಿ 2898 ಎಡಿ(3ಡಿ) (ತೆ): ಬೆ.11.45ಕ್ಕೆ, ಮ.3.15ಕ್ಕೆ, ಕಲ್ಕಿ 2898 ಎಡಿ(3ಡಿ) (ಹಿಂ): ಸಂ.6.45ಕ್ಕೆ, ರಾ.10.15ಕ್ಕೆ.
ಸ್ಕ್ರೀನ್ 2	ಲವ್ ಲಿ (ಕ): ಬೆ.10.30ಕ್ಕೆ, ಮುಂಜ್ಯಾ (ಹಿಂ): ಮ.1.35ಕ್ಕೆ, ಕಲ್ಕಿ 2898 ಎಡಿ(3ಡಿ) (ತೆ): ಸಂ.4ಕ್ಕೆ, ರಾ.9.45ಕ್ಕೆ, ಪ್ಯಾರಡೈಸ್ (ಮ): ರಾ.7.30ಕ್ಕೆ.
ಸ್ಕ್ರೀನ್ 3	ಎ ಕ್ವೈಟ್ ಪ್ಲೇಸ್ ಡೇ ಒನ್ (ಇಂ): ಬೆ.10.50ಕ್ಕೆ, ರಾ.10.10ಕ್ಕೆ, ಕಲ್ಕಿ 2898 ಎಡಿ (ಕ): ಮ.1ಕ್ಕೆ, ಮಹಾರಾಜ (ತ): ಸಂ.4.25ಕ್ಕೆ, ಕೋಟಿ (ಕ): ರಾ.7.10ಕ್ಕೆ.
ಸ್ಕ್ರೀನ್ 4	ಕಲ್ಕಿ 2898 ಎಡಿ(3ಡಿ) (ತೆ): ಬೆ.9.45ಕ್ಕೆ, ಮ.1.15ಕ್ಕೆ, ಸಂ.6.40ಕ್ಕೆ, ರಾ.10.10ಕ್ಕೆ, ಇನ್‌ಸೈಡ್ ಔಟ್ (3ಡಿ)(ಇಂ): ಸಂ.4.40ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಇನ್‌ಸೈಡ್ ಔಟ್ (3ಡಿ)(ಹಿಂ): ಬೆ.11ಕ್ಕೆ, ಇನ್‌ಸೈಡ್ ಔಟ್ (3ಡಿ)(ಇಂ): ಮ.1.20ಕ್ಕೆ, ಸಂ.4.20ಕ್ಕೆ, ಸಂ.6.40ಕ್ಕೆ, ಮುಂಜ್ಯಾ (ಹಿಂ): ರಾ.9ಕ್ಕೆ.
ಸ್ಕ್ರೀನ್ 2	ಮುಂಜ್ಯಾ (ಹಿಂ): ಬೆ.10ಕ್ಕೆ, ರಾ.7.35ಕ್ಕೆ, ರಾಕ್‌ಸ್ಟಾರ್ (ಹಿಂ): ಮ.12.45ಕ್ಕೆ, ಕೋಟಿ (ಕ): ಸಂ.4.05ಕ್ಕೆ, ರಾ.10.20ಕ್ಕೆ,
ಸ್ಕ್ರೀನ್ 3	ಚಂದು ಚಾಂಪಿಯನ್ (ಹಿಂ): ಬೆ.9.50ಕ್ಕೆ, ಮ.1ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 4	ಕೋಟಿ (ಕ): ಬೆ.10.05ಕ್ಕೆ, ಮಹಾರಾಜ (ತ): ಮ.1.35ಕ್ಕೆ, ರಾ.7.05ಕ್ಕೆ, ಶಿವಮ್ಮ ಹರೆಹಂಚಿನಾಳ (ಕ): ಸಂ.4.40ಕ್ಕೆ, ಜಿಆರ್‌ಆರ್‌ಆರ್ (ಮ): ರಾ.10.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಲವ್ ಲಿ (ಕ): ಬೆ.10.45ಕ್ಕೆ, ಮ.3.35ಕ್ಕೆ, ಕರ್ಮದೊಳಗೆ (ಕ): ಮ.1.40ಕ್ಕೆ, ಕೋಟಿ (ಕ): ಸಂ.6.25ಕ್ಕೆ, ಮಹಾರಾಜ (ತ): ರಾ.9.30ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ(3ಡಿ) (ತೆ): ಬೆ.10.30ಕ್ಕೆ, ಮ.2.30ಕ್ಕೆ, ಸಂ.6ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಕಲ್ಕಿ 2898 ಎಡಿ (ಕ): ಮ.1ಕ್ಕೆ, ಸಂ.4.25ಕ್ಕೆ, ರಾ.7.50ಕ್ಕೆ.
ಸ್ಕ್ರೀನ್ 4	ಲವ್ ಲಿ (ಕ): ಮ.1ಕ್ಕೆ, ಕಲ್ಕಿ 2898 ಎಡಿ(3ಡಿ) (ತೆ): ಸಂ.4ಕ್ಕೆ, ರಾ.7.25ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ನಾರಾಯಣ ಆಸ್ಪತ್ರೆಯಲ್ಲಿ ಕ್ಯಾನ್ಸರ್ ಗೆದ್ದವರ ಸಭೆ



ಮೈಸೂರು, ಜು.2–ಮೈಸೂರು ನಾರಾಯಣ ಆಸ್ಪತ್ರೆ ವತಿಯಿಂದ ಇತ್ತೀಚೆಗೆ 'ಜೊತೆಯಾಗಿ ನಾವು, ಏನನ್ನಾದರೂ ಸಾಧಿಸಬಹುದು' ಘೋಷವಾಕ್ಯದೊಂದಿಗೆ ಕ್ಯಾನ್ಸರ್ ಗೆದ್ದವರ ಸಭೆಯನ್ನು ಆಯೋಜಿಸಲಾಗಿತ್ತು. ರೋಗ ಗುಣಪಡಿಸುವ ಬಗ್ಗೆ ಜಾಗೃತಿ ಮೂಡಿಸಲು ಮತ್ತು ರೋಗದ ವಿರುದ್ಧ ಹೋರಾಡುವ ಆತ್ಮವಿಶ್ವಾಸವನ್ನು ಹೆಚ್ಚಿಸುವ ಗುರಿಯೊಂದಿಗೆ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.


ಕ್ಯಾನ್ಸರ್‌ನಿಂದ ಬದುಕುಳಿದ ನೂರಾರು ಜನರು ತಮ್ಮ ಸ್ಫೂರ್ತಿದಾಯಕ ಪ್ರಯಾಣ ಮತ್ತು ತಮ್ಮ ವಿಜಯಗಾಥೆಯನ್ನು ಹಂಚಿಕೊಳ್ಳುವುದರ ಜೊತೆಗೆ ನಾರಾಯಣ ಆಸ್ಪತ್ರೆಯ ಆಂಕೊಲಜಿ ತಂಡವು ಒದಗಿಸಿದ ಬೆಂಬಲ ಮತ್ತು ಪರಿಣತಿಗೆ ಕೃತಜ್ಞತೆ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮೈಸೂರು ವಿಭಾಗದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಡಾ. ಕೆ.ಎಚ್.ಪ್ರಸಾದ್ ಕಾರ್ಯಕ್ರಮ ಉದ್ಘಾಟನೆ ನಂತರ ಮಾತನಾಡಿ, ಮೈಸೂರಿನ ನಾರಾಯಣ ಆಸ್ಪತ್ರೆಯಲ್ಲಿ ದೊರಕುತ್ತಿರುವ ಸಮಗ್ರ ಕ್ಯಾನ್ಸರ್ ಚಿಕಿತ್ಸೆಯಿಂದಾಗಿ ಈ ಭಾಗದ ಸಾವಿರಾರು ಕ್ಯಾನ್ಸರ್ ರೋಗಿಗಳು ತಮ್ಮ ಜೀವ ಉಳಿಸಿಕೊಂಡಿದ್ದಾರೆ. ಕ್ಯಾನ್ಸರ್ ರೋಗವನ್ನು ಗೆದ್ದ ತಮ್ಮ ಸ್ಥೈರ್ಯಶಾಲಿ ಜೀವನ ಸುಖಕರವಾಗಿರಲಿ. ಸಮಗ್ರ ಕ್ಯಾನ್ಸರ್ ಚಿಕಿತ್ಸೆಯಲ್ಲಿ ಎಂಟು ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿದ ನಾರಾಯಣ ಆಸ್ಪತ್ರೆಯ ಆಂಕೊಲಜಿ ತಂಡಕ್ಕೆ ಅಭಿನಂದನೆಗಳು ಎಂದು ತಿಳಿಸಿದರು.

ಆಸ್ಪತ್ರೆಯ ಕ್ಲಿನಿಕಲ್ ನಿರ್ದೇಶಕರಾದ ಡಾ. ಎಂ.ಎನ್.ರವಿ ಮಾತನಾಡಿ, ನಾವು ಕ್ಯಾನ್ಸರ್‌ಗೆ ವೈದ್ಯಕೀಯವಾಗಿ ಚಿಕಿತ್ಸೆ ನೀಡುವುದು ಮಾತ್ರವಲ್ಲದೆ ನಮ್ಮ ರೋಗಿಗಳಿಗೆ ಸಹಾನುಭೂತಿಯ ಆರೈಕೆಯನ್ನು ನೀಡುತ್ತೇವೆ. ಈ ಕಾರ್ಯಕ್ರಮದ ಮುಖ್ಯ ಉದ್ದೇಶ ನಾವು ನಮ್ಮ ರೋಗಿಗಳೊಂದಿಗೆ ಅವರ ಜೀವನದುದ್ದಕ್ಕೂ ಇರುತ್ತೇವೆ ಎಂದು ಆಶ್ವಾಸನೆ ನೀಡುವುದು. ಅವರು ಗುಣಮಟ್ಟದ ಜೀವನವನ್ನು ನಡೆಸಲು ಸಹಾಯ ಮಾಡುವುದು. ನಾವು ಕ್ಯಾನ್ಸರ್ ರೋಗಕ್ಕೆ ನೀಡುವ ಸಮಗ್ರ ಚಿಕಿತ್ಸೆಯಲ್ಲಿ ಕೇವಲ ದೈಹಿಕ ಮಾತ್ರವಲ್ಲದೆ ನಮ್ಮ ರೋಗಿಗಳ ಭಾವನಾತ್ಮಕ ಮತ್ತು ಮಾನಸಿಕ ಅಗತ್ಯಗಳನ್ನೂ ತಿಳಿಸುತ್ತೇವೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ನಾರಾಯಣ ಆಸ್ಪತ್ರೆಯ ಆಂಕೊಲಜಿ ವಿಭಾಗದ ತಜ್ಞ ವೈದ್ಯರಾದ ಡಾ. ಸುಹಾಸ್ ಕೆ.ಆರ್., ಡಾ. ಲೋಕೇಶ್ ಎಚ್.ಎಂ., ಡಾ. ಮೇಖಲಾ ಶ್ವೇತಾದ್ರಿ, ಡಾ. ತರಂಗಿಣಿ ದುರುಗಪ್ಪ, ಡಾ. ವಿದ್ಯಾಜಿ, ಡಾ. ನಿತಿನ್ ರಾಜ್ ಡಿ. ಉಪಸ್ಥಿತರಿದ್ದರು.

ಪರಿಶಿಷ್ಟ ಪಂಗಡಕ್ಕೆ ನಿಗಮ ಮಂಡಳಿಯಲ್ಲೂ ಪ್ರಾಧಾನ್ಯತೆ ನೀಡಲು ಶಾಸಕ ಅನಿಲ್ ಕುಮಾರ್ ಆಗ್ರಹ

ಪರಿಶಿಷ್ಟ ಪಂಗಡದ ಜಿಲ್ಲಾಧ್ಯಕ್ಷರ ಪದಗ್ರಹಣ



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಮಂಗಳವಾರ ಜಿಲ್ಲಾ ಪರಿಶಿಷ್ಟ ಪಂಗಡಗಳ ವಿಭಾಗದ ಜಿಲ್ಲಾಧ್ಯಕ್ಷರ ಪದಗ್ರಹಣ ಕಾರ್ಯಕ್ರಮ ನಡೆಯಿತು.

ಮೈಸೂರು, ಜು.2(ಎಸ್‌ಬಿಡಿ)– ಪರಿಶಿಷ್ಟ ಪಂಗಡ(ಎಸ್‌ಟಿ)ಕ್ಕೆ ಎಲ್ಲಾ ರೀತಿಯಲ್ಲೂ ಶಕ್ತಿ ತುಂಬಿರುವುದು ಕಾಂಗ್ರೆಸ್ ಪಕ್ಷ ಮಾತ್ರ. ನಿಗಮ ಮಂಡಳಿಗೆ ಸದಸ್ಯರ ನೇಮಕಾತಿಯಲ್ಲೂ ಪ್ರಾಧಾನ್ಯತೆ ನೀಡುವ ಮೂಲಕ ಸಮುದಾಯದ ಬೆಳವಣಿಗೆಗೆ ಮತ್ತಷ್ಟು ಸಹಕಾರ ನೀಡುವಂತೆ ಹಳೇ ಮೈಸೂರು ಭಾಗದಲ್ಲಿ ಬೃಹತ್ ಎಸ್‌ಟಿ ಸಮಾವೇಶ ನಡೆಸುವ ಮೂಲಕ ಸರ್ಕಾರಕ್ಕೆ ಮನವಿ ಮಾಡಲು ಸಿದ್ಧತೆ ನಡೆದಿದೆ ಎಂದು ಜಂಗಲ್ ಲಾಡ್ಜಸ್ ಅಧ್ಯಕ್ಷ, ಶಾಸಕ ಸಿ.ಅನಿಲ್‌ಕುಮಾರ್ ತಿಳಿಸಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಮಂಗಳವಾರ ನಡೆದ ಜಿಲ್ಲಾ ಪರಿಶಿಷ್ಟ ಪಂಗಡಗಳ ವಿಭಾಗದ ಜಿಲ್ಲಾಧ್ಯಕ್ಷ ನಾಗವಾಲ ಮಹೇಶ್ ಪದಗ್ರಹಣ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ನಮ್ಮ ಸಮುದಾಯಕ್ಕೆ ಕಾಂಗ್ರೆಸ್ ಪಕ್ಷ ಅಧಿಕಾರ ಕಲ್ಪಿಸುವ ಮೂಲಕ ರಾಜಕೀಯವಾಗಿ ಶಕ್ತಿ ತುಂಬಿದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ 15 ಕ್ಷೇತ್ರಗಳಲ್ಲಿ ಅವಕಾಶ ನೀಡಿದೆ. ಮುಂದಿನ ದಿನಗಳಲ್ಲಿ ಒಂದು ಎಂಎಲ್‌ಸಿ ಸ್ಥಾನವನ್ನಾದರೂ ಸಮುದಾಯಕ್ಕೆ ಕಲ್ಪಿಸಬೇಕು. ನಿಗಮ ಮಂಡಳಿಗಳಿಗೆ ಸದಸ್ಯರ ನೇಮಿಸುವಾಗ ಎಸ್‌ಟಿ ಸಮುದಾಯದವರನ್ನು ಪರಿಗಣಿಸಬೇಕು. ಪಕ್ಷದ ಸಂಘಟನೆ ದೃಷ್ಟಿಯಿಂದ ಪದಾಧಿಕಾರಿಗಳ ನೇಮಕದಲ್ಲೂ ಹೆಚ್ಚು ಅವಕಾಶ ನೀಡಬೇಕು. ಹೀಗೆ ಸಮುದಾಯಕ್ಕೆ ರಾಜಕೀಯವಾಗಿ ಮತ್ತಷ್ಟು ಶಕ್ತಿ ತುಂಬುವಂತೆ ಸಮಾವೇಶದ ಮೂಲಕ ಸರ್ಕಾರವನ್ನು ಮನವಿ ಮಾಡಲಾಗುವುದು ಎಂದರು.

ಸಂಘಟನೆ ಬಹಳ ಮುಖ್ಯ: ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್ ಮಾತನಾಡಿ, ಪರಿಶಿಷ್ಟ ಪಂಗಡದ ಎಲ್ಲಾ ಸಣ್ಣ ಸಣ್ಣ ಸಮುದಾಯಗಳೂ ಒಗ್ಗೂಡಬೇಕು. ಎಲ್ಲಾ ಸಮುದಾಯಗಳಿಗೂ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಅವಕಾಶಗಳನ್ನು ಕಲ್ಪಿಸಿಕೊಡುವ ನಿಟ್ಟಿನಲ್ಲಿ ಪರಿಶಿಷ್ಟ ಪಂಗಡ ವಿಭಾಗ ಸಕ್ರಿಯವಾಗಿದೆ. ಈ ಕಾರ್ಯ ಮತ್ತಷ್ಟು ಚುರುಕುಗೊಳ್ಳಬೇಕು ಎಂದು ಸಲಹೆ ನೀಡಿದರು.

ಕೆಪಿಸಿಸಿ ಅಧ್ಯಕ್ಷರಾದ ಡಿ.ಕೆ.ಶಿವಕುಮಾರ್ ಅವರು, ನಿಷ್ಕ್ರಿಯವಾಗಿರುವ ಘಟಕಗಳಿಗೆ ಮರುಜೀವ ನೀಡಿ, ನೂತನ ಪದಾಧಿಕಾರಿಗಳನ್ನು ನೇಮಕ ಮಾಡಬೇಕು. ಸರಿಯಾಗಿ ಜವಾಬ್ದಾರಿ ನಿರ್ವಹಿಸದ ಬ್ಲಾಕ್ ಅಧ್ಯಕ್ಷರು ಮತ್ತು ಮುಂಚೂಣಿ ಘಟಕಗಳ ಅಧ್ಯಕ್ಷರ ಬದಲಾವಣೆಯಾಗಬೇಕು. ಕೆಪಿಸಿಸಿ ಸೂಚನೆ ಮೇರೆಗೆ ಮುಂಬರುವ ಜಿಲ್ಲಾ ಪಂಚಾಯಿತಿ ಮತ್ತು ತಾಲೂಕು ಪಂಚಾಯಿತಿ ಚುನಾವಣೆ ಸಂಬಂಧ ಸರಣಿ ಸಭೆಗಳು ಬುಧವಾರದಿಂದ ಪ್ರಾರಂಭಿಸಲಾಗುವುದು. ಶಾಸಕರು ಮತ್ತು ಸಚಿವರು ಆಗಾಗ್ಗೆ ಪಕ್ಷದ ಕಚೇರಿಗೆ ಭೇಟಿ ನೀಡಿ, ಕಾರ್ಯಕರ್ತರಿಗೆ ಉತ್ಸಾಹ ತುಂಬಬೇಕು ಎಂದು ಮನವಿ ಮಾಡಿದರು.

ಸೌಲಭ್ಯ ತಲುಪಿಸಿ: ಕೆಪಿಸಿಸಿ ಪರಿಶಿಷ್ಟ ಪಂಗಡಗಳ ವಿಭಾಗದ ಅಧ್ಯಕ್ಷ ವಿಜಯ್ ನಾಯಕ್ ಮಾತನಾಡಿ, ಪರಿಶಿಷ್ಟ ಪಂಗಡದವರಿಗೆ ಕಾಂಗ್ರೆಸ್ ಸರ್ಕಾರ ನೀಡಿರುವ ಸೌಲಭ್ಯಗಳ ಬಗ್ಗೆ ಜನರಲ್ಲಿ ಮನವರಿಕೆ ಮಾಡಿಕೊಡಬೇಕು. ಮುಂಬರುವ ಜಿಲ್ಲಾ ಪಂಚಾಯಿತಿ ಹಾಗೂ ತಾಲೂಕು ಪಂಚಾಯಿತಿ ಚುನಾವಣೆಗಳಲ್ಲಿ ಎಸ್‌ಟಿ ಸಮುದಾಯದ ಶಕ್ತಿಯನ್ನು ಸಾಬೀತುಪಡಿಸಬೇಕು. ಕೆಲಸ ಮಾಡದ ಪದಾಧಿಕಾರಿಗಳು ಬದಲಾವಣೆ ನಿಯಮಕ್ಕೆ ಸಜ್ಜಾಗಿರಬೇಕು. ಎಲ್ಲರನ್ನೂ ಒಗ್ಗೂಡಿಸಿಕೊಂಡು ಪಕ್ಷದ ಸಂಘಟನೆ ಮಾಡಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಬಸವರಾಜು, ನರೇಂದ್ರ ವಿವಿಧ ಘಟಕಗಳ ಪದಾಧಿಕಾರಿಗಳಾದ ತಲಕಾಡು ಮಂಜುನಾಥ್, ದೇವರಾಜ್, ಲತಾ ಸಿದ್ದಶೆಟ್ಟಿ, ಮಳಿಯೂರ್ ಸಂತೋಷ್, ಶಿವಪ್ರಸಾದ್, ದಾಸನೂರ ಪದ್ಮನಾಭ ಎಡತಲೆ ಮಂಜುನಾಥ್, ಅರುಣ್ ಕುಮಾರ್, ಲಕ್ಷ್ಮಣ್, ಯೋಗೀಶ್, ಪುಟ್ಟಸ್ವಾಮಿ, ಸಿದ್ಧಾರ್ಥ ನಾಯಕ, ಕೆಂಪನಾಯಕ, ಮಂಜುನಾಥ್, ಬನ್ನೂರು ಧನಂಜಯ್, ಮೊಸಿನ್ ಖಾನ್, ನಜರ್‌ಬಾದ್ ನಟ ರಾಜ್ ಮತ್ತಿತರರು ಭಾಗವಹಿಸಿದ್ದರು.

ಮುಡಾದಲ್ಲಿ ಬಿಜೆಪಿ ಸರ್ಕಾರದ ಅವಧಿಯಲ್ಲೇ ಭಾರಿ ಹಗರಣ ನಡೆದಿದೆ

● ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಎದಿರೇಟು ● ತನಿಖೆಗೆ ರಚನೆಯಾಗಿರುವ ತಂಡಕ್ಕೆ ದಾಖಲೆ ಸಲ್ಲಿಕೆ ● ಈಗಾಗಲೇ ಬಿಜೆಪಿ, ಜೆಡಿಎಸ್ ನಾಯಕರ ದಾಖಲೆ ಸಂಗ್ರಹ



ಮೈಸೂರಿನ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು,ಜು.2(ಎಂಟಿವೈ)– ಮುಡಾದಲ್ಲಿ ಬಿಜೆಪಿ ಸರ್ಕಾರದ ಅವಧಿಯಲ್ಲೇ ಭಾರಿ ಹಗರಣ ನಡೆದಿದ್ದು, ಅದನ್ನು ಮುಚ್ಚಿ ಹಾಕಲು ಇದೀಗ ಯಾವುದೇ ದಾಖಲೆ ಇಲ್ಲದೆ ಕಾಂಗ್ರೆಸ್ ಸರ್ಕಾರದ ಮೇಲೆ ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಆರೋಪಿಸಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದಲ್ಲಿ 2019–20ರಿಂದಲೂ ಭಾರಿ ಹಗರಣ ನಡೆದಿದೆ. 50:50 ಅನುಪಾತದಡಿ ನಿವೇಶನ ಮಂಜೂರಾತಿ ನಿಯಮಬಾಹಿರವಾಗಿ ನಡೆದಿದ್ದು, ಹಿಂದೆ ಮುಡಾ ಆಯುಕ್ತರಾಗಿದ್ದ ನಟೇಶ್ ಹಾಗೂ ಅಂದಿನ ಬಿಜೆಪಿ ಸರ್ಕಾರದ ಕೆಲವರು ಹಗರಣದಲ್ಲಿ ಭಾಗಿಯಾಗಿದ್ದಾರೆ. ಆದರೆ, ಅದನ್ನು ಮುಚ್ಚಿ ಹಾಕುವುದರೊಂದಿಗೆ ಜನರ ಗಮನ ಬೇರೆಡೆ ಸೆಳೆಯಲು ಇದೀಗ ಕಾಂಗ್ರೆಸ್ ಸರ್ಕಾರದ ವಿರುದ್ಧ ಆರೋಪ ಮಾಡುತ್ತಿದ್ದಾರೆ. ವಿಧಾನಪರಿಷತ್ ಸದಸ್ಯ ಎ.ಹೆಚ್. ವಿಶ್ವನಾಥ್ ಸೇರಿದಂತೆ ಬಿಜೆಪಿಯ ಕೆಲ ಮುಖಂಡರು ತಲೆ ಕೆಟ್ಟವರಂತೆ ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ಯಾವುದೇ ಆರೋಪ ಮಾಡಬೇಕಾದರೂ ದಾಖಲೆಗಳನ್ನು ನೀಡಬೇಕು. ಹಿಟ್ ಅಂಡ್ ರನ್ ರೀತಿ ಗಾಳಿಯಲ್ಲಿ ಗುಂಡು ಹಾರಿಸಿದಂತೆ ಮಾತನಾಡಬಾರದು. ಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಅವರು ಯಾರ ವಿರುದ್ಧ ಆರೋಪ ಮಾಡಿದರೂ ಒಂದಕ್ಕಾದರೂ ಅಗತ್ಯ ದಾಖಲೆ ನೀಡುವುದೇ ಇಲ್ಲ. ಮುಡಾ ವಿಚಾರದಲ್ಲೂ ಅವರದೇ ಪಕ್ಷದ ಅವಧಿಯಲ್ಲಿ ದೊಡ್ಡ ಪ್ರಮಾಣದ ಭ್ರಷ್ಟಾಚಾರ ನಡೆದಿದ್ದರೂ ಕಾಂಗ್ರೆಸ್ ವಿರುದ್ಧ ಆರೋಪ ಮಾಡಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಒಂದು ವರ್ಷವಾಗಿದೆ. ಈ ವೇಳೆ ಲೋಕಸಭಾ ಚುನಾವಣೆ ನೀತಿ ಸಂಹಿತೆ ಮೂರು ತಿಂಗಳು ಜಾರಿಯಲ್ಲಿತ್ತು. ಉಳಿದ ಅವಧಿಯಲ್ಲಿ ಬಿಜೆಪಿ ಹೇಳಿದಂತೆ ನಡೆದಿರುವ ಭ್ರಷ್ಟಾಚಾರದಲ್ಲಿ ಕಾಂಗ್ರೆಸ್ ನಾಯಕರು ಭಾಗಿಯಾಗಿಯೇ ಇಲ್ಲ. ನಮ್ಮ ಸರ್ಕಾರದ ಅವಧಿಯ ವೇಳೆ ಮುಡಾದಲ್ಲಿ 50:50 ಅನುಪಾತದಡಿ ನಿವೇಶನ ಮಂಜೂರು ಮಾಡಿರುವ ಪ್ರಕರಣದಲ್ಲಿ ಮುಡಾ ಆಯುಕ್ತ ದಿನೇಶ್ ಕುಮಾರ್ ಅವರು ಸರ್ಕಾರದ ಗಮನಕ್ಕೆ ತರದೇ ಏಕಪಕ್ಷೀಯವಾಗಿ ನಿರ್ಧಾರ ಕೈಗೊಂಡಿದ್ದಾರೆ ಎಂದು ಆರೋಪಿಸಿದರು.

ಮುಡಾದಲ್ಲಿ ನಡೆದಿರುವ ಹಗರಣ ಸಂಬಂಧ ತನಿಖೆಗಾಗಿ ರಾಜ್ಯ ಸರ್ಕಾರ ಇಬ್ಬರು ಐಎಎಸ್ ಅಧಿಕಾರಿಗಳ ನೇತೃತ್ವದಲ್ಲಿ ಸಮಿತಿ ರಚಿಸಿದ್ದು, ಒಂದು ತಿಂಗಳೊಳಗೆ ಮುಡಾದಲ್ಲಿ ನಡೆದಿರುವ ಹಗರಣದಲ್ಲಿ ಯಾರ ಪಾತ್ರವಿದೆ ಎಂಬುದು ಬಹಿರಂಗಗೊಳ್ಳಲಿದೆ. ಬಿಜೆಪಿ ಸರ್ಕಾರದ ಅವಧಿಯಲ್ಲಿಯೇ ಹೆಚ್ಚಿನ ಪ್ರಮಾಣದಲ್ಲಿ ಹಗರಣ ನಡೆದಿದ್ದು, ಅದರಲ್ಲಿ ಭಾಗಿಯಾಗಿರುವ ಬಿಜೆಪಿ ಹಾಗೂ ಜೆಡಿಎಸ್ ನಾಯಕರಿಗೆ ಸಂಬಂಧಿಸಿದ ದಾಖಲೆಗಳ ಸಂಗ್ರಹಿಸಲಾಗಿದ್ದು, ಅವುಗಳನ್ನು ಸಂಬಂಧಪಟ್ಟ ಸಮಿತಿಗೆ ನೀಡುವುದಾಗಿ ತಿಳಿಸಿದರು.

ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ನಿರ್ಧಾರ: ಮುಡಾದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಅವರ ಪತ್ನಿ ಪಾರ್ವತಮ್ಮ ಅವರ ಹೆಸರಿಗೆ ಅಕ್ರಮವಾಗಿ ನಿವೇಶನ ವರ್ಗಾವಣೆಯಾಗಿದೆ ಎಂದು ಸತ್ಯ ಮರೆಮಾಚಿ ಸುಳ್ಳು ಹೇಳುತ್ತಿರುವವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲು ಚಿಂತನೆ ನಡೆಸಲಾಗಿದೆ ಎಂದು ಎಚ್ಚರಿಕೆ ನೀಡಿದರು.

ಪುಕ್ಕಟೆ ನಿವೇಶನ ಪಡೆದಿಲ್ಲ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಹೆಸರಿಗೆ ನೀಡಿರುವ ನಿವೇಶನ ಪುಕ್ಕಟೆಯಾಗಿ ಪಡೆದಿಲ್ಲ. ಕೆಸರೆ ಗ್ರಾಮದ ಸರ್ವೆ ನಂ. 464ರಲ್ಲಿ ಇದ್ದ 3.16 ಎಕರೆ ಭೂಮಿಯನ್ನು ಮುಡಾ ದೇವನೂರು ಬಡಾವಣೆ ನಿರ್ಮಾಣಕ್ಕೆ ವಶಪಡಿಸಿಕೊಂಡು ಅದಕ್ಕೆ ಪರ್ಯಾಯವಾಗಿ ವಿಜಯನಗರದಲ್ಲಿ ನಿವೇಶನ ನೀಡಿದೆ. ಇದನ್ನು ಅರಿಯದೇ ಬಿಜೆಪಿ ನಾಯಕರು ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದರು.

ದಾನವಾಗಿ ಬಂದ ಭೂಮಿ: ಕೆಸರೆಯಲ್ಲಿದ್ದ 3.16 ಎಕರೆ ಭೂಮಿಯನ್ನು ಮುಡಾ 1997ರಲ್ಲಿ ಬಡಾವಣೆ ನಿರ್ಮಾಣಕ್ಕಾಗಿ ಭೂಸ್ವಾಧೀನಪಡಿಸಿಕೊಂಡು ನೋಟಿಫಿಕೇಷನ್ ಹೊರಡಿಸಿತ್ತು. ಆದರೆ 1998ರಲ್ಲಿ ಮುಡಾ ಸದರಿ ಭೂಮಿಯನ್ನು ಡಿ–ನೋಟಿಫಿಕೇಷನ್ ಮಾಡಿ ಭೂಸ್ವಾಧೀನ ಪ್ರಕ್ರಿಯೆಯಿಂದ ಕೈಬಿಟ್ಟಿತ್ತು. ಹಾಗಾಗಿ ಆ ಭೂಮಿಯನ್ನು ಅನ್ಯಕ್ರಾಂತ ಮಾಡಿಸಲಾಗಿತ್ತು. 2015ರಲ್ಲಿ ಈ ಭೂಮಿಯನ್ನು ಮಲ್ಲಿಕಾರ್ಜುನ ಸ್ವಾಮಿ(ಸಿಎಂ ಪತ್ನಿ ಪಾರ್ವತಮ್ಮ ಅವರ ಅಣ್ಣ) ಖರೀದಿಸುತ್ತಾರೆ. ನಂತರ 2020ರ ಅ.10ರಂದು ತಮ್ಮ ಸಹೋದರಿ ಪಾರ್ವತಮ್ಮ ಅವರಿಗೆ ಮಲ್ಲಿಕಾರ್ಜುನಸ್ವಾಮಿ ದಾನವಾಗಿ 3.16 ಎಕರೆ ಭೂಮಿಯನ್ನು ನೀಡುತ್ತಾರೆ. ಆದರೆ ಮುಡಾ ಯಾವುದೇ ನೋಟಿಸ್ ನೀಡದೆ ಮತ್ತೆ ಕೆಸರೆಯಲ್ಲಿದ್ದ ಭೂಮಿಯನ್ನು ಭೂಸ್ವಾಧೀನ ಪಡಿಸಿಕೊಂಡು ಬಡಾವಣೆಯಾಗಿ ರೂಪಿಸಿ, 42 ನಿವೇಶನ ಮಾಡಿ ಹಂಚಿದೆ.

ಸಿಎಂ ಪತ್ನಿ ಅವರಿಗೆ ಸೇರಿದ 1.48.104 ಚ.ಅಡಿ(3.16 ಎಕರೆ) ಭೂಮಿಯನ್ನು ವಶಪಡಿಸಿಕೊಂಡ ಮುಡಾ 50:50 ಅನುಪಾತದಲ್ಲಿ 82 ಸಾವಿರ ಚ.ಅಡಿ ಜಾಗ ನೀಡಬೇಕಾಗಿತ್ತು. ಆದರೆ 14 ನಿವೇಶನದಿಂದ 38.284 ಚ ಅಡಿ ಕೊಟ್ಟಿದ್ದಾರೆ. ಇದು ಭೂಮಿ ಪಡೆದಿರುವುದಕ್ಕೆ ಪರ್ಯಾಯವಾಗಿ ನೀಡಿದ ನಿವೇಶನವಾಗಿದೆ. ನ್ಯಾಯಾಲಯದ ನಿರ್ದೇಶನದ ಮೇರೆಗೆ ಮುಡಾ ನಿವೇಶನ ನೀಡಿದೆ. ಪರ್ಯಾಯ ಸೂಕ್ತ ರೀತಿ ನಿವೇಶನ ಕೊಡದಿದ್ದರೆ ಜಮೀನು ವಾಪಸ್ ಕೊಡಿ ಎಂದು ಪಾರ್ವತಮ್ಮನವರು ಪತ್ರ ಬರೆದಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಜಿ.ಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಮುಖಂಡ ಎಂ.ಶಿವಣ್ಣ, ಮಾಧ್ಯಮ ವಕ್ತಾರ ಮಹೇಶ್ ಇದ್ದರು.

ವಿದ್ಯುತ್ ಉಪ–ಕೇಂದ್ರದ ಸ್ಥಾಪನೆಗೆ ಭೂ ಮಾಲೀಕರಿಂದ ಜಮೀನು ಖರೀದಿ



ಮೈಸೂರು, ಜು.2– ಮೈಸೂರಿನ ಚಾಮರಾಜನಗರ ಬೃಹತ್ ಕಾಮಗಾರಿ ವಿಭಾಗ ವ್ಯಾಪ್ತಿಯ ಹೆಚ್.ಡಿ ಕೋಟೆ ತಾಲೂಕಿನ ಎಲಮತ್ತೂರು ಗ್ರಾಮದ ಸ್ಥಳದಲ್ಲಿ ಕೆ.ವಿ ವಿದ್ಯುತ್ ಉಪ–ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಿದ್ದು, ಕನಿಷ್ಠ 2 ಎಕರೆ ಜಮೀನು ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ಹಾಗೂ ಗ್ರಾಮದ ವ್ಯಾಪ್ತಿಯ ಅಥವಾ ಸುತ್ತಮುತ್ತ ಇರುವ ಜಮೀನನ್ನು ಭೂ ಮಾಲೀಕರುಗಳಿಂದ ನೇರವಾಗಿ ಸರ್ಕಾರವು ನಿಗದಿಪಡಿಸುವ ಬೆಲೆಯಲ್ಲಿ ಖರೀದಿ ಮಾಡಲು ಉದ್ದೇಶಿಸಲಾಗಿದೆ.

ಜಮೀನನ್ನು ಕ.ವಿ.ಪ್ರನಿ.ನಿಗೆ ಮಾರಾಟ ಮಾಡಲು ಇಚ್ಛಿಸುವ ಭೂಮಾಲೀಕರು ಕಾರ್ಯನಿರ್ವಾಹಕ ಇಂಜಿನಿಯರ್(ವಿ)ಯ ಪ್ರೀತಮ್ ಎಂ.ಎಂ ಅವರ ದೂ.ಸಂ: 9448271524, ಕಾರ್ಯನಿರ್ವಾಹಕ ಇಂಜಿನಿಯರ್(ಕಾ) ರಾಜೇಶ್ ಅವರ ದೂ.ಸಂ:9448012526, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಅಜಯ್ ಅವರ ದೂ.ಸಂ:9448391252, ಹಾಗೂ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಕಿರಣ್ ಅವರ ದೂ.ಸಂ:9480813912 ನ್ನು ಸಂಪರ್ಕಿಸಬಹುದು ಎಂದು ಚಾಮರಾಜನಗರದ ಬೃಹತ್ ಕಾಮಗಾರಿ ವಿಭಾಗದ ಕವಿಪ್ರನಿನಿಯ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಮಂಗಳವಾರ	95.50 ಅಡಿ
ಒಳಹರಿವು	9369 ಕ್ಯೂಸೆಕ್
ಹೊರಹರಿವು	518 ಕ್ಯೂಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284 ಅಡಿ
ಮಂಗಳವಾರ	2277 ಅಡಿ
ಒಳಹರಿವು	5560 ಕ್ಯೂಸೆಕ್
ಹೊರಹರಿವು	1000 ಕ್ಯೂಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಮಂಗಳವಾರ	2841.09 ಅಡಿ
ಒಳಹರಿವು	3441 ಕ್ಯೂಸೆಕ್
ಹೊರಹರಿವು	200 ಕ್ಯೂಸೆಕ್



ಹಸಿರು ನಮ್ಮ ಉಸಿರು

ಮುಂದಿನ ಒಂದು ವಾರ ಭಾರಿ ಮಳೆ



ಬೆಂಗಳೂರು: ಕರಾವಳಿಯ ಎಲ್ಲ ಜಿಲ್ಲೆಗಳು ಹಾಗೂ ದಕ್ಷಿಣ ಒಳನಾಡಿನ ಕೆಲ ಜಿಲ್ಲೆಗಳಲ್ಲಿ ಮುಂದಿನ ಒಂದು ವಾರ ಭಾರಿ ಮಳೆ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ, ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗೆ ಬುಧವಾರ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ. ಈ ಜಿಲ್ಲೆಗಳಲ್ಲಿ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಉತ್ತರ ಒಳನಾಡಿನ ಜಿಲ್ಲೆಗಳ ಕೆಲವು ಸ್ಥಳಗಳಲ್ಲಿ 30ರಿಂದ 40 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಂಭವವಿದ್ದು, ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ದಕ್ಷಿಣ ಒಳನಾಡಿನ ಬಳ್ಳಾರಿ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಹಾಸನ, ಕೋಲಾರ, ಕೊಡಗು, ಮಂಡ್ಯ, ಮೈಸೂರು, ರಾಮನಗರ, ತುಮಕೂರು ಹಾಗೂ ವಿಜಯನಗರ ಜಿಲ್ಲೆಯ ಕೆಲವೆಡೆ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ಹೇಳಿದೆ.

ಕರಾವಳಿಯಲ್ಲಿ ತೀವ್ರ ಬಿರುಗಾಳಿಯಿಂದ ಕೂಡಿದ ಹವಾಮಾನ ಇರಲಿದ್ದು, ಗಂಟೆಗೆ 35 ಕಿ.ಮೀ.ಯಿಂದ 55 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆಯಿದೆ. ಆದ್ದರಿಂದ ಮೀನುಗಾರರು ಎಚ್ಚರಿಕೆ ವಹಿಸಬೇಕು. ಸಮುದ್ರದಲ್ಲಿ ಎತ್ತರದ ಅಲೆಗಳು ಏಳುವ ಮುನ್ಸೂಚನೆ ಇರುವುದರಿಂದ ದಡದಲ್ಲಿ ಮನೋರಂಜನೆ ಚಟುವಟಿಕೆ ನಡೆಸುವಾಗ ಜಾಗರೂಕವಾಗಿ ಇರಬೇಕು ಎಂದು ಇಲಾಖೆ ತಿಳಿಸಿದೆ.

ಉತ್ತರ ಪ್ರದೇಶದ ಹತ್ರಾಸ್‌ನಲ್ಲಿ ಕಾಲ್ತುಳಿತ: 152ಕ್ಕೂ ಅಧಿಕ ಜನ ಸಾವು



ಹತ್ರಾಸ್, ಉತ್ತರಪ್ರದೇಶ, ಜು.2– ಧಾರ್ಮಿಕ ಕಾರ್ಯಕ್ರಮವೊಂದರಲ್ಲಿ ಕಾಲ್ತುಳಿತ ಸಂಭವಿಸಿ 152ಕ್ಕೂ ಅಧಿಕ ಜನ ಮೃತಪಟ್ಟಿರುವ ಘಟನೆ ಉತ್ತರ ಪ್ರದೇಶದ ಹತ್ರಾಸ್ ಜಿಲ್ಲೆಯಲ್ಲಿ ಇಂದು ನಡೆದಿದೆ. ಈ ಕುರಿತು ಸುದ್ದಿಸಂಸ್ಥೆ ಎಎನ್‌ಐ ಎಕ್ಸ್ ತಾಣದಲ್ಲಿ ಮಾಹಿತಿ ಹಂಚಿಕೊಂಡಿದೆ. ಮೃತರಲ್ಲಿ ಬಹುತೇಕರು ಮಹಿಳೆಯರು, ಮಕ್ಕಳೇ ಆಗಿದ್ದಾರೆ. ಇದುವರೆಗೆ ಐವತ್ತಕ್ಕೂ ಹೆಚ್ಚು ಮೃತದೇಹಗಳನ್ನು ಆಸ್ಪತ್ರೆಯ ಶವಾಗಾರಕ್ಕೆ ಸಾಗಿಸಲಾಗಿದೆ ಎಂದು ಹತ್ರಾಸ್ ಎಎಸ್‌ಪಿ ಮಾಹಿತಿ ನೀಡಿದ್ದಾರೆ.

ಈ ಘಟನೆ ಹತ್ರಾಸ್ ಜಿಲ್ಲೆಯ ಮೋಘಲ್‌ಘರಾಹಿ ಎಂಬ ಗ್ರಾಮದಲ್ಲಿ ನಡೆಯುತ್ತಿದ್ದ ಬಾಬಾ ಅವರ ಧಾರ್ಮಿಕ ಸತ್ಸಂಗ ಕಾರ್ಯಕ್ರಮದಲ್ಲಿ ನಡೆದಿದ್ದು, ಮೃತದೇಹಗಳನ್ನು ಆಸ್ಪತ್ರೆಗೆ ರವಾನಿಸಲಾಗಿದೆ. ಗಾಯಾಳುಗಳಿಗೆ ಇಥಹಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಸಾವಿನ ಸಂಖ್ಯೆ ಇನ್ನೂ ಹೆಚ್ಚಾಗಬಹುದು ಎನ್ನಲಾಗಿದೆ. ಘಟನೆ ಬಗ್ಗೆ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಪ್ರಧಾನಿ ಮೋದಿ ಹಾಗೂ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಆಘಾತ ವ್ಯಕ್ತಪಡಿಸಿದ್ದು, ಉತ್ತರ ಪ್ರದೇಶ ಸರ್ಕಾರದ ಮೃತರ ಕುಟುಂಬದವರಿಗೆ ತಲಾ 2 ಲಕ್ಷ ಪರಿಹಾರ ಘೋಷಣೆ ಮಾಡಿದೆ. ಸಿಎಂ ಯೋಗಿ ಅವರು ಪೂರ್ವನಿರ್ಧರಿತ ಕಾರ್ಯಕ್ರಮಗಳನ್ನು ಬದಿಗೊತ್ತಿ ಹತ್ರಾಸ್‌ಗೆ ತೆರಳಲಿದ್ದಾರೆ ಎಂದು ವರದಿಯಾಗಿದೆ.

ಉತ್ತರ ಪ್ರದೇಶದಲ್ಲಿ ನಾವು 80ಕ್ಕೆ 80 ಸೀಟು ಗೆದ್ದರೂ ಇವಿಎಂ ನಂಬುವುದಿಲ್ಲ



ನವದೆಹಲಿ, ಜು.2– ಉತ್ತರ ಪ್ರದೇಶದ ಎಲ್ಲಾ 80 ಲೋಕಸಭಾ ಸ್ಥಾನಗಳನ್ನು ನಾವೇ ಗೆದ್ದರೂ ಇವಿಎಂಗಳನ್ನು ನಂಬುವುದಿಲ್ಲ ಎಂದು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಮಂಗಳವಾರ ಹೇಳಿದ್ದಾರೆ.

ಇಂದು ಲೋಕಸಭೆಯಲ್ಲಿ ರಾಷ್ಟ್ರಪತಿಗಳ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅಖಿಲೇಶ್ ಯಾದವ್, ಇಂಡಿಯಾ ಮೈತ್ರಿಕೂಟ ಅಧಿಕಾರಕ್ಕೆ ಬಂದ ನಂತರ ಇವಿಎಂಗಳನ್ನು ತೆಗೆದುಹಾಕುತ್ತೇವೆ ಎಂದು ಹೇಳಿದರು. ಮಾದರಿ ನೀತಿ ಸಂಹಿತೆ ಜಾರಿಯಾದಾಗ ಸರ್ಕಾರ ಮತ್ತು ಆಯೋಗವು ಕೆಲವರ ಪರವಾಗಿ ಇತ್ತು. ನಾನು ಆ ಬಗ್ಗೆ ಹೆಚ್ಚಿನ ವಿವರಗಳನ್ನು ನೀಡಲು ಬಯಸುವುದಿಲ್ಲ. ಚುನಾವಣಾ ಆಯೋಗದ ಬಗ್ಗೆ ಎಲ್ಲೋ ಒಂದು ಪ್ರಶ್ನೆ ಹುಟ್ಟುಹಾಕಿದೆ ಎಂದು ಯಾದವ್ ಹೇಳಿದರು.

ನಾನು ಈ ಮುಂಚೆಯೂ ಇವಿಎಂಗಳನ್ನು ನಂಬಲಿಲ್ಲ, ಈಗಲೂ ನಾನು ನಂಬುವುದಿಲ್ಲ. ಉತ್ತರ ಪ್ರದೇಶದಲ್ಲಿ ನಾವು ಎಲ್ಲಾ 80 ಸ್ಥಾನಗಳನ್ನು ಗೆದ್ದರೂ ನಾನು ಇವಿಎಂಗಳನ್ನು ನಂಬುವುದಿಲ್ಲ" ಎಂದು ಮಾಜಿ ಸಿಎಂ ಹೇಳಿದರು. ಇವಿಎಂಗಳ ಸಮಸ್ಯೆ ಇನ್ನೂ ಪರಿಹಾರ ಸಿಕ್ಕಿಲ್ಲ ಮತ್ತು ನಾವು ಸಮಾಜವಾದಿಗಳು ಅದರ ಬಗ್ಗೆ ಅಚಲವಾಗಿದ್ದೇವೆ" ಎಂದು ಯಾದವ್ ಹೇಳಿದರು. ಈ ವೇಳೆ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ಚುನಾವಣಾ ಆಯೋಗದ ನಿಷ್ಪಕ್ಷಪಾತದ ಬಗ್ಗೆ ಪ್ರಶ್ನೆಗಳನ್ನು ಎತ್ತಿದ್ದರೆ ಉತ್ತಮ ಎಂದು ಹೇಳಿದರು.

ನೀವು ಯಾರನ್ನಾದ್ರೂ ಸಿಎಂ, ಡಿಸಿಎಂ ಮಾಡಿಕೊಳ್ಳಿ; ನಮಗೆ ಮೀಸಲಾತಿ ಕೊಡಿ



ಬಾಗಲಕೋಟೆ, ಜು.2– ಸರ್ಕಾರದವರು ನೀವು ಯಾರನ್ನಾದರೂ ಮುಖ್ಯಮಂತ್ರಿ ಮಾಡಿಕೊಳ್ಳಿ, ಯಾರನ್ನಾದ್ರೂ ಡಿಸಿಎಂ ಮಾಡಿಕೊಳ್ಳಿ ಆದ್ರೆ ನಮ್ಮ ಸಮುದಾಯದ ಮಕ್ಕಳಿಗೆ, ವಿದ್ಯಾರ್ಥಿಗಳಿಗೆ ಮೀಸಲಾತಿ ಕೊಡಿ ಎಂದು ಕೂಡಲಸಂಗಮದ ಪಂಚಮಸಾಲಿ ಪೀಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು. ಮುಖ್ಯಮಂತ್ರಿ ಬದಲಾವಣೆ ವಿಚಾರ ಚರ್ಚೆ ಬೆನ್ನಲ್ಲೆ ಬಾಗಲಕೋಟೆ ಜಿಲ್ಲೆಯ ಇಳಕಲ್ ನಗರದಲ್ಲಿಂದು ಮಾಧ್ಯಮಗಳೊಂದಿಗೆ ಮಾತನಾಡಿದ ಶ್ರೀಗಳು, ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ಕೊಟ್ಟು ಪುಣ್ಯಕಟ್ಟಿಕೊಳ್ಳಿ ಎಂದರು.

ಧರ್ಮಗುರುಗಳಾದವರು ಸರ್ಕಾರದ ಆಂತರಿಕ ವಿಚಾರದಲ್ಲಿ ಮೂಗು ತೂರಿಸಬಾರದು. ಪಕ್ಷದ ವರಿಷ್ಠರು ಏನಾದರೂ ಕೇಳಿದರೆ ಸಲಹೆಗಳನ್ನು ಕೊಡಬೇಕು. ಯಾರನ್ನ ಸಿಎಂ, ಡಿಸಿಎಂ ಮಾಡಬೇಕೆನ್ನೋದು ವರಿಷ್ಠರು, ಶಾಸಕರಿಗೆ ಬಿಟ್ಟಿದ್ದು. ಅವರಾಗಿಯೇ ನಮ್ಮನ್ನ ಕೇಳಿದರೆ ಸ್ವಾಮೀಜಿಗಳಾದವರು, ಧರ್ಮಗುರುಗಳಾದ ನಾವು ಸಲಹೆ ಕೊಡಬೇಕು. ಆದರೆ ಸರ್ಕಾರದ ಆಂತರಿಕ ವಿಚಾರದಲ್ಲಿ ಕೈ ಹಾಕಬಾರದು ಎಂದರು. ನಾವು ಮೀಸಲಾತಿಗಾಗಿ ಪಾದಯಾತ್ರೆ ಆರಂಭಿಸುವ ಮೊದಲು. ನಮ್ಮವರು ಮಂತ್ರಿ ಆಗಬೇಕು, ಮುಖ್ಯಮಂತ್ರಿ ಅಗಬೇಕು ಅಂತ ಹೇಳಿದ್ದೆವು. ಆದರೆ ಈಗ ನಮಗೆ ಮಂತ್ರಿ, ಮುಖ್ಯಮಂತ್ರಿಗಿಂತ ಮೀಸಲಾತಿ ಮುಖ್ಯವಾಗಿದೆ ಎಂದರು.

87ನೇ ಕನ್ನಡ ಸಾಹಿತ್ಯ ಸಮ್ಮೇಳನ ಮಹಾಪೋಷಕರಾಗಿ ನಿರ್ಮಲಾನಂದನಾಥ ಸ್ವಾಮೀಜಿ



ಬೆಂಗಳೂರು: ಮಂಡ್ಯದಲ್ಲಿ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಮಹಾಪೋಷಕರಾಗಿ ಆದಿ ಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ನಿಯೋಜನೆಗೊಂಡಿದ್ದಾರೆ.

ಡಿಸೆಂಬರ್ 20, 21 ಹಾಗೂ 22ರಂದು ಸಮ್ಮೇಳನ ನಡೆಯಲಿದೆ. ಈ ಸಂಬಂಧ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಹಾಗೂ ಪದಾಧಿಕಾರಿಗಳು, ಮಂಡ್ಯದ ಜಿಲ್ಲಾಧಿಕಾರಿ ಕುಮಾರ ಅವರನ್ನು ಒಳಗೊಂಡ ನಿಯೋಗವು ನಿರ್ಮಲಾನಂದನಾಥ ಸ್ವಾಮೀಜಿ ಅವರನ್ನು ಭೇಟಿ ಮಾಡಿ, ಸಮ್ಮೇಳನದ ಮಹಾಪೋಷಕರಾಗುವಂತೆ ಮನವಿ ಮಾಡಿಕೊಂಡಿದ್ದರು. ಇದಕ್ಕೆ ಸ್ವಾಮೀಜಿ ಸಮ್ಮತಿ ಸೂಚಿಸಿದ್ದಾರೆ. ಇದು ಕನ್ನಡಿಗರೆಲ್ಲರ ಸಮ್ಮೇಳನ. ನಮ್ಮದು ಕನ್ನಡ ಮಠವಾಗಿದ್ದು, ಭವ್ಯ ಇತಿಹಾಸ ಹೊಂದಿದೆ. ಕನ್ನಡ ನಾಡು–ನುಡಿ–ಸಂಸ್ಕೃತಿಯನ್ನು ಕಾಪಾಡಿಕೊಂಡು ಬಂದಿದೆ. ಇಲ್ಲಿ ನಡೆಯುವ ಕಾರ್ಯಕ್ರಮಗಳು ಕನ್ನಡದ ಅಸ್ಮಿತೆಯನ್ನು ಕಾಪಾಡುವ ಉದ್ದೇಶವನ್ನು ಹೊಂದಿದೆ. ಸಮ್ಮೇಳನಕ್ಕೆ ಬೆನ್ನೆಲುಬಾಗಿ ನಿಲ್ಲಲಾಗುವುದು ಎಂದು ನಿರ್ಮಲಾನಂದನಾಥ ಸ್ವಾಮೀಜಿ ತಿಳಿಸಿದ್ದಾರೆ.

ಮಂಡ್ಯದಲ್ಲಿ 30 ವರ್ಷಗಳ ನಂತರ ಸಮ್ಮೇಳನವನ್ನು ಆಯೋಜಿಸಲಾಗಿದೆ. ಮಂಡ್ಯದ ಜನರು ದೇಶ–ವಿದೇಶಗಳಲ್ಲಿ ನೆಲೆಸಿದ್ದು, ಅವರು ಸಮ್ಮೇಳನದಲ್ಲಿ ಭಾಗಿಯಾಗುವ ಉತ್ಸಾಹವನ್ನು ಹಂಚಿಕೊಂಡಿದ್ದಾರೆ. ಈ ಸಮ್ಮೇಳನದ ಮಹಾಪೋಷಕರಾಗಲು ಸ್ವಾಮೀಜಿ ಒಪ್ಪಿರುವುದರಿಂದ ಸಮ್ಮೇಳನವು ಐತಿಹಾಸಿಕವಾಗಿ ನಡೆಯುವ ವಿಶ್ವಾಸವಿದೆ ಎಂದು ಮಹೇಶ ಜೋಶಿ ಹೇಳಿದ್ದಾರೆ.

ಬಂಧನ ಪ್ರಶ್ನಿಸಿ ಕೇಜ್ರಿವಾಲ್ ಅರ್ಜಿ: ಸಿಬಿಐಗೆ ದೆಹಲಿ ಹೈಕೋರ್ಟ್ ನೋಟಿಸ್; ಜು.17ಕ್ಕೆ ವಿಚಾರಣೆ ಮುಂದೂಡಿಕೆ



ನವದೆಹಲಿ, ಜು.2– ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಭ್ರಷ್ಟಾಚಾರ ಪ್ರಕರಣದಲ್ಲಿ ತಮ್ಮ ಬಂಧನವನ್ನು ಪ್ರಶ್ನಿಸಿ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಿದ ದೆಹಲಿ ಹೈಕೋರ್ಟ್, ಈ ಸಂಬಂಧ ಮಂಗಳವಾರ ಸಿಬಿಐಗೆ ನೋಟಿಸ್ ಜಾರಿ ಮಾಡಿದೆ.

ನ್ಯಾಯಮೂರ್ತಿ ನೀನಾ ಬನ್ಸಾಲ್ ಕೃಷ್ಣ ಅವರು ಕೇಂದ್ರೀಯ ತನಿಖಾ ಸಂಸ್ಥೆ(ಸಿಬಿಐ)ಗೆ ನೋಟಿಸ್ ಜಾರಿ ಮಾಡಿದ್ದು, ಏಳು ದಿನಗಳೊಳಗೆ ಉತ್ತರ ನೀಡುವಂತೆ ಸೂಚಿಸಿದ್ದಾರೆ.

ಯಾವುದಾದರೂ ಮರುಪರಿಶೀಲನೆ ಇದ್ದರೆ ಎರಡು ದಿನಗಳಲ್ಲಿ ಮನವಿ ಸಲ್ಲಿಸಬಹುದು ಎಂದು ಹೈಕೋರ್ಟ್, ಕೇಜ್ರಿವಾಲ್ ಅವರ ವಕೀಲರು ಹೇಳಿ, ವಿಚಾರಣೆಯನ್ನು ಜುಲೈ 17ಕ್ಕೆ ಮುಂದೂಡಿದೆ.

ಮಾಲೀಕನ ಮನೆಯಲ್ಲಿ 3.60 ಲಕ್ಷ ಮೌಲ್ಯದ ಚಿನ್ನಾಭರಣ ದೋಚಿದ್ದ ಕೆಲಸಗಾರ!

ಮೈಸೂರು, ಜು.2(ಎಸ್‌ಬಿಡಿ)– ಕೆಲಸ ನೀಡಿದ್ದ ಮಾಲೀಕನ ಮನೆಯಲ್ಲೇ ಚಿನ್ನಾಭರಣ ದೋಚಿದ್ದ ಖದೀಮನನ್ನು ಮೈಸೂರಿನ ಉದಯಗಿರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನಗರದ ಕೆ.ಎನ್.ಪುರದ ನಿವಾಸಿ ಸೆಲ್ವರಾಜ್ ಮನೆಯಲ್ಲಿ ಕಳ್ಳತನ ಮಾಡಿದ್ದ ಆರೋಪಿಯನ್ನು ಬಂಧಿಸಿ, ಸುಮಾರು 3.60 ಲಕ್ಷ ರೂ. ಮೌಲ್ಯದ 164 ಗ್ರಾಂ ಚಿನ್ನಾಭರಣ ಹಾಗೂ 50 ಸಾವಿರ ರೂ. ಹಣವನ್ನು ವಶಪಡಿಸಿಕೊಳ್ಳಲಾಗಿದೆ.


ಸೆಲ್ವರಾಜ್ ಅಂಗಡಿಯಲ್ಲಿ ಮೂರ್‍ನಾಲ್ಕು ಮಂದಿ ಕೆಲಸಗಾರರಿದ್ದು, ಜೂ.20ರಂದು ಒಬ್ಬ ಮಾತ್ರ ಕೆಲಸಕ್ಕೆ ಬಂದಿದ್ದ. ಅಂದು ಮಧ್ಯಾಹ್ನ ಸೆಲ್ವರಾಜ್ ಪುತ್ರ ಕೆಲಸಗಾರನೊಂದಿಗೆ ಮನೆಗೆ ಹೋಗಿ ಊಟ ಮಾಡಿಕೊಂಡು ವಾಪಸ್ ಅಂಗಡಿಗೆ ಬಂದಿದ್ದ. ನಂತರ ಸೆಲ್ವರಾಜ್ ಮನೆಗೆ ಹೋಗಿ ಊಟ ಮಾಡಿದ ನಂತರ ಪತ್ನಿಯೊಂದಿಗೆ ಮನೆಗೆ ಬೀಗ ಹಾಕಿಕೊಂಡು ಅಂಗಡಿಗೆ ಬಂದಿದ್ದರು. ರಾತ್ರಿ 9 ಗಂಟೆಗೆ ಅಂಗಡಿ ಬಂದ್ ಮಾಡಿ, ಮನೆಗೆ ಹೋದಾಗ ಮುಂಬಾಗಿಲು ತೆಗೆದಿತ್ತು. ಒಳಹೋಗಿ ನೋಡಿದಾಗ ಚಿನ್ನಾಭರಣವಿಟ್ಟಿದ್ದ ಬಾಕ್ಸ್‌ಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಪರಿಶೀಲಿಸಿದಾಗ 164 ಗ್ರಾಂ ಚಿನ್ನಾಭರಣ ಹಾಗೂ 90 ಸಾವಿರ ರೂ. ಹಣ ಕಳ್ಳತನವಾಗಿರುವುದು ಗೊತ್ತಾಗಿತ್ತು. ಈ ಸಂಬಂಧ ಸೆಲ್ವರಾಜ್ ನೀಡಿದ ದೂರಿನನ್ವಯ ಉದಯಗಿರಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಖದೀಮನನ್ನು ಪತ್ತೆ ಮಾಡಿ, ಬಂಧಿಸಿದ್ದಾರೆ. ನಗರ ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಎಸ್. ಜಾಹ್ನವಿ ಮಾರ್ಗದರ್ಶನ, ದೇವರಾಜ ಉಪವಿಭಾಗದ ಎಸಿಪಿ ಶಾಂತಮಲ್ಲಪ್ಪ ಅವರ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಉದಯಗಿರಿ ಇನ್ಸ್‌ಪೆಕ್ಟರ್ ಕೆ.ಎನ್. ಸುಧಾಕರ್, ಸಬ್‌ಇನ್ಸ್‌ಪೆಕ್ಟರ್‌ಗಳಾದ ಸಿ.ಎನ್.ಸುನೀಲ್, ಹೆಚ್.ಎಂ. ಆನಂದ್, ಬಿ.ಜಿ.ನಾಗರಾಜು ನಾಯ್ಕ, ಸಿ.ಎಂ.ರೂಪೇಶ್, ಸಿಬ್ಬಂದಿ ಸಿದ್ಧಿಖಿ ಅಹಮ್ಮದ್, ಪ್ರಕಾಶ್, ಮಲ್ಲಿಕಾರ್ಜುನ್ ಚೌಗುಲೆ, ಸಂತೋಷ್ ಪವಾರ್, ಸಮೀರ್ ಪಟೇಲ್ ಬಿರಾದಾರ ಮತ್ತು ನಾಜಿಯಾ ಷರೀಫ್ ಪಾಲ್ಗೊಂಡಿದ್ದರು.

ಸಾರ್ವಜನಿಕ ಪ್ರಕಟಣೆ

ಮೈಸೂರು ಸಿಟಿ, ಚಾಮರಾಜ ಮೊಹಲ್ಲಾ, ಸೀತಾವಿಲಾಸ ರಸ್ತೆ, ಮನೆ ನಂ. 10, ಹೊಸ ಸಿಟಿಎಸ್–12 ಒಟ್ಟು 654 3/4 ಚದರ ಅಡಿ ನಿವೇಶನ ಮತ್ತು ಇದರಲ್ಲಿರುವ ಆರ್.ಸಿ.ಸಿ ವಾಣಿಜ್ಯ ಮಳಿಗೆಗಳು ವಿದ್ಯುತ್, ನೀರಿನ ಹಾಗೂ ಸ್ಯಾನಿಟರಿ ಸೌಲಭ್ಯವುಳ್ಳ ಸ್ವತ್ತು ಹೆಚ್.ಎಸ್. ಶಿವಲಿಂಗಪ್ಪಶೆಟ್ಟಿ ಮತ್ತು ಹೆಂಡತಿ ಮಕ್ಕಳಿಂದ ಇಂದಿನ ಮಾರುಕಟ್ಟೆ ಬೆಲೆಯಲ್ಲಿ ಮೈಸೂರು ಸಿಟಿ, ಸಿದ್ಧಾರ್ಥನಗರ, 2ನೇ ಹಂತ, ನೀತಿಮಾರ್ಗ, 15ನೇ ಮುಖ್ಯರಸ್ತೆ, 202ನೇ ಮನೆಯಲ್ಲಿರುವ ಶ್ರೀ ಬಿ. ಎಸ್. ವೀರಪ್ಪ ರವರ ಮಗ ಸುಮಾರು 38 ವರ್ಷ ವಯಸ್ಸಿನ ಶ್ರೀ ಬಿ.ವಿ. ರೇಣುಕಾಸ್ವಾಮಿ ರವರು ಕ್ರಯಕ್ಕೆ ಪಡೆಯಲು ಇಚ್ಛಿಸಿರುತ್ತಾರೆ.

ಈ ಸ್ವತ್ತಿಗೆ ಸಂಬಂಧಿಸಿದಂತೆ ವಾರಸುದಾರರು, ಹಕ್ಕುದಾರರು, ಹಿತಾಸಕ್ತಿವುಳ್ಳವರು, ಇದ್ದಲ್ಲಿ 7 ದಿನಗಳ ಒಳಗಾಗಿ ದಾಖಲೆ ಸಹಿತ ಬಿ. ವಿ. ರೇಣುಕಾಸ್ವಾಮಿ ವಿಳಾಸಕ್ಕೆ ಲಿಖಿತ ರೂಪದಲ್ಲಿ ಖುದ್ದಾಗಿ ತಕರಾರು ಸಲ್ಲಿಸುವುದು. ನಂತರ ಬಂದ ಅರ್ಜಿಗಳಿಗೆ ಮಾನ್ಯತೆ ಇರುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸುತ್ತೇವೆ.

ಸಹಿ/– ಸತೀಶ್‌ಕುಮಾರ್.ಎಸ್,
ಕೆ.ಎ.ಆರ್ 203/2022, ವಕೀಲರು,
47, 17ನೇ ಮೇನ್, 2ನೇ ಮಹಡಿ, ಕಾಮಾಕ್ಷಿ ಆಸ್ಪತ್ರೆ ರಸ್ತೆ, ಸರಸ್ವತಿಪುರಂ, ಮೈಸೂರು–09
ಮೊ: 9620168640/9739234558
ದಿನಾಂಕ: 02/07/2024, ಸ್ಥಳ: ಮೈಸೂರು



ಪಿಎಂ ಶ್ರೀ ಕೇಂದ್ರಿಯ ವಿದ್ಯಾಲಯ, ಮಾದಾಪುರ ಪೋಸ್ಟ್, ಚಾಮರಾಜನಗರ-571313
पीएमश्री केंद्रीय विद्यालय, मादापुरा पोस्ट,चामराजनगर-५७१३१३
PM SHRI KENDRIYA VIDYALAYA CHAMARAJANAGAR
Madapura Post, Chamarajanagar, - 571313 (Karnataka)
E-mail: kvchamarajanagara@gmail.com, Phone: 08226-297179
Website: https://chamrajnagar.kvs.ac.in
Azadi Ka Amrit Mahotsav

KV CODE: 2284 **Station Code**: 772 **Region Code**: 02 **CBSE Aff. No.** 800041 **UDISE CODE:** 29270127303

F.13.350/KVC/2024-25/ दिनांक / Date: 01.07.2024

ನೇರ ಸಂದರ್ಶನ

ಆಸಕ್ತ ಮತ್ತು ಅರ್ಹ ಅಭ್ಯರ್ಥಿಗಳು 2024-25 ಶೈಕ್ಷಣಿಕ ವರ್ಷಕ್ಕೆ ಸಂಪೂರ್ಣವಾಗಿ ಒಪ್ಪಂದದ ಆಧಾರದ ಮೇಲೆ ಈ ಕೆಳಗಿನ ಹುದ್ದೆಗೆ ಸಂದರ್ಶನಕ್ಕಾಗಿ ಹಾಜರಾಗಬಹುದು.

	ಸಂದರ್ಶನದ ದಿನಾಂಕ
ಪದವೀಧರ ಶಿಕ್ಷಕ – ಸಂಸ್ಕೃತ(TGT Sanskrit), ಕಂಪ್ಯೂಟರ್ ಶಿಕ್ಷಕ(Computer Instructor)	11/07/2024

ಸೂಚನೆ: ದಾಖಲೆಗಳ ಪರಿಶೀಲನೆ ಮತ್ತು ಸಲ್ಲಿಕೆ - ಮೇಲಿನ ದಿನಾಂಕದಂದು ವಿದ್ಯಾಲಯ ಆವರಣದಲ್ಲಿ 08:00 AM ರಿಂದ 09: 30 AM ವರೆಗೆ.

ಅರ್ಹತೆ, ಬಯೋ-ಡೇಟಾ ಫಾರ್ಮ್ ಇತ್ಯಾದಿಗಳಿಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್‌ಗೆ ಲಾಗ್ ಇನ್ ಮಾಡಿ: https://chamrajnagar.kvs.ac.in

ಹುದ್ದೆಗಳು ಸಂಪೂರ್ಣವಾಗಿ ಕೆ ವಿ ಎಸ್ ನ ಶರತ್ತು ಮತ್ತು ನಿಯಮಗಳಿಗೆ ಒಳಪಟ್ಟಿದೆ . ಖಾಯಂ ಉದ್ಯೋಗಿ ಹುದ್ದೆಗೆ ಸೇರಿದಾಗ ಗುತ್ತಿಗೆ ಶಿಕ್ಷಕರನ್ನು ತಕ್ಷಣವೇ ಬಿಡುಗಡೆ ಮಾಡಲಾಗುತ್ತದೆ.

ಅರ್ಜಿಯನ್ನು ಡೌನ್‌ಲೋಡ್ ಮಾಡಲು, ಶೈಕ್ಷಣಿಕ ಅರ್ಹತೆ ಮತ್ತು ಇತರ ವಿವರಗಳಿಗಾಗಿ ವೆಬ್‌ಸೈಟ್: https://chamrajnagar.kvs.ac.in ಗೆ ಭೇಟಿ ನೀಡಿ.

ಸರಿಯಾಗಿ ಭರ್ತಿ ಮಾಡಿದ ಅರ್ಜಿ ನಮೂನೆ ಜೊತೆಗೆ ದಾಖಲೆಗಳ ಮೂಲ ಮತ್ತು ಜೆರಾಕ್ಸ್ ಪ್ರತಿಗಳನ್ನು ಸಂದರ್ಶನದ ದಿನಾಂಕದಂದು ತರಬೇಕು.

ಸಂದರ್ಶನಕ್ಕೆ ಹಾಜರಾಗಲು ಅಭ್ಯರ್ಥಿಗಳಿಗೆ ಯಾವುದೇ ಪ್ರಯಾಣ ಭತ್ಯೆ ಮತ್ತು ತುಟ್ಟಿ ಭತ್ಯೆ ಪಾವತಿಸಲಾಗುವುದಿಲ್ಲ..

ಪ್ರಾಂಶುಪಾಲರು